Mr. SPEAKER.—There is no practice to read them here. The petition stands referred to the Committee on Petition.

Hon. Members are aware that today is the last day on which debate has to be concluded. I request the hon. Members to co-operate with the Chair in order to see that the debate is completed today. Hon. Chief Minister may take an hour for replying to the debate. Three hours time is therefore available for debate. Members should not take more than ten minutes at the maximum.

Motion to consider the situation arising out of the move of the Central Government in respect of the Mahajan Commission Report deviating for the Recommendations to the detriment of the Mysore State.

(Debate continued)

ಶ್ರೀ ಹೆಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ, ಈ ವಿಷಯ ಬಹಳ ಮಹತ್ತರವಾದುದು ಎನ್ನುವ ದೃಷ್ಟಿಯಿಂದ ಬಡ್ಜೆಟ್ಟಿನ ಮೇಲಿನ ಚರ್ಚೆಯನ್ನೂ ಬದಿಗೊತ್ತಿ ಇದನ್ನು ತೆಗೆದುಕೊಂಡಿದ್ದಾಗಿದೆ. ಇಂತಹ ವಿಚಾರದಲ್ಲಿ 5 ನಿಮಿಷ, ಇಲ್ಲ ಹತ್ತು ನಿಮಿಷ ಮಾತನಾಡಿ ಎಂದು ಹೇಳಿದರೆ ನನಗಂತೂ ಅದು ಅರ್ಥವಾಗುವುದಿಲ್ಲ. ಈ ವಿಷಯದ ಮೇಲೆ ಮಾತಾನಾಡುವಾಗ ಅವಕಾಶ ಇರಬೇಕು, ಬೇಕಾದರೆ ನಿಮ್ಮ ಬಡ್ಜೆಟ್ಟು ಡಿಮ್ಯಾಂಡುಗಳ ಬಗ್ಗೆ ಚರ್ಚೆಗೆ ಅವಕಾಶವನ್ನು ಕಡಿಮೆ ಮಾಡಿ. ಇಲ್ಲವೇ ಎಲ್ಲಾ ಡಿಮ್ಯಾಂಡುಗಳನ್ನೂ ಬೇಕಾದರೆ ಗಿಲೆಟಿನ್ ಮಾಡಿ ಪಾಸು ಮಾಡಿಕೊಳ್ಳಬಹುದು. ನಾನು ಹೇಳುವುದು ಇದರ ಮೇಲೆ ಮಾತಾಡುವಾಗ ಸರಿಯಾಗಿದೆ ಇಲ್ಲ ಎಂದು ಹೇಳುವುದಲ್ಲ. ಈ ಸಭೆಯಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ತೀರ್ಮಾನವಾಗಬೇಕು. ಈ ವಿಷಯವನ್ನು ನಾವೇ ನೋಡುವುದಲ್ಲ. ಇತರ ಪ್ರಾಂತಗಳವರು ಯಾವ ರೀತಿ ಇಲ್ಲಿ ತೀರ್ಮಾನ ಮಾಡುತ್ತಾರೆ ಎನ್ನುವುದನ್ನು ತಿಳಿಯಲು ಕಾತುರರಾಗಿದ್ದಾರೆ. ಈ ಸಭೆಯಲ್ಲಿ ಏನು ಅಭಿಪ್ರಾಯ ಬರುತ್ತದೆ ಅದನ್ನು ದೇಶದ ಎಲ್ಲ ಜನರೂ ತಿಳಿಯಲು ಆತುರರಾಗಿದ್ದಾರೆ. ಸದಸ್ಯರು ಇಲ್ಲಿ ಮಾತಾಡುವಾಗ ಅವರ ಸೆಲ್ಪ್ ಸ್ಯಾಟಿಸ್‌ಫ್ಯಾಕ್ಷನ್ ಆಗುವ ಹಾಗೆ ಮಾತಾಡಲು ಅವಕಾಶ ಇರಬೇಕು. ನಮ್ಮ ಪಕ್ಷದವರಿಗೇ ಆಗಲೀ ಇಲ್ಲ ಬೇರೆ ಪಕ್ಷದವರಿಗೇ ಆಗಲಿ ಅವರು ಮಾತಾಡಲು ಸಾಕಷ್ಟು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

Mr. SPEAKER.—Hon. Member must see that everything has got to be done within the limited time at our disposal. We started the debate with the object of completing it within one day. Now today is the third day and the debate is prolonged like that. The House yesterday agreed that the debate should be over today and there should be sanctity to the understanding arrived at. If hon. Members were to avoid repetition and speak relevantly, I do not think even 10 minutes are needed.

[MR. DEPUTY SPEAKER in the Chair]

† ಶ್ರೀ ಎರ್. ಶ್ರೀಕಂಠಯ್ಯ (ನಂಜನಗೂಡು).—ಸ್ವಾಮಿ, ಕಾಲ ಅತಿ ಕಡಿಮೆ ಇರುವ ಕಾಲದಲ್ಲಿ ಇಷ್ಟು ಮಹತ್ತರವಾದ ವಿಷಯವನ್ನು ಹತ್ತು ನಿಮಿಷಗಳಲ್ಲಿ ಮಾತಾಡಬೇಕು ಎಂದರೆ ಅದು ಬಹು ಕಷ್ಟದ ಕೆಲಸ. ಆದರೂ ಈ ಸಭೆಯ ಅಧ್ಯಕ್ಷರ ಆಜ್ಞೆಗೆ ಒಳಪಟ್ಟು ಸಾಧ್ಯವಾದ ಮಟ್ಟಿಗೂ ಇರುವ ಕಾಲದಲ್ಲಿ ನಾನು ಇಲ್ಲಿ ಮಾತನಾಡಲು ಪ್ರಯತ್ನಪಡುತ್ತೇನೆ. ಇದರ ಚಾರಿತ್ರಿಕ ಹಿನ್ನೆಲೆ ಬಗ್ಗೆ ಈಗ ಮಾತಾಡುವುದು ಅನವಶ್ಯಕ. ಗಡಿಯ ಹಿಂದೆ ಕೆಲವು ವಿಷಯಗಳು ನನ್ನ

(ಶ್ರೀ ಎಲ್. ಶ್ರೀಕಂಠಯ್ಯ)

ಕಣ್ಣಿಗೆ ಕಾಣುತ್ತಿವೆ. ಮೊಟ್ಟಮೊದಲು ಈ ಮಹಾಜನ್ ಕಮಿಷನ್ ವರದಿ ಬಂದು ಇಲ್ಲಿಗೆ ಎರಡು ವರ್ಷಗಳಾದವು. ಇದಕ್ಕೇನು ಕಾರಣವೋ ಏನೋ, ಇವರಲ್ಲಿ ರಾಜಕೀಯ ಎಷ್ಟುಮಟ್ಟಿಗೆ ಆಗಿದೆ ಎನ್ನುವುದನ್ನು ನಾನು ಮುಂದೆ ವಿವರಿಸುತ್ತೇನೆ. ಮಹಾಜನ್ ವರದಿಯನ್ನು ಇನ್ನೂ ಕೇಂದ್ರ ಸರಕಾರ ಒಪ್ಪಿಲ್ಲ. ಅವರು ಏತಕ್ಕೆ ಒಪ್ಪಲಿಲ್ಲ ಮತ್ತು ಆ ಕಮಿಷನ್ನಿನವರು ಕೊಟ್ಟಿರುವ ಶಿಫಾರಸು ಗಳಲ್ಲಿ ಏನಾದರೂ ಲೋಪದೋಷಗಳಿವೆಯೇ ಇಲ್ಲವೇ ಅಥವಾ ಇದನ್ನು ಒಪ್ಪುವುದಕ್ಕೆ ಸಾಧ್ಯವೇ ಇಲ್ಲ ಎಂದು ಇದುವರೆಗೂ ನಮ್ಮ ಮೈಸೂರು ಸರಕಾರಕ್ಕೆ ಖಚಿತವಾಗಿ ಅವರ ಅಭಿಪ್ರಾಯ ಕೊಟ್ಟಿ ದ್ದಾರೆಯೇ ಎಂದರೆ ನಾನು ತಿಳಿದುಕೊಂಡಿರುವ ಮಟ್ಟಿಗೆ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಇದು ಒಂದು ಸ್ಥೂಲವಾದ ವಿಷಯ. ಇದಾದ ಮೇಲೆ ಇದೇ ಮೈಸೂರು ಅಸೆಂಬ್ಲಿಯಲ್ಲಿ 1967ನೇ ಡಿಸೆಂಬರು ತಿಂಗಳಲ್ಲಿ ಇದೇ ಮಹಾಜನ್ ಕಮಿಷನ್ ರಿಪೋರ್ಟಿನ ಮೇಲೆ ಚರ್ಚೆಯಾಗಿ ಈ ಸಭೆಯ ಎಲ್ಲ ಸದಸ್ಯರೂ ಒಮ್ಮತದಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ಒಂದು ಠರಾವು ತಂದು ಪೋಟು ಪಡೆದಾಗ, ಈ ಠರಾವಿನ ಬಗ್ಗೆ ಮಹಾರಾಷ್ಟ್ರ ಏಕೀಕರಣದ ಸಮಿತಿ ಸದಸ್ಯರು ನಾಲ್ಕು ಜನ ವಿರೋ ಧವಾಗಿ ಮತ ಇತ್ತರು ಮತ್ತು ನಾನು ಮಾತ್ರ ಆಗ ನ್ಯೂಟ್ರಲ್ ಆಗಿದ್ದೆ. ಬಹುಶಃ ನಾನು ಆಗ ನ್ಯೂಟ್ರಲ್ ಆಗಿದ್ದು ಮತ್ತು ಆಗ ನಾನು ಭಾಷಣ ಮಾಡಿರುವ ಅಂಶಗಳನ್ನು ಇಂದು ನಾವು ನೋಡುವುದಾದರೆ ನಾನು ಹಿಂದೆ ಏನು ಶಂಕೆಗಳನ್ನು ಹೇಳಿದ್ದೆನೋ ಅವೆಲ್ಲಾ ಇಂದು ಪೂರ್ತಿ ಯಾಗಿ ನಿಜ ಎಂದು ಹೇಳಬಹುದು. ಅದು ಇಂದಿನ ವ್ಯವಹಾರಗಳನ್ನು ನೋಡುವುದಾದರೆ ಚೆನ್ನಾಗಿ ಗೊತ್ತಾಗುತ್ತದೆ. ಮಹಾರಾಷ್ಟ್ರದ ಅಸೆಂಬ್ಲಿಯಲ್ಲೂ ಇಂತಹ ಒಂದು ಠರಾವು ಮಾಡಿದರು. ಅವರು ಅಲ್ಲಿನ ಅಭಿಪ್ರಾಯವನ್ನು ಕೇಂದ್ರ ಸರಕಾರಕ್ಕೆ ಕಳುಹಿಸಿದರು ಮತ್ತು ನಮ್ಮ ಸರಕಾರ ದವರು ಕೇಂದ್ರ ಸರಕಾರಕ್ಕೆ ಇಲ್ಲಿನ ಅಭಿಪ್ರಾಯವನ್ನು ಕಳುಹಿಸಿದ್ದರು. ಇದುವರೆಗೆ ಕೇಂದ್ರ ಸರಕಾರದವರು ಇದನ್ನು ಒಪ್ಪುತ್ತೇವೆ, ಇಲ್ಲ ಬಿಡುತ್ತೇವೆ ಎನ್ನುವ ಬಗ್ಗೆ ಏನನ್ನೂ ತಿಳಿಸಿಲ್ಲ. ಈ ರಿಪೋರ್ಟಿನಲ್ಲಿ ಒಪ್ಪುವುದಕ್ಕೆ ಆಗುವುದಿಲ್ಲ ಎಂತಲೂ ಅವರೂ ತಿಳಿಸಲೂ ಇಲ್ಲ. ಮಹಾರಾಷ್ಟ್ರದ ವಿಧಾನ ಸಭೆಯಲ್ಲೂ ಈ ವರದಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಎಂದು ಅವರು ತಿಳಿಸಿರುವ ಸೂಚನೆಗೂ ಕೇಂದ್ರ ಸರಕಾರ ಯಾವ ಒಪ್ಪಿಗೆಯನ್ನೂ ಕೊಟ್ಟಿಲ್ಲ. ಇದು ಒಂದು ವಾಸ್ತವಾಂಶದ ಚಿತ್ರ ಎಂದು ನನಗನಿಸುತ್ತದೆ. ಈ ಸಂದರ್ಭದಲ್ಲಿ ಕೇಂದ್ರ ಸರಕಾರದವರು ಮಹಾಜನ್ ವರ ದಿಯ ಶಿಫಾರಸುಗಳನ್ನು ಪೂರ್ಣವಾಗಿ ಒಪ್ಪಲೇ ಬೇಕು ಎನ್ನುವ ಒಂದು ನಿರ್ಣಯವನ್ನು ಒಪ್ಪುವು ದಕ್ಕೆ ಏಕೆ ಸಂಶಯ ಪಡುತ್ತಿದ್ದಾರೆ ಎನ್ನುವುದು ಇದರ ಒಂದು ಚಿತ್ರ. ಎರಡನೆಯದು, ಸ್ಪಷ್ಟ ವಾಗಿ ಕಣ್ಣಿಗೆ ಕಾಣುತ್ತ ಇರುವುದು ಅದು ಅಪ್ರಾಯಮಾನವಾಗಿದ್ದರೂ ಅದು ದಿಟವಾದ ಅಂಶ. ಕೇಂದ್ರ ಸರ್ಕಾರದವರು ಈ ಮಹಾಜನ್ ಕಮಿಷನನ್ನು ನೇಮಕ ಮಾಡುವಾಗ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎಂಬುದನ್ನು ಬಹಳ ಕ್ಲಿಯರ್ ಆಗಿ ಹೇಳಿದ್ದರು. ನಾವು ಈ ಮಹಾಜನ್ ಕಮಿಷನ್ ವರದಿಯನ್ನು ಯಾವ ಕಾರಣದಿಂದಲೋ ಏನೋ ಅವಾರ್ಡ್ ಎಂದು ಪರಿಗಣಿಸಿದ್ದೇವೆ. ನಾನು ಸಹ ಸ್ವಲ್ಪ ಕಾನೂನನ್ನು ತಿಳಿದುಕೊಂಡಿದ್ದೇನೆ. ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಈ ರೀತಿ ಹೇಳಿದ್ದಾರೆ :

"......and make its recommendations".

ಎಂಬುದಾಗಿ. ಇಂತಹ ಒಂದು ರೆಕಮೆಂಡೇಷನ್ ಅವಾರ್ಡ್ ಆಗುವುದಿಲ್ಲ. ಇದು ರೆಕಮೆಂಡೇಷನ್ ಆಗುತ್ತದೆಯೇ ಹೊರತು ಅವಾರ್ಡ್ ಎಂದಿಗೂ ಕೂಡ ಆಗುವುದಿಲ್ಲ. ಆದರೂ ಕೂಡ ಮೈಸೂರಿನವರು ಇದನ್ನು ಅವಾರ್ಡ್ ಎಂದು ಏತಕ್ಕೆ ಪರಿಗಣಿಸಿದರು ಎಂಬುದನ್ನು ಮುಂದೆ ಹೇಳುತ್ತೇನೆ. ಇಲ್ಲಿ ಮಾರಲ್ ಕನ್ಸಿಡರೇಷನ್ ಬರುತ್ತದೆ. ಮಾರಲ್ ಕನ್ಸಿಡರೇಷನ್ ತೋರಿಸುವುದಕ್ಕಾಗಿಯೇ ಹಿಂದೆ ಇದೇ ಅಸೆಂಬ್ಲಿಯಲ್ಲಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಒಂದು ನಿಲುವನ್ನು ತಳೆಯಲಾಯಿತು. ಹಿಂದೆ ಎಸ್. ಆರ್. ಸಿ. ರಿಪೋರ್ಟ್ ಬಂದಮೇಲೆ ಗಡಿ ವಿವಾದ ಇನ್ನು ಮುಗಿಯಿತು ಎಂಬುದಾಗಿ ಕಂಡುಬಂತು. ಆದರೂ ಕೂಡ ಮಹಾರಾಷ್ಟ್ರದವರು ಗಡಿ ವಿವಾದ ಇನ್ನೂ ಇದೆ ಎಂದು ಹೇಳಿದಾಗ ಕೇಂದ್ರಸರ್ಕಾರದವರು ಎರಡು ರಾಜ್ಯಗಳ ಮುಖ್ಯಮಂತ್ರಿಗಳೇ ಅದನ್ನು ಬಗೆಹರಿಸಿಕೊಳ್ಳಿ ಎಂದು ಹೇಳಿದರು. ಆದರೆ ಎರಡು ರಾಜ್ಯಗಳ ಮುಖ್ಯಮಂತ್ರಿಗಳಲ್ಲಿ ಏಕಮತ ಅಭಿಪ್ರಾಯ ಬರಲಿಲ್ಲ. ನಂತರ ಮಹಾರಾಷ್ಟ್ರದ ಇಬ್ಬರು ಪ್ರತಿನಿಧಿಗಳು ಮತ್ತು ಮೈಸೂರಿನ ಇಬ್ಬರು ಪ್ರತಿನಿಧಿಗಳು ಸೇರಿ ಈ ವಿಚಾರದಲ್ಲಿ ಒಂದು ಸೂತ್ರವನ್ನು ಕಂಡುಹಿಡಿಯುವಂತೆ ಕೇಂದ್ರ ಸರ್ಕಾರದವರು ಸೂಚನೆ ಕೊಟ್ಟರು. ಆ ಬಗ್ಗೆ ಒಂದು ಕಮಿಟಿಯನ್ನು ಸಹ ನೇಮಕ ಮಾಡಲಾಯಿತು. ಆಗಲೂ ಕೂಡ

ಒಂದು ತೀರ್ಮಾನಕ್ಕೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಅವರ ನಂತರ ಮಹಾಜನ್ ಕಮಿಷನನ್ನು ನೇಮಕ ಮಾಡಲಾಯಿತು. ಮಹಾಜನ್ ಕಮಿಷನ್ ನೇಮಕಕ್ಕೆ ಮೊದಲು ಈ ಅಸೆಂಬ್ಲಿಯ ಒಪ್ಪಿಗೆಯನ್ನು ಏತಕ್ಕೆ ಪಡೆಯಲಿಲ್ಲ ಎಂದು ಆಗಿನ ಮುಖ್ಯಮಂತ್ರಿಗಳಾದ ಶ್ರೀಮಾನ್ ನಿಜಲಿಂಗಪ್ಪನವರನ್ನು ಕೇಳಿದಾಗ ಅವರು ಹೇಳಿದರು, ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಇದಕ್ಕಾಗಿ ಬಹಳ ಒತ್ತಾಯ ಮಾಡಿದರು, ಇದೇ ಕೊನೆಯ ಕಮಿಷನ್, ಈ ಕಮಿಷನ್ ನೇಮಕ ಮಾಡಿಬಿಟ್ಟರೆ ಮುಂದೆ ಪರಸ್ಪರ ಜಗಳ ಬರುವುದಕ್ಕೆ ಅವಕಾಶ ವಾಗುವುದಿಲ್ಲ, ಆದ್ದರಿಂದ ದಯಮಾಡಿ ನನ್ನ ಒಪ್ಪಿಗೆ ಕೊಡಿ ಎಂದು ಕೇಳಿದ್ದರಿಂದ ನಾನು ಸಹ ಒಪ್ಪಿಕೊಂಡೆ ಎಂದು ಹೇಳಿದರು. ಮತ್ತು ಕಮಿಷನ್ ವರದಿಗೆ ಎಲ್ಲರೂ ಬದ್ಧರಾಗಿದ್ದೇವೆಂದು ಸಹ ಹೇಳಿದರು. ಈ ಮಧ್ಯೆ ವರದಿಗಾಗಿ ಸ್ವಲ್ಪ ಕಾಲ ಕಾಯಬೇಕಾಯಿತು. ವರದಿ ಬಂದಮೇಲೆ ತಮಗೆ ಅನುಕೂಲಕರವಾಗಿಲ್ಲವೆಂಬ ಕಾರಣದಿಂದ ಮಹಾರಾಷ್ಟ್ರದವರು ಆ ವರದಿಯನ್ನು ಒಪ್ಪಲಿಲ್ಲ. ಮೈಸೂರು ಸರ್ಕಾರದವರು ಒಪ್ಪಿಕೊಂಡರು. ಕೆಲವು ಸಲ ಆತ್ಮವಿಶ್ವಾಸದ ಮೇಲೆ ಪರಸ್ಪರ ನಂಬಿಕೆಯ ಮೇಲೆ ಒಬ್ಬರಿಗೊಬ್ಬರು ಮಾತನಾಡಿಕೊಂಡಂತಹ ವಿಚಾರಗಳನ್ನು ಬರೆದು ಇಡುವುದಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಕಮಿಷನ್ ನೇಮಕ ಮಾಡಿ, ಅದರ ವರದಿಯನ್ನು ಎರಡು ರಾಜ್ಯಗಳವರು ಒಪ್ಪಿಕೊಳ್ಳಬೇಕೆಂದು ಏನು ಮಾತನಾಡಿಕೊಂಡರು ಅದನ್ನು ಬರೆದು ಇಡಲಿಲ್ಲ. ಇದೇ ಕಾರಣದಿಂದ ಈಗ ಮಹಾರಾಷ್ಟ್ರದವರು ಮಹಾಜನ ವರದಿಯನ್ನು ಒಪ್ಪಿ ಕೊಳ್ಳುವುದಕ್ಕೆ ಸಿದ್ಧರಾಗಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿ ಏನು ಮಾತನಾಡಿಕೊಂಡಿದ್ದರು ಅದು ಭಗ್ನವಾಯಿತು. ಈಗ ಶ್ರೀಮಾನ್ ನಿಜಲಿಂಗಪ್ಪನವರು ಬೇರೆ ಪಾರ್ಟಿಯಲ್ಲಿ ಇದ್ದಾರೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಬೇರೆ ಪಾರ್ಟಿಯಲ್ಲಿ ಇದ್ದಾರೆ. ಅಲ್ಲದೆ ಕೇಂದ್ರಸರ್ಕಾರ ದಲ್ಲಿಯೂ ಕೂಡ ಇವತ್ತಿನದಿವಸ ವಾತಾವರಣ ಕಲುಷಿತವಾಗಿದೆ. ಈ ಸಮಸ್ಯೆಯನ್ನು ಹೀಗೆಯೇ ಬಿಡುವುದಕ್ಕಾಗುವುದಿಲ್ಲ. ಏನಾದರೊಂದು ಸಮಸ್ಯೆಯನ್ನು ಕಂಡುಹಿಡಿಯಲೇಬೇಕಾಗಿದೆ. ಉಭಯ ರಾಜ್ಯಗಳ ಮುಖ್ಯಮಂತ್ರಿಗಳೇ ಈ ಸಮಸ್ಯೆಯನ್ನು ಬಗೆಹರಿಸಿಕೊಂಡಿದ್ದರೆ ನಮಗೆ ಬಹಳ ಸಂತೋಷವಾಗುತ್ತಿತ್ತು. ಆದರೆ ಪರಿಸ್ಥಿತಿ ಆ ರೀತಿ ಇಲ್ಲ. ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರವನ್ನು ಉರುಳಿಸುವುದಕ್ಕೆ ಕೇಂದ್ರಸರ್ಕಾರದವರು ಈ ಒಂದು ಬ್ರಹ್ಮಾಸ್ತ್ರವನ್ನು ಉಪಯೋಗಿಸಿದ್ದಾರೆಂದು ಕೆಲವರು ಹೇಳಿದರು. ಇಷ್ಟೊಂದು ಅಲ್ಪಮತಿ ದೃಷ್ಟಿಯಿಂದ ಇಂದಿರಾಗಾಂಧಿಯವರು ವೀರೇಂದ್ರ ಪಾಟೀಲರ ಸರ್ಕಾರವನ್ನು ಉರುಳಿಸುವುದಕ್ಕೆ ಹೊರಟಿದ್ದಾ ರೆಂಬುದನ್ನು ಒಪ್ಪಿಕೊಳ್ಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಾನು ತಿಳಿದುಕೊಂಡಿರುವಂತೆ ಕೇಂದ್ರಸರ್ಕಾರದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಇಂದಿರಾಗಾಂಧಿಯವರು ರಾಜಕೀಯ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದಾರೆ. Instability is haunting every hour. ಇವತ್ತು ಕೇಂದ್ರದಲ್ಲಿ Pressure politics, pressiurisation scheme, opportunistic politics ಇರುವುದರಿಂದ ಕೆಲವರು ಈ ಸಮಯವನ್ನೇ ಉಪಯೋಗಿಸಿಕೊಂಡು ತಮ್ಮ ಕೆಲಸವನ್ನು ಸಾಧಿಸಿಕೊಳ್ಳುವುದಕ್ಕೆ ಹೊರಟಿದ್ದಾರೆ. ಮಹಾರಾಷ್ಟ್ರದಿಂದ 57 ಜನ ಎಂ. ಪಿ.ಗಳ ಸಪ್ಪೋರ್ಟ್ ಪ್ರಧಾನಮಂತ್ರಿಯವರಿಗಿದೆ. ಈಗ ಮೈಸೂರು ರಾಜ್ಯದಲ್ಲಿ 27 ಜನ ಎಂ. ಪಿ. ಗಳು ಇದ್ದರೂ ಕೂಡ ಕಾಂಗ್ರೆಸ್ ಒಡೆದಿರುವುದರಿಂದ ಕೇವಲ 12 ಜನ ಎಂ. ಪಿ. ಗಳ ಸಪೋರ್ಟ್ ಮಾತ್ರ ಪ್ರಧಾನಮಂತ್ರಿಯವರಿಗಿದೆ. ರಾಜಕೀಯದಲ್ಲಿ, ಯುದ್ಧದಲ್ಲಿ ಮತ್ತು ಪ್ರೀತಿಯಲ್ಲಿ ಬಹುಮತ ಇದ್ದ ಕಡೆ ಗೆಲುವಾಗುತ್ತದೆ. ಈಗ ಮೂರು ತಿಂಗಳವರೆಗೆ ಕೇಂದ್ರದಲ್ಲಿ ಬಜೆಟ್ ಅಧಿವೇಶನ ನಡೆಯಬೇಕಾಗಿದೆ. ಇದೇ ಸರಿಯಾದ ಸಮಯವೆಂದು ಮಹಾರಾಷ್ಟ್ರದವರು ಇಂದಿರಾಗಾಂಧಿ ಯವರನ್ನು ಪೇಟಿಗೆ ಸಿಲುಕಿಸಿ ತಮ್ಮ ಕಾರ್ಯವನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡು ತ್ತಿದ್ದಾರೆ. ಎರಡು ವರ್ಷದಿಂದ ಕೇಂದ್ರಸರ್ಕಾರದವರು ಈ ವಿಷಯದ ಕಡೆ ಗಮನ ಕೊಡದೆ ಈಗ ಇದ್ದಕ್ಕಿದ್ದಂತೆ ಗಮನ ಕೊಟ್ಟಿರುವುದಕ್ಕೆ ಇದೇ ಕಾರಣ. ಮೈಸೂರು ಸರ್ಕಾರದ ದೌರ್ಬಲ್ಯವನ್ನು ಮಹಾರಾಷ್ಟ್ರ ಸರ್ಕಾರದವರು ದುರುಪಯೋಗಪಡಿಸಿಕೊಂಡು ಕೇಂದ್ರದ ಮೇಲೆ ಒತ್ತಡ ತರುವ ಮೂಲಕ ಟೈಮ್ ಬಾಂಬ್ ಹಾಕಿದ್ದಾರೆ. ಇದರಿಂದ ಮಹಾರಾಷ್ಟ್ರದವರು ಹೇಳಿದಂತೆ ಕೇಂದ್ರ ಸರ್ಕಾರದವರು ಕೇಳುವುದಕ್ಕೆ ಹೊರಟಿದ್ದಾರೆ. ಇದು ಬಹಳ ಆಶ್ಚರ್ಯವಾಗಿ ಕಾಣುತ್ತಿದೆ. ಇವತ್ತು ಕಾವೇರಿ ನದಿ ನೀರಿನ ವಿವಾದ ಇದೆ, ಹೊಸಪೇಟೆ ಸ್ಟೀಲ್ ಪ್ಲಾಂಟ್ ಬಗ್ಗೆ ತೀರ್ಮಾನವಾಗ ಬೇಕಾಗಿದೆ, ಕೃಷ್ಣಾ ನದಿ ನೀರಿನ ಬಗ್ಗೆ ವಿವಾದ ಇದೆ. ನಮ್ಮ ಅದೃಷ್ಟವೋ ಅಥವಾ ದುರಾದೃಷ್ಟವೋ ನಮ್ಮ ರಾಜ್ಯದಲ್ಲಿ ಸಿಂಡಿಕೇಟ್ ಸರ್ಕಾರ ಇದೆ. ಈ ಒಂದು ಪಾಪಕ್ಕೆ ಮೈಸೂರಿನ ಜನರನ್ನು ಬಲಿ ಕೊಡಬೇಕಾಗಿದೆ. ಮೈಸೂರು ರಾಜ್ಯದ ಹಿತಕ್ಕೆ ಕನ್ನಡಿಗರ ಹಿತಕ್ಕೆ ಧಕ್ಕೆಯಾಗು ವಂತಹ ಕೆಲಸವನ್ನು ಏನಾದರು ಕೇಂದ್ರಸರ್ಕಾರದವರು ಕೈಕೊಂಡರೆ ಅಂತಹ ಸಂದರ್ಭದಲ್ಲಿ ಎಲ್ಲ ಪಾರ್ಟಿಯವರು ರಾಜಕೀಯವನ್ನು ಮರೆತು ಒಂದು ನಿರ್ದಿಷ್ಟವಾದ ಪ್ರಿನ್ಸಿಪಲ್ ಮೇಲೆ

(ಶ್ರೀ ಎಲ್. ಶ್ರೀಕಂಠಯ್ಯ)

ತೀರ್ಮಾನ ಕೈಕೊಂಡು ರಾಜ್ಯದ ಹಿತವನ್ನು ರಕ್ಷಣೆ ಮಾಡಬೇಕಾಗುತ್ತದೆ. 1967ರಲ್ಲಿಯೇ ನಾವು ಮಹಾಜನ್ ಕಮಿಷನ್ ವರದಿಯನ್ನು ಕೇಂದ್ರಸರ್ಕಾರದವರು ಜಾರಿಗೆ ತರಬೇಕೆಂದು ಈ ಸಭೆಯಲ್ಲಿ ನಿರ್ಣಯ ತೆಗೆದುಕೊಂಡು ಕಳಿಸಿದ್ದರೂ ಕೂಡ ಕೇಂದ್ರಸರ್ಕಾರದವರು ಇದುವರೆಗೆ ಯಾವ ಕ್ರಮವನ್ನೂ ಸಹ ತೆಗೆದುಕೊಳ್ಳದೆ ಈಗ ಇದ್ದಕ್ಕಿದಂತೆ ಮಹಾರಾಷ್ಟ್ರದವರ ಇಷ್ಟದಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಯಾವ ದೃಷ್ಟಿಕೋನವನ್ನು ಅನುಸರಿಸಬೇಕೆಂಬ ಬಗ್ಗೆ ದಿಕ್ಕೇ ತೋಚುತ್ತಿಲ್ಲ. ನಾವು ಬಹುಮತದಿಂದ ಪಾಸ್ ಮಾಡಿ ಕಳಿಸಿದ ಠರಾವ್ ಬಗ್ಗೆ ಕೇಂದ್ರಸರ್ಕಾರದವರು ತೀರ್ಮಾನ ಕೈಕೊಳ್ಳುತ್ತಾರೆಂಬ ಭರವಸೆ ಇಲ್ಲವಾಗಿದೆ. ಏಕೆಂದರೆ ಇವತ್ತಿನದಿವಸದ ರಾಜಕೀಯ ವಾತಾವರಣ ಆ ರೀತಿ ಇದೆ. ಶಕ್ತಿ ಇದ್ದವರು ತಮ್ಮ ಕೆಲಸವನ್ನು ಮಾಡಿಸಿಕೊಳ್ಳುವುದಕ್ಕೆ ಅವಕಾಶವಾಗಿದೆ. ಕೇಂದ್ರಸರ್ಕಾರದ ದುರ್ಬಲತೆಯನ್ನು ಮಹಾರಾಷ್ಟ್ರದವರು ಸಮಯ ನೋಡಿಕೊಂಡು ಶೋಷಣೆ ಮಾಡುವುದಕ್ಕೆ ಹೊರಟಿದ್ದಾರೆ. ಇನ್ನೊಂದು ಸೋಜಿಗದ ಸಂಗತಿ ಎಂದರೆ ಮಾನ್ಯ ಸಿದ್ಧವೀರಪ್ಪನವರು 1967 ರಲ್ಲಿ ಇದೇ ವಿಷಯದ ಬಗ್ಗೆ ಮಾತನಾಡಿದ ಭಾಷಣಕ್ಕೂ ನೆನ್ನೆ ದಿವಸ ಮಾಡಿದ ಭಾಷಣಕ್ಕೂ ವ್ಯತ್ಯಾಸವಿದೆ. 1967ರಲ್ಲಿ ಮಾತನಾಡುವಾಗ ಮಹಾಜನ್ ವರದಿಯ ಬಗ್ಗೆ ಸಪೋರ್ಟ್ ಮಾಡಿದ್ದರು. ಅವರ ಭಾಷಣದ ಕೆಲವು ಲೈನ್‌ಗಳನ್ನು ಓದುತ್ತೇನೆ :

"How can we say anything unless the legislature is summoned and their opinion is elicited? Then in a half-hearted manner this session is summoned Sir, be that as it may, whatever it may be, now it is our duty as my friend Mr. Ghorpade said. What is the alternative we have? We have to support this report because it is one of paramount importance to the State. Whatever may be our differences with the Government, whatever may be our compalints against them, we must set them aside and go the whole hog with them in supporting it, though friends like Mr. Gopala Gowda think otherwise."

ಕೊನೆಯಲ್ಲಿ ಈ ರೀತಿ ಹೇಳಿದ್ದಾರೆ :

"I therefore feel I am in full agreement with the recommendations of Mahajan Commission and I support it."

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಅದನ್ನು ಸ್ಪಷ್ಟಪಡಿಸುತ್ತೇನೆ. ನಾನು ನಿನ್ನೆ ಈ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ನಾನು ಹಿಂದೆ ಮಹಾಜನ್ ಕಮಿಷನ್ ಅನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದು ನಿಜ. ಆದರೆ ಶ್ರೀಮಾನ್ ಶ್ರೀಕಂಠಯ್ಯನವರು ನಾನು ಹಾಗೆ ಹೇಳಿದ್ದೇನೆ, ಹೀಗೆ ಹೇಳಿದ್ದೇನೆ ಎನ್ನುವುದನ್ನು ತೆಗೆದುಕೊಳ್ಳಬೇಕಾಗಿಲ್ಲ. ಮಹಾಜನ್ ರಿಪೋರ್ಟ್ ಅನ್ನು ಒಪ್ಪಿಕೊಳ್ಳಬೇಕೆಂದು ನಾನು ಹೇಳಿದ್ದು ನಿಜ. ಯಾವ ಕಾರಣಕ್ಕೋಸ್ಕರ ನಾನು ನನ್ನ ನಿರ್ಣಯನ್ನು ಈ ಸಭೆಯ ಮುಂದಿಟ್ಟಿದ್ದೇನೆ ಎಂಬುದನ್ನು ನಾನು ಹೇಳಿದ್ದೇನೆ. ನಾನು ಅದನ್ನು ಮಾತನಾಡಲಿಲ್ಲ ಎಂದು ಹೇಳಲಿಲ್ಲ.

3-00 P.M.

ಶ್ರೀ ಎಲ್. ಶ್ರೀಕಂಠಯ್ಯ.—ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ಕೇಂದ್ರ ಸರ್ಕಾರದ ದೌರ್ಬಲ್ಯವನ್ನು ಕೆಲವು ಹಿತಾಸಕ್ತಿಗಳು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಉತ್ತರ ಇಂಡಿಯಾದಲ್ಲಿ ಅನೇಕ ಸರ್ಕಾರಗಳು ಬದಲಾವಣೆಯಾಗುತ್ತಿವೆ, ಮತ್ತು ಬದಲಾವಣೆಯಾಗಿ ಹೋಗಿವೆ. ದಕ್ಷಿಣದ ಕಡೆ ನಮ್ಮ ರಾಜ್ಯದಲ್ಲಿ ಏನೂ ಆಗಿಲ್ಲ. ಒಂದು ರಾಜ್ಯದ ಹಿತಾಸಕ್ತಿಗೆ ಧಕ್ಕೆ ಬರುವಾಗ ನಮ್ಮ ಒಂದು ಫರ್ಮ್ ಸ್ಟ್ಯಾಂಡ್ ಅವಶ್ಯಕವಾಗಿ ಬೇಕಾಗಿದೆ. ಈಗ ಈ ಸಭೆಯ ಮುಂದೆ 4 ಠರಾವುಗಳನ್ನು ಇಟ್ಟಿದ್ದಾರೆ. ಶ್ರೀಮಾನ್ ಸಿದ್ಧವೀರಪ್ಪನವರೂ ಒಂದು ಠರಾವನ್ನು

ಈ ಸಭೆಯಮುಂದೆ ಇಟ್ಟಿದ್ದಾರೆ. ನಾನು ಒಂದು ಠರಾವನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ನಾನು ಈ ಸಂದರ್ಭದಲ್ಲಿ ಮುಖ್ಯ ನಾಯಕರಲ್ಲಿ ಮನವಿ ಮಾಡಿಕೊಳ್ಳುವುದು ಇಷ್ಟೆ. ಮಹಾಜನ್ ಕಮಿಷನ್ ಅನ್ನು ಅನ್ವಯ ಮಾಡಬೇಕು ಎಂದು 1967ನೇಇಸವಿಯಲ್ಲಿ ನಾವು ಇಲ್ಲಿ ಸ್ಪಷ್ಟ ಮಾಡಿದ್ದೇವೆ. ಶ್ರೀಮಾನ್ ಗೋಪಾಲಗೌಡರ ನಿರ್ಣಯದಲ್ಲಿ ಪುನಃ ಅದನ್ನೇ ಒತ್ತಿ ಹೇಳುತ್ತಿದ್ದಾರೆ.

ಶ್ರೀ ಎಚ್. ಸಿದ್ಧವೀರಪ್ಪ.—ಈ ಬಗ್ಗೆ ಹಿಂದೆ ಒಂದು ಸಾರಿ ಈ ಸಭೆಯಲ್ಲಿ ತೀರ್ಮಾನವಾಗಿದೆ. ಪುನ ಅದನ್ನು ಪುನರುಕ್ತಿ ಮಾಡುವುದಕ್ಕೆ ಏನು ಅವಕಾಶ ಇದೆ ? ಈ ಸಭೆಯಲ್ಲಿ ಒಂದು ನಿರ್ಣಯ ಯುನಾನಿಮಸ್ ಆಗಿ 15-12-67ರಲ್ಲಿ ತೀರ್ಮಾನವಾಗಿದೆ. ಪುನಃ ಆ ನಿರ್ಣಯ ಇಲ್ಲಿ ಬರುವುದು ಸೂಕ್ತವೇ ಎಂಬುದನ್ನು ನೋಡಿ.

ಶ್ರೀ ಎಲ್. ಶ್ರೀಕಂಠಯ್ಯ.—ನನ್ನ ಮನವರಿಕೆ ಇಷ್ಟೆ. ರಾಜ್ಯದ ಹಿತಕ್ಕೆ ಧಕ್ಕೆ ಬರುವಾಗ ಯಾವ ತತ್ವವನ್ನು ಅನುಸರಿಸಿದರೆ ಮಹಾರಾಷ್ಟ್ರ ಮತ್ತು ಮೈಸೂರಿಗೆ ಇನ್ನೂ ಬಿಕ್ಕಟ್ಟು ಜಾಸ್ತಿ ಆಗುವುದೋ ಅಂಥಾದ್ದನ್ನು ತಪ್ಪಿಸಬೇಕೆಂದು ನಾನು ಹೇಳುತ್ತೇನೆ. ನಮ್ಮ ಮಹಾರಾಷ್ಟ್ರ ಏಕೀಕರಣ ಸಮಿತಿಯ ಮಿತ್ರರು ಇಲ್ಲಿಯವರೆಗೂ ಕನ್ನಡಿಗರಾಗಿದ್ದಾರೆ ಎಂಬುದನ್ನು ಮರೆಯ ಬಾರದು. ಈ ಸಂದರ್ಭದಲ್ಲಿ ನನ್ನ ಮನವರಿಕೆ ಇಷ್ಟೇ ನನ್ನ ಸಬ್‌ಸ್ಟ್ಯಾಂಟೀವ್ ಮೋಷನ್ ಅನ್ನು ವೋಟಿಗೆ ಹಾಕಿದರೆ ಪಾಸಾಗುತ್ತದೆಯೋ ಅಥವಾ ಫೇಲಾಗುತ್ತದೆಯೋ ಅದು ಮುಖ್ಯವಲ್ಲ. ರಾಜ್ಯದ ಹಿತಕ್ಕೆ ಧಕ್ಕೆ ಬರತಕ್ಕಂಥಾ ಸಂದರ್ಭದಲ್ಲಿ ಅದನ್ನು ತಪ್ಪಿಸಿ ಕಾಪಾಡಲು ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ರಾಜ್ಯದ ಹಿತದೃಷ್ಟಿಯಿಂದ ಪ್ರತ್ಯೇಕ ಪ್ರತ್ಯೇಕ ಠರಾವುಗಳು ಬೇಡ. ಇನ್ನೂ ಕಾಲ ಮಿಂಚಿಹೋಗಿಲ್ಲ. ನಾವು ಏನು ಮಾಡಬೇಕೋ ಅದನ್ನು ಒಗ್ಗಟ್ಟಾಗಿ ಮಾಡಿ ಈ ಸಂದರ್ಭದಲ್ಲಿ ನಮ್ಮ ರಾಜ್ಯದ ಹಿತಾಸಕ್ತಿಯನ್ನು ಕಾಪಾಡುವುದರಲ್ಲಿ ಮಧುರ ಭಾಂಧವ್ಯವನ್ನು ಉಳಿಸಿಕೊಂಡು ತಾತ್ವಿಕವಾಗಿ ಸಮದೃಷ್ಟಿಯಿಂದ ಬಿಕ್ಕಟ್ಟನ್ನು ಯಾವ ರೀತಿ ಬಗೆಹರಿಸಬೇಕೋ ಆ ರೀತಿ ಬಗೆಹರಿಸಬೇಕು. ಶ್ರೀಮಾನ್ ಸಿದ್ಧವೀರಪ್ಪನವರು ಈ ಬಗ್ಗೆ ಮೀಟಿಂಗ್ ಸೇರುವ ವಿಷಯದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಫೋನ್ ಮಾಡಿದೆ ಅವರು ಸಿಕ್ಕಲಿಲ್ಲ ಎಂದು ಹೇಳಿದರು. ಈಗ ನಾವು ಅದನ್ನೆಲ್ಲಾ ಮರೆಯೋಣ. ಈ ಸಂದರ್ಭದಲ್ಲಿ ಈ ಸಭೆಯವರೆಲ್ಲರೂ ಏಕಕಂಠದಿಂದ ನಮ್ಮ ಧ್ವನಿಯನ್ನು ಕೇಂದ್ರ ಸರ್ಕಾರಕ್ಕೆ ಮುಟ್ಟಿಸಬೇಕು. ಈ ದೃಷ್ಟಿಯಿಂದ ಈ ಸಭೆಯ ಮುಖ್ಯ ನಾಯಕರಲ್ಲಿ ನನ್ನ ಮನವಿ ಏನೆಂದರೆ ಶ್ರೀಮಾನ್ ಸಿದ್ಧವೀರಪ್ಪನವರು, ಶ್ರೀಮಾನ್ ಗೋಪಾಲಗೌಡರು, ಮತ್ತು ನಮ್ಮ ಎಂ.ಇ.ಎಸ್. ಸಹೋದರರು ಹಾಗೂ ಸಬ್‌ಸ್ಟ್ಯಾಂಟೀವ್ ಮೋಷನ್ ಮೂವ್ ಮಾಡಿರತಕ್ಕ ಇನ್ನೂ ಕೆಲವು ಸ್ನೇಹಿತರೆಲ್ಲಾ ಪುನಃ ಇನ್ನೊಂದು ಮೀಟಿಂಗ್ ಸೇರಲಿ. ಇವೊತ್ತು ಈ ಚರ್ಚೆ ಸದ್ಯಕ್ಕೆ ನಿಲ್ಲಲಿ. ಎಲ್ಲರೂ ಕುಳಿತು ಕೊಂಡು ಒಂದು ಸೂಕ್ತವಾದ ಎಲ್ಲರಿಗೂ ಅಂಗೀಕಾರವಾಗುವ ಒಂದು ಸೂತ್ರವನ್ನು ಕಂಡುಹಿಡಿದು ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕು. ಅಷ್ಟಾದರೂ ಅದಕ್ಕೂ ಕೂಡ ಕೇಂದ್ರ ಸರ್ಕಾರದವರು ನಮ್ಮ ಸೂತ್ರವನ್ನು ಒಪ್ಪಲಿಲ್ಲ ಎನ್ನುವ ಸಂದರ್ಭದಲ್ಲಿ ಮುಂದೆ ಏನು ಮಾಡಬೇಕು ಎಂಬುದನ್ನು ಯೋಚನೆ ಮಾಡೋಣ. ನಾನು ಬಹಳ ದೂರದೃಷ್ಟಿಯನ್ನು ಇಟ್ಟುಕೊಂಡು ನನ್ನ ಸಬ್‌ಸ್ಟ್ಯಾಂಟೀವ್ ಮೋಷನ್ ಕಳುಹಿಸಿದ್ದೇನೆ. ನಾನು ನನ್ನ ಭಾಷಣದ ಪೀಠಿಕೆಯಲ್ಲಿ ಈ ಬಗ್ಗೆ ಹೇಳಿದ್ದೇನೆ. ಮಹಾಜನ್ ಕಮಿಷನ್ ವರದಿಯನ್ನು ಕೇಂದ್ರ ಸರ್ಕಾರದವರು ಏತಕ್ಕೆ ಒಪ್ಪಲಿಲ್ಲ ಎನ್ನುವ ಬಗ್ಗೆ ನಮಗೆ ಅವರು ಕಾರಣಗಳನ್ನು ಸೂಚನೆ ಮಾಡಲಿಲ್ಲ. ಆದ್ದರಿಂದ Let there be a second fiddle. ಶ್ರೀಮಾನ್ ಬೊಮ್ಮಾಯಿಯವರು ಮತ್ತು ಶ್ರೀಮಾನ್ ಕೆ. ಎಚ್. ಪಾಟೀಲರು ಹೇಳಿದ ಹಾಗೆ ಸ್ವಲ್ಪ ಕಾಲದವರೆಗೆ ಈ ಗಡಿ ವಿವಾದದ ಬಗ್ಗೆ ಚರ್ಚೆಯನ್ನು ಆಂದೋಳನವನ್ನು ಎತ್ತುವುದು ಬೇಡ. ಈಗಿರತಕ್ಕ ಸ್ಟೇಟಸ್‌ಕೋ ಇರಲಿ. ರಾಷ್ಟ್ರದ ಹಿತದೃಷ್ಟಿಯಿಂದ, ಮಹಾರಾಷ್ಟ್ರ ಮತ್ತು ಮೈಸೂರಿನ ಒಂದು ಮಧುರ ಬಾಂಧವ್ಯದ ಹಿತದೃಷ್ಟಿಯಿಂದ ಯಾವುದೇ ಲೋಪದೋಷಗಳು ಇದರಲ್ಲಿ ಇರಬಾರದು. ಮಹಾಜನ್ ಕಮಿಷನ್ನಿನ ರಿಪೋರ್ಟಿನಿಂದ ಮೈಸೂರು ರಾಜ್ಯಕ್ಕೆ ಅನ್ಯಾಯ ವಾಗಿದೆ. ಮುಖ್ಯ ಮುಖ್ಯ ಭಾಗಗಳು ಹೋರಟುಹೋಗಿವೆ. ಆದ್ದರಿಂದ ನಾನು ಹೇಳುವುದು ಏನೆಂದರೆ ಮೈಸೂರು ಮತ್ತು ಮಹಾರಾಷ್ಟ್ರ ಉಭಯತ್ರರ ಒಪ್ಪಿಗೆಯ ಪ್ರಕಾರ ಇನ್ನೊಂದು ಕಮಿಷನ್ ಮಾಡಬಹುದು. ಸೆಕೆಂಡ್ ಆಲ್ಟರ್‌ನೇಟೀವ್ ಕೊಡುವುದರಲ್ಲಿ ಏನೂ ಅವಮಾನವಾಗುವುದಿಲ್ಲ. ಕೇಂದ್ರ ಸರ್ಕಾರದವರು ಯಾವ ಒಂದು ಪ್ರಿನ್ಸಿಪಲ್ ಒಂದು ರೀಜನ್ ಇಲ್ಲದೆ ಹೇಳುವಂಥಾದ್ದನ್ನು ನಾವು ಒಪ್ಪುವುದಕ್ಕೆ ತಯಾರಿಲ್ಲ. ಅವರು ಏನಾದರೂ ಒಂದು ವಿಷಯವನ್ನು ಹೇಳಿದರೆ ಅದರಲ್ಲಿ ಒಂದು ಅಬ್ಜೆಕ್ಟ್, ಒಂದು ಪ್ರಿನ್ಸಿಪಲ್ ಇರಬೇಕು, ಅದನ್ನು ಮಹಾರಾಷ್ಟ್ರದವರೂ ಒಪ್ಪಬೇಕು, ನಾವೂ ಒಪ್ಪಬೇಕು. ಈ ತೀರ್ಮಾನವನ್ನು ಕೇವಲ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಗಳನ್ನು ತೀರ್ಮಾನ ಮಾಡುವ ಉದ್ದೇಶದಿಂದ ಕೊಟ್ಟರೆ ಸಾಲದು. ಮೈಸೂರು ಮತ್ತು ಕೇರಳ

(ಶ್ರೀ ಎಲ್. ಶ್ರೀಕಂಠಯ್ಯ)

ಬಾರ್ಡರ್ ಡಿಸ್‌ಪ್ಯೂಟ್ ಅನ್ನು ತೀರ್ಮಾನ ಮಾಡಬೇಕು. ನಮ್ಮ ಕನ್ನಡ ನಾಡಿಗೆ ಕಾಸರಗೋಡು, ತಾಳವಾಡಿ ಫಿರ್ಕಾ, ಮಡಕಶಿರಾ, ಇವುಗಳನ್ನೂ ಸೇರಿಸುವ ಒಂದು ತೀರ್ಮಾನವನ್ನು ಮಾಡಬೇಕು, ಲೆಜಿಟಿಮೇಟಾಗಿ ಕನ್ನಡ ನಾಡಿಗೆ ಯಾವ ಯಾವ ಭಾಗಗಳು ಬರಬೇಕೋ ಎಲ್ಲಾ ಭಾಗಗಳೂ ಬರಲಿ. ಈ ದೃಷ್ಟಿಯಿಂದ ಆಲ್ ಇಂಡಿಯಾ ಲೆವೆಲ್‌ನಲ್ಲಿ ಒಂದು ಹೈ ಪವರ್ ಕಮಿಷನ್ ನೇಮಕ ಮಾಡಿ ಅದರಲ್ಲಿ 3 ಜನ ಸುಪ್ರೀಮ್ ಕೋರ್ಟ್ ಜಡ್ಜ್‌ಗಳು, ಮೈಸೂರು ಸರ್ಕಾರದ ಪ್ರತಿನಿಧಿ ಒಬ್ಬರು, ಮಹಾರಾಷ್ಟ್ರ ಸರ್ಕಾರದ ಪ್ರತಿನಿಧಿ ಒಬ್ಬರು ಇರಬೇಕು. ಈ ರೀತಿಯಾಗಿ 5 ಜನಗಳಿಂದ ಕೂಡಿದಂತಹ ಒಂದು ಹೈಪವರ್ ಕಮಿಷನ್ ನೇಮಕ ಮಾಡಿ ಅವರು ಕೊಟ್ಟಂತಹ ತೀರ್ಮಾನ ಒಂದು ಅಂತಿಮವಾದ ತೀರ್ಮಾನವಾಗಬೇಕು. ಈ ರೀತಿ ಮಾಡಿದರೆ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರದವರು ಕೇಂದ್ರ ಸರ್ಕಾರದವರೊಡನೆ ಯೋಚಿಸಿ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಅಧ್ಯಕ್ಷರೇ, ದಿನಾಂಕ 19-12-1967 ರಂದು ನಾವು ಈ ಸಭೆಯಲ್ಲಿ ಏನು ನಿರ್ಣಯವನ್ನು ಕೈಗೊಂಡಿದ್ದೇವೆ ಅದರ ಎರಡು ಮಾತುಗಳನ್ನು ನಾನು ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ :

> "That this House, having considered the Report of the Mahajan Commission on Maharashtra–Mysore–Kerala Boundary Disputes urges upon the Central Government to immediately implement the recommendations of the Commission in spite of the fact that the Commission failed to recognise the just claims of the State of Mysore and that some of its recommendations are quite injurious to the legitimate interests of the State of the Mysore, and also vehemently opposes any proposal or suggestion for obtaining 'National Consensus' or taking 'opinion Poll'.

ಎಂದು ನಿರ್ಣಯವನ್ನು ಮಾಡಿದ್ದಾರೆ. ಇದು ಭಾರೀ ಮುಖ್ಯ. ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ಮಹಾಜನ್ ಕಮಿಷನ್ ನೇಮಕವಾದದ್ದು ಸರಿಯೋ ತಪ್ಪೋ ಅಂತೂ ಅದು ನೇಮಕ ವಾಯಿತು. ಬಹುಶಃ ಆಗ ನಾವು ಮಾಡಿದಂತಹ ತೀರ್ಮಾನದ ವಿಷಯದಲ್ಲಿ ನನಗಾದರೂ ಅನಿಸುತ್ತದೆ ಏನಾದರೂ ಮಾಡಿ ಈ ಗಡಿ ವ್ಯವಹಾರವನ್ನು ಬಗೆಹರಿಸಲಿ ಎಂದು ನಾವು ಆ ನಿರ್ಣಯವನ್ನು ಮಾಡಿದ್ದೇವೆ ಎನ್ನುವುದಕ್ಕಿಂತ ಮುಖ್ಯವಾಗಿ ರಾಜ್ಯದ ಮುಖಂಡರ ಮುಖವನ್ನು ಉಳಿಸುವುದಕ್ಕೋಸ್ಕರ, ಅವರ ಮರ್ಯಾದೆಯನ್ನು ಉಳಿಸುವುದಕ್ಕೋಸ್ಕರ ನಾವು ಆ ಒಂದು ಪ್ರಯತ್ನವನ್ನು ಮಾಡಿದ್ದೇವೆ, ಶ್ರೀಮಾನ್ ನಿಜಲಿಂಗಪ್ಪನವರ ಮರ್ಯಾದೆಯನ್ನು ಉಳಿಸುವುದಕ್ಕೋಸ್ಕರ, ಹೆಚ್ಚಾಗಿ ನಾವು ಅಂಥಾ ಒಂದು ನಿರ್ಣಯವನ್ನು ಕೈಗೊಂಡಿದ್ದೇವೆ ಎಂದು ನಾನು ಹೇಳುತ್ತೇನೆ. ಕಾರಣ ವೇನೆಂದರೆ ಕಮಿಷನ್ನಿನ ಅಪಾಯಿಂಟ್‌ಮೆಂಟ್ ವಿಷಯದಲ್ಲಿ ಎಲ್ಲವನ್ನೂ ವಿವರವಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಒಂದು ವಿಷಯವನ್ನು ಮಾತ್ರ ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದು ಈ ರೀತಿ ಇದೆ :

> "However, for reasons to be stated which may be of compelling nature, the Commission may take into consideration other factors, namely, communications, geographical conditions, administrative convenience and economic considerations and these may in some cases overweigh the linguistic considerations".

ಎಂದು ಹೇಳಿದ್ದಾರೆ. ಮಹಾಜನ್ ಕಮಿಷನ್ ನೇಮಕ ಮಾಡುವುದಕ್ಕೆ ಮೊದಲು ರಾಜ್ಯದಲ್ಲಿ ವಿರೋಧ ಇತ್ತು. ಅಂದಿನ ಮುಖ್ಯ ಮಂತ್ರಿಗಳು ಹೇಳಿದಂತಹ ಮಾತನ್ನು ನೋಡಿದರೆ ಮೈಸೂರು ರಾಜ್ಯದವರಿಗೆ ಅಂಥಾ ಒಂದು ಕಮಿಷನ್ ನೇಮಕ ಮಾಡುವುದು ಬೇಕಾಗಿಲ್ಲ ಎಂದು ಅದಕ್ಕೆ

ಮೈಸೂರು ರಾಜ್ಯದಲ್ಲಿ ವಿರೋಧ ಇತ್ತು. ಆದರೂ ಸಹ ಮಹಾರಾಷ್ಟ್ರದವರು ಆ ಕಮಿಷನ್ ಆಗಬೇಕು ಎಂದು ಹೇಳುವುದರಿಂದ ನಾನು ಅದನ್ನು ಸ್ವಾಗತ ಮಾಡುತ್ತೇನೆ, ಒಪ್ಪಿಕೊಳ್ಳುತ್ತೇನೆ, ಎನ್ನುವ ಮಾತನ್ನು ಹೇಳಿದ್ದಾರೆ. ಜನನಾಯಕರು ಎಷ್ಟರಮಟ್ಟಿಗೆ ಇದ್ದಾರೆ ಎಂದರೆ ಈ ರಾಜ್ಯದ ಪ್ರತಿನಿಧಿಯಾಗಿ ಈ ರಾಜ್ಯದಲ್ಲಿರತಕ್ಕ ಜನತೆಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡದೆ ಮಹಾರಾಷ್ಟ್ರ ರಾಜ್ಯದವರು ಅದು ಬೇಕು ಎಂದು ಹೇಳಿದ್ದಾರೆ ಅದಕ್ಕೋಸ್ಕರ ನಾನು ಆ ಕಮಿಷನ್ನಿನ ನೇಮಕಕ್ಕೆ ಒಪ್ಪಿಕೊಂಡೆ ಎಂದು ಈ ಸಭೆಯಲ್ಲಿ ಅಂದಿನ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅವರು ಆ ಹೊತ್ತು ಮಾಡಿಕೊಂಡಂಥಾ ತಪ್ಪಿಗೆ ನಾವು ಇಂದು ತೊಂದರೆಯನ್ನು ಅನುಭವಿಸತಕ್ಕ ಸಂದರ್ಭ ಬಂದಿದೆ. ಒಂದು ರಾಷ್ಟ್ರದಲ್ಲಿ ಒಂದು ಉನ್ನತ ಸ್ಥಾನಕ್ಕೆ ಹೋಗತಕ್ಕಂಥ ಮನುಷ್ಯ, ರಾಜ್ಯದ ಮುಖಂಡ ತಪ್ಪು ಮಾಡಿದ್ದಾರೆ, ಅವರ ಮರ್ಯಾದೆಯನ್ನು ಉಳಿಸೋಣ ಎನ್ನುವ ಉದ್ದೇಶದಿಂದ ಆ ಹೊತ್ತು ನಿರ್ಣವನ್ನು ಮಾಡಿದ್ದರೆ ನನಗಾದರೂ ಅನಿಸುತ್ತದೆ ನಾವು ಆ ಹೊತ್ತು ತಪ್ಪು ಮಾಡಿದ್ದೇವೆ ಎಂದು. ನಾನು ಅರಿವು ಮಾಡಿಕೊಂಡಿದ್ದೇನೆ. ಎಸ್.ಆರ್.ಸಿ. ಆಕ್ಟ್ ಪ್ರಕಾರ ಒಂದು ರಾಜ್ಯದ ಬೌಂಡರಿ ಫಿಕ್ಸ್ ಆದರೂ ಕೂಡ ಸಣ್ಣಪುಟ್ಟ ಬದಲಾವಣೆಗಳನ್ನು ಜೋನಲ್ ಕೌನ್ಸಿಲ್‍ನಲ್ಲಿ ತಂದು ಅದನ್ನು ಬಗೆಹರಿಸಿಕೊಳ್ಳುವುದಕ್ಕೆ ಎಸ್. ಆರ್. ಸಿ ಆಕ್ಟ್ ಪ್ರಕಾರ ಅವಕಾಶ ಇದೆ. ಆವತ್ತು ಮಾಡಿದ ನಿರ್ಣಯ ಏನಿದೆ ಅಂದರೆ ಹೇಡಿಯ ಕೈಯಲ್ಲಿ ಚಂದ್ರಾಯುಧ ಕೊಟ್ಟ ಹಾಗೆ ಆಗಿದೆ. ಈ ಸಭೆಯ ಒಟ್ಟು ತೀರ್ಮಾನ ಏನೆಂದರೆ ಒಬ್ಬ ಹೇಡಿಯ ಕೈಯಲ್ಲಿ ಚಂದ್ರಾಯುಧ ಕೊಡುವುದು. ಅವರು ಕಾಂಗ್ರೆಸ್ ಅಧ್ಯಕ್ಷರಾದ ನಂತರ ಪ್ರಧಾನ ಮಂತ್ರಿಯವರ ಜೊತೆಗೆ ಬಹಳ ಚೆನ್ನಾಗಿ ಇದ್ದರು. ಆಗ ಯಾಕೆ ಅವರು ಕೇಂದ್ರಸರ್ಕಾರದವರು ಒಪ್ಪುವ ಹಾಗೆ ಮಾಡಲಿಲ್ಲ ಎಂಬುದರ ಬಗ್ಗೆ ನನಗೆ ಅನುಮಾನ ಬರುತ್ತದೆ. ನಿಜಲಿಂಗಪ್ಪನವರು ಏನೋ ಈ ರಾಜ್ಯದ ಹಿತವನ್ನು ಬಲಿಕೊಡುವುದಕ್ಕೆ ಸಿಕ್ಕಿಬಿದ್ದಿದ್ದಾರೆ. ತಮ್ಮ ಅಧಿಕಾರ, ತಮ್ಮ ಪದವಿ ಮತ್ತು ತಮ್ಮನ್ನು ಉಳಿಸುವುದಕ್ಕೋಸ್ಕರ ಈ ರಾಜ್ಯದ ಹಿತವನ್ನು ಬಲಿಕೊಡುತ್ತಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇವರು ಯಾವ ವಿಚಾರದಲ್ಲೂ ನಮಗೆ ನ್ಯಾಯ ದೊರಕಿಸಲಿಲ್ಲ. ಎಲ್ಲಿ ನೋಡಿದರೂ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಉದಾಹರಣೆಗೆ ಕೃಷ್ಣಾ ನದಿಯ ವ್ಯವಹಾರ ನೋಡಿ, ನಮಗೆ ಅನ್ಯಾಯ, ಕಾವೇರಿ ನದಿಯ ವಿಚಾರದಲ್ಲಿಯೂ ನಮಗೆ ಅನ್ಯಾಯ, ಮತ್ತು ಮಹಾರಾಷ್ಟ್ರದ ಗಡಿ ವಿಚಾರದಲ್ಲೂ ನಮಗೆ ಅನ್ಯಾಯ. ಅದೇ ರೀತಿ ಕೇರಳ—ಮೈಸೂರು ಗಡಿಯ ವಿಚಾರದಲ್ಲೂ ಅನ್ಯಾಯ. ಇವರು ಆಲ್ ಇಂಡಿಯಾ ಕಾಂಗ್ರೆಸ್ಸಿನ ಪ್ರೆಸಿಡೆಂಟರಾಗಿದ್ದರೂ ಕೂಡ, ಪ್ರಧಾನಮಂತ್ರಿಯವರು ಇವರ ಮಾತನ್ನು ಕೇಳುವ ಪರಿಸ್ಥಿತಿಯಲ್ಲಿ ಇದ್ದರೂ ಕೂಡ ಇವರು ಉಸಿರು ಕೂಡ ಅದರ ಬಗ್ಗೆ ಎತ್ತಲಿಲ್ಲ. ಇವರು ಅಂಜಿಕೊಂಡು ಕೂತಿದ್ದರು. ಇವರು ಅದನ್ನು ಹೇಳದಿದ್ದುದು ಇವರ ತಪ್ಪು. ಇವತ್ತು ನಮ್ಮಲ್ಲಿ ಏನಾಗಿದೆ? ನಮ್ಮ ಮುಖ್ಯ ಮಂತ್ರಿಯವರು ಬಹಳ ಹಿಡಿತದಿಂದ, ನಾಜೂಕಿನಿಂದ ವ್ಯವಹಾರ ಮಾಡತಕ್ಕವರು ಎಂದು ಮಾನ್ಯ ಸಿದ್ದವೀರಪ್ಪನವರು ಹೇಳಿದರು. ಇವರು ಮಾತಿನಲ್ಲಿ ಜಾಣತನ ತೋರಿಸಿ, ಮಾತಿನ ಮೆರಗಿನಲ್ಲಿ ಏನು ಗಂಡಾಂತರವಾಗಿದ್ದರೂ, ತಾವು ತಪ್ಪು ಮಾಡಿದ್ದರೂ, ಮಾತಿನಲ್ಲಿ ಮಾತ್ರ ಬಿಗಿ ಇಟ್ಟುಕೊಂಡಿದ್ದಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಆ ನಿರೀಕ್ಷೆ ಸುಳ್ಳಾಗಿದೆ. ಪ್ರತಿಯೊಬ್ಬನೂ ಆಯಾ ಸ್ಥಾನಕ್ಕೆ ಸರಿಯಾದ ಮರ್ಯಾದೆ ಗೌರವವನ್ನು ಕೊಡತಕ್ಕದ್ದು ಪ್ರಾಮುಖ್ಯ. ನಾನು ಅವರಮೇಲೆ ನೂರಕ್ಕೆ ನೂರು ಪಾಲು ಕರಾರುವಾಕ್ಕಾಗಿ ಸತ್ಯಸಂಗತಿಗಳನ್ನು ಹೇಳಿ ಅಪಾದನೆ ಮಾಡಿದರೂ, ಅವರು ನನ್ನ ಹೆಸರು ಹೇಳಿದರೆ ಅವರ ವ್ಯಕ್ತಿತ್ವಕ್ಕೆ ಧಕ್ಕೆ ಬರುತ್ತದೆಂದು, ಹೆಸರೇ ಹೇಳದೆ, ಮಾನ್ಯಸದಸ್ಯರು ಹೀಗೆ ಹೇಳಿದ್ದರು, ಮಾನ್ಯ ಸದಸ್ಯರು ಹಾಗೆ ಹೇಳಿದ್ದರು ಎಂದು ಹೇಳುತ್ತಿದ್ದಾರೆ. ಮಾನ್ಯ ನಂಜೇಗೌಡರು ಎಂದು ಹೇಳುವುದನ್ನು ಬಿಟ್ಟುಬಿಟ್ಟಿದ್ದಾರೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಂದು ರಾಷ್ಟ್ರದ ಪ್ರಧಾನ ಮಂತ್ರಿಯವರು ಏನು ನಿರ್ಣಯವನ್ನು ಹೇಳುತ್ತಿದ್ದಾರೆ, ಅದನ್ನು ವಿ. ಎನ್. ಪಾಟೀಲರವರ ನಿರ್ಣಯದಲ್ಲಿ ತಂದು ಓಟ್ ಮಾಡುವ ಹಾಗೆ ಇಲ್ಲ. We are inferring something in the absence of a direct statement by the Chief Minister, whether the Government of India is attempting to throw the Mahajan Commission recommendations to the Waste Paper basket. We are inferring like that in the absence of a statement. ಅದು ಅವಾರ್ಡ್ ಎಂದು ಯಾರೂ ತೆಗೆದುಕೊಳ್ಳಲಿಲ್ಲ. The Commission's report is a best one, though the Commission cannot be a judicial body. ನಾನಾದರೂ ಹೇಳುತ್ತೇನೆ, ಪ್ರಧಾನ ಮಂತ್ರಿಯವರು, ಬಹಳ ಜವಾಬ್ದಾರಿಯುತವಾದ ಸ್ಥಾನದಲ್ಲಿರತಕ್ಕಂತಹ ವ್ಯಕ್ತಿ ಅಷ್ಟೊಂದು ಮಕ್ಕಳಾಟದಂತಹ ಸ್ಟೇಟ್‍ಮೆಂಟ್ ಮಾಡುತ್ತಾರೆಂದರೆ ನಾನು ನಂಬುವುದಿಲ್ಲ. ಅದರ ಬಗ್ಗೆ ಇವತ್ತು ಈ ಸಭೆಯಲ್ಲಿ ಏನು ವ್ಯಕ್ತಪಡಿಸುತ್ತಿದ್ದಾರೆ ಅದನ್ನು ನಾನು ನಿರೀಕ್ಷೆ ಮಾಡಿರಲಿಲ್ಲ. ಒಬ್ಬ ವ್ಯಕ್ತಿ

(ಶ್ರೀ ಎರ್. ಶ್ರೀಕಂಠಯ್ಯ)

ಸ್ಥಾನಕ್ಕೆ ಬಂದಮೇಲೆ ಅದಕ್ಕನುಗುಣವಾಗಿ ನಡೆಕೊಳ್ಳಬೇಕಾಗುತ್ತದೆ. ಅವರು ಮಹಾರಾಷ್ಟ್ರದ ಪರವಾಗಿ ವಕಾಲತ್ತು ಮಾಡುತ್ತಾರೆಂದು ನಮ್ಮ ಮುಖ್ಯಮಂತ್ರಿಯವರ ಬಾಯಲ್ಲಿ ಬರುವವರೆಗೂ ನಾನು ಒಪ್ಪುವುದಿಲ್ಲ. ಮುಖ್ಯಮಂತ್ರಿಯವರ ಮನಸ್ಸಿನಲ್ಲಿ ಏನಿರಬಹುದು ? ನಾನು ಪಾಪ್ಯುಲರಾಗಬೇಕು. ನನ್ನ ಪೊಪ್ಯೂಲಾರಿಟಿ ಉಳಿಸಿಕೊಳ್ಳಬೇಕು, 1972ನೇ ಇಸವಿ ಹತ್ತಿರ ಬರುತ್ತಾ ಇದೆ, ನನ್ನ ಮನೆಯ ಕಂಬಗಳು ಅಲ್ಲಾಡುತ್ತದೆಂದು ಇವರು ತಿಳಿದುಕೊಂಡಿರಬೇಕು. ಅದಕ್ಕೆ ಅವರು ಏನು ಹೊಲಸು ಕೆಲಸ ಮಾಡಿದರೂ, ಹೊಲಸು ಮಾತು ಆಡುತ್ತಇರಲಿಲ್ಲ. ಆದರೆ ಬೆಳಗಾಂನಲ್ಲಿ ಮಾತ್ರ ಹೊಲಸು ಮಾತು ಆಡಿದರು. ಎಂದೂ ಹಿಡಿತದ, ಮಾತನ್ನಾಡುವವರು, ಅಲ್ಲಿ ಹೊಲಸು ಮಾತನ್ನಾಡಿದರು. ಅಲ್ಲಿಂದ ರಾಜ್ಯದ ಸಮಸ್ಯೆ ಉಲ್ಬಣಗೊಂಡಿತು. ಅದು ಒಂದು ತಪ್ಪು ಆಯಿತು. ಆ ಮಾತನ್ನು ಮಾನ್ಯ ಸಿದ್ಧವೀರಪ್ಪನವರು ಪೇಪರ್ ಕಟಿಂಗಿನಲ್ಲಿ ಇದ್ದದನ್ನು ಹೇಳಿದ್ದಾರೆ. ಅದು ಹೀಗೆ ಇದೆ :

> "The Chief Minister spoke of external money and influence at play in shaping the decision to be taken by the Indian Government and said, it is a matter of shame that we should call at an embassy for consultations and then take decisions. With such influences at work, how can we shape our own destiny and fulfil the aspirations of our people."

ಯಾರಾದರೂ ಮುಖ್ಯ ಮಂತ್ರಿಯಾಗಿರತಕ್ಕವರು ಪ್ರಧಾನಮಂತ್ರಿ ಬಗ್ಗೆ ಆಡಬೇಕಾಗಿದ್ದ ಮಾತೇ ? ಪತ್ರಿಕೆಗಳವರು ಮತ್ತು ನ್ಯೂಸ್ ಏಜೆನ್ಸಿ ಜವಾಬ್ದಾರಿ ವ್ಯಕ್ತಿಗಳು. ಪತ್ರಿಕೆಗಳವರು ತಪ್ಪು ವರದಿ ಮಾಡುವುದಕ್ಕೆ ಹೋಗುವುದಿಲ್ಲ. ಈ ರಾಷ್ಟ್ರದಲ್ಲಿ ಜಗಳ ತಂದು ಹಾಕಬೇಕೆಂದು ಯಾವ ಪತ್ರಿಕೆಯವರಿಗೂ ಉದ್ದೇಶ ಇರುವುದಿಲ್ಲ. ಕಲಸುಮೇಲೋಗರವಾಗುವ ವಿಷಯಗಳು ಬಂದರೂ ಅದನ್ನು ಅವಾಯ್ಡ್ ಮಾಡುತ್ತಾರೆ. ಅನಿವಾರ್ಯವಾಗಿ ಸಣ್ಣದಾಗಿ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡಿದರು ಎಂದು ಹಾಕಿದ್ದಾರೆ. ಇವತ್ತು ವಾಸ್ತವವಾಗಿ ಇಂಥಾದ್ದು ನಡೆಯುತ್ತಿದೆಯೆಂದು ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದ್ದರೆ, ಆದರ ಬಗ್ಗೆ ಸರಿಯಾದ ಎವಿಡೆನ್ಸ್ ಇದ್ದರೆ ಅದನ್ನು ಪ್ರೂವ್ ಮಾಡಬಹುದು. ಮುಖ್ಯ ಮಂತ್ರಿಗಳು ಹೇಳಿದ್ದು ಪತ್ರಿಕೆಗಳಲ್ಲಿ ಬಂತು. ಪ್ರಧಾನ ಮಂತ್ರಿಗಳಿಗೆ ಈ ರಾಜ್ಯದಲ್ಲಿ ದ್ವೇಷ ಹೆಚ್ಚಿತು. ಈಗ ಪ್ರೆಸ್ ರಿಪೋರ್ಟ್ ನಮಗೆ ಗೊತ್ತಿಲ್ಲವೆಂದು ಹೇಳಿದರೆ ಹೇಗೆ ? The Hon. Chief Minister now denies the Press Report That is the crux of the whole point.

Sri B. P. GANGADHAR.—The All India Swatantra Party and its leader Sri C. Rajagopalachari are also wedded to the same ideology and he says that the Government at the Centre has something to do with Russia and Russian Embassy, and he is saying that they have been getting instructions from the Russian Embassy.

ಶ್ರೀ ಎಚ್. ಎನ್. ನಂಜೇಗೌಡ.—ಕಾಂಗ್ರೆಸ್ (ಆರ್) ಬಗ್ಗೆ ನಾನು ಮಾತನಾಡುತ್ತಾ ಇಲ್ಲ. ಸಿಂಡಿಕೇಟ್ ಪರವಾಗಿಯೂ ಮಾತನಾಡುತ್ತಾ ಇಲ್ಲ. My party views and my views may be different towards the Syndicate and it may be something else towards the Chief Minister. ನಾನು ಕಾಂಗ್ರೆಸ್ (ಆರ್) ಮತ್ತು ಇಂದಿರಾ ಗಾಂಧಿಯವರ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿರಬಹುದು. The place of Prime Minister is provided under the Constitution. ಈ ಸ್ಥಾನಕ್ಕೆ ಇರುವ ಗೌರವ ಇದ್ದೇ ಇರುತ್ತದೆ. ಅವರಿಗೆ ಗೌರವವನ್ನು ಕೊಡಬೇಕಾಗುತ್ತದೆ. ಅಂತಹವರ ಬಗ್ಗೆ ಲಘುವಾಗಿ ಮಾತನಾಡಿದರೆ ಹೇಗೆ ? * * * *

ರಾಜ್ಯಾಂಗದಲ್ಲಿ ಯಾವುದೇ ಒಂದು ಸ್ಥಾನಮಾನ ರಾಜ್ಯಾಂಗದತ್ತವಾಗಿರಬೇಕಾದರೆ ವೈಯಕ್ತಿಕವಾಗಿ ಏನು ಮಾತನಾಡಿದರೂ ಅದು ಜವಾಬ್ದಾರಿಯುತವಾಗಿರಬೇಕು. ಪ್ರಧಾನ ಮಂತ್ರಿಯವರ ಆಫೀಸು ಬಗ್ಗೆ ಮಾತನಾಡುವ ಕಾಲದಲ್ಲಿ, ಪ್ರಧಾನಮಂತ್ರಿಗಳ ಸ್ಥಾನಮಾನ, ಮತ್ತು ಅವರ

*****Matter expunged as ordered by the Chair.

ಕೆಲಸದ ಬಗ್ಗೆ ಮಾತನಾಡುವಾಗ, ಪ್ರಧಾನಮಂತ್ರಿಗಳು ಪರಕೀಯರ ಏಜೆಂಟ್ ಹಾಗೆ ನಡೆಯುತ್ತಿದ್ದಾರೆಂದು ಈ ರಾಜ್ಯದ ಮುಖ್ಯಮಂತ್ರಿಗಳು ಹೇಳುವುದಾದರೆ, ಈ ರಾಜ್ಯಕ್ಕೂ, ಕೇಂದ್ರ ಸರ್ಕಾರಕ್ಕೂ ಇರತಕ್ಕ ಸ್ನೇಹ, ಸೌಹಾರ್ದ, ಬಾಂಧವ್ಯ ಏನಾಗಬಹುದು, ಅವರು ಸೌಜನ್ಯವಾಗಿ ನಡೆದುಕೊಂಡರೆ ಏನಾಗಬಹುದೆಂಬುದನ್ನು ನೋಡಬೇಕು. ಇದರ ಬಗ್ಗೆ ನಾನು ಹೇಳಿದರೆ ತಡೆಯುತ್ತದೆ, ಮಾನ್ಯ ಶ್ರೀ ಗಂಗಾಧರ್ ಅವರು ಹೇಳಿದರೆ ತಡೆಯುತ್ತದೆ. ಆದರೆ ನಮ್ಮ ಮುಖ್ಯಮಂತ್ರಿಗಳು ಆ ರೀತಿ ಹೇಳಬಾರದು.

ಶ್ರೀ ಕೆ. ಎಚ್. ಶ್ರೀನಿವಾಸ.—ಮಾನ್ಯ ಸದಸ್ಯರು ಊಹಾಪೋಹ ಮಾಡಬಾರದು. ಅದು ಅವರ ಸ್ವತಃ ಕಲ್ಪನೆ.

ಶ್ರೀ ಎಚ್. ಎನ್. ನಂಜೇಗೌಡ.—ಬಹುಶಃ ಮುಖ್ಯಮಂತ್ರಿಗಳ ನಿರೀಕ್ಷೆ ಏನಿದೆಯೆಂದರೆ, ಕೇಂದ್ರಸರ್ಕಾರದ ವಿಚಾರವಾಗಿ ಹೀಗೆ ಹೇಳುತ್ತಾ ತಾವು ಅಧಿಕಾರದಲ್ಲಿ ಉಳಿಯಬಹುದೆಂದು ಮಾನ್ಯ ಮುಖ್ಯಮಂತ್ರಿಗಳ ಮನಸ್ಸಿನಲ್ಲಿರಬಹುದು. ಆ ರೀತಿ ಆಗುವುದಿಲ್ಲ.

ಶ್ರೀ ಬಿ. ವಿ. ಮಾಗಾವಿ.—ಮಾನ್ಯ ಶ್ರೀ ನಂಜೇಗೌಡರು ತಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ರಾಜಗೋಪಾಲಚಾರಿಯವರು ಏನೇನು ಹೇಳಿದ್ದಾರೋ ಅದನ್ನು ಹೇಳಬಹುದು. ಅವುಗಳನ್ನು ಬಿಟ್ಟು ಅದಕ್ಕೆ ವಿರೋಧವಾಗಿ ಹೇಳಬಹುದೇ ?

ಶ್ರೀ ಕೆ. ಪಿ. ನಾಡಗೌಡ.—ಮಾನ್ಯ ಶ್ರೀ ಮಾಗಾವಿಯವರಿಗೆ ಸರಿಯಾದ ವಿಷಯ ಗೊತ್ತಿಲ್ಲ. ಸ್ವತಂತ್ರ ಪಾರ್ಟಿಗೂ ಮಾನ್ಯ ಶ್ರೀ ರಾಜಗೋಪಾಲಚಾರಿಯವರಿಗೂ ಏನು ಸಂಬಂಧವಿದೆ ? ಅವರು ನಮ್ಮ ಅಧ್ಯಕ್ಷರೂ ಅಲ್ಲ. ವಿಷಯ ಗೊತ್ತಿದ್ದು ಅವರು ಕೇಳಬೇಕು.

ಶ್ರೀ ಬಿ. ವಿ. ಮಾಗಾವಿ.—ಅವರು ಸ್ವತಂತ್ರಪಾರ್ಟಿ ಫೌಂಡರ್.

Sri B. B. SAYANAK.—The founder of your party is Jawaharlal Nehru. Why you are objecting to the decision of Indira Gandhi ?

3-30 P. M.

ಶ್ರೀ ಎಚ್. ಎನ್. ನಂಜೇಗೌಡ.—ಮಹಾಜನ್ ಕಮಿಷನ್ ನೇಮಕಕ್ಕೆ ಕಾರಣವಿರಲಿಲ್ಲ. ಅಂಥ ಘನತರವಾದ ಕಾರಣವೇನಿತ್ತು ಎಂಬುದನ್ನು ಸರಕಾರ ಇಂದು ಹೇಳಬೇಕು. ಮಹಾಜನ್ ಕಮಿಷನ್ ನೇಮಕಕ್ಕೆ ಒಪ್ಪಿಗೆ ಕೊಡಬೇಕಾಗಿರಲಿಲ್ಲ.

"The Commission cannot be appointed without the consent of the two parties. If he is not aware I would like to enlighten the hon. Member about that"

ಎರಡನೆಯದಾಗಿ ಆ ಕಮಿಷನ್ ವರದಿ ಬಂದಿದೆ. ಆ ಬಗ್ಗೆ ಒಂದು ಅಭಿಪ್ರಾಯವನ್ನು ರಾಷ್ಟ್ರದಲ್ಲಿ ನಿಜಲಿಂಗಪ್ಪನವರು ಮತ್ತು ಗೆಳೆಯರು ರೂಪಿಸಿದ್ದಾರೆ, ಅವರು ಒಪ್ಪಿಕೊಳ್ಳುವುದಾಗಿ ಹೇಳಿದ್ದಾರೆ, ಆ ವರದಿಯನ್ನು ಅವಾರ್ಡು ಎಂದು ಹೇಳಬೇಕೆಂದು ತಿಳಿಸಿದ್ದಾರೆ. ಆದರೆ ಮಹಾರಾಷ್ಟ್ರದವರು ಒಪ್ಪುವುದಿಲ್ಲವೆಂದು ಹೇಳಿದರು. ಇಷ್ಟು ಆತುರವಾಗಿ ನಮ್ಮವರು ಒಪ್ಪಿದ್ದರಿಂದೇನು ಗಂಟು ಸಿಕ್ಕಿತು ? ಬರಬಾರದ ಲಾಭವೇನು ಬಂತು ? ವಾಸ್ತವವಾಗಿ ಚಿನ್ನ ಕೊಟ್ಟು ಕಬ್ಬಿಣ ಪಡೆಯುವ ಕೆಲಸ ನಡೆದಿದೆ. ಬೇಕಾದವರನ್ನು ತೃಪ್ತಿಪಡಿಸುವುದಕ್ಕೆ ಮಹಾಜನ್ ವರದಿಯನ್ನು ಅವಾರ್ಡ್ ಎಂದು ಸಾರಬೇಕೆಂದು ಹೇಳಿದ್ದಾರೆ. ಈ ಅಭಿಪ್ರಾಯವಿದೆ. ಮಹಾಜನ್ ವರದಿಯಿಂದ ಮೈಸೂರಿಗೆ ಬಲವಾದ ಗಂಟು ಬಂದಿದೆ, ಲಾಭವಾಗಿದೆ ಎಂಬ ಅಭಿಪ್ರಾಯ ರಾಷ್ಟ್ರದಲ್ಲಿ ಮೂಡುವಂತೆ ಮಾಡಿದ್ದಾರೆ. ಇದರ ಅವಶ್ಯಕತೆಯೇನಿತ್ತು ? ನಿಮಗೆ ಮುತ್ಸದ್ದಿತನವಿರಲಿಲ್ಲವೇ ? ಏಕೆ ರಾಜ್ಯದ ಹಿತರಕ್ಷಣೆ ಮಾಡಲಿಲ್ಲ ಎಂಬುದನ್ನು ಹೇಳಬೇಕು. ಆಮೇಲೆ ಇವತ್ತು ಈ ಚರ್ಚೆ ಬಂದಿದೆ, ಚರ್ಚೆ ಮಾಡುವುದು ಒಂದು ರೀತಿ, ಸದಸ್ಯರ ಅಭಿಪ್ರಾಯ ಪಡೆಯುವುದು ಒಂದು ರೀತಿ. ಈ ಮಟ್ಟದಲ್ಲಿ ಚರ್ಚೆ ನಡೆಯಬೇಕಾದ ಅವಶ್ಯಕತೆಯಿತ್ತೆ ? ಇದಕ್ಕೆ ಕಾರಣವೇನು ? ಇಂದು ಮುಖ್ಯಮಂತ್ರಿಗಳು ಗಾಳಿ ಗುದ್ದಿ ಮೈ ನೋಯಿಸಿಕೊಳ್ಳಿ ಎಂದು ಹೇಳುತ್ತಿದ್ದಾರೆ. ಕೇಂದ್ರ ಸರಕಾರದವರು ಈ ರೀತಿ ಮಾಡಿದ್ದಾರೆ ಎಂದು ಅವರು ಈ ಸಭೆಯಲ್ಲಿ ಹೇಳಬೇಕು. ಇಲ್ಲದಿದ್ದರೆ ಕೇಂದ್ರ ಸರಕಾರ ಒಪ್ಪುವುದಿಲ್ಲ. ಇಷ್ಟೆಲ್ಲಾ ಚರ್ಚೆಮಾಡಿದ ಮೇಲೆ ಒಂದು ತೀರ್ಮಾನ ಬರವಣಿಗೆಯಲ್ಲಿ

(ಶ್ರೀ ಎಚ್. ಎನ್. ನಂಜೇಗೌಡ)

ಬಂದಾಗ ನೋಡೋಣ, ಈಗ ಯಾವುದೇ ತೀರ್ಮಾನ ಬೇಡ ಎಂದರೆ ನಾವು ಸುಮ್ಮನೆ ಇರ ಬೇಕಾಗುತ್ತದೆ.

"We do not have anything on hand to show that the Government of India has become so mean in this matter and in the absence of such a statement by the Government we as a body constituted under the Constitution cannot infer anything about the Central Government or any other Government."

ಇದನ್ನು ಅರ್ಥಮಾಡಿಕೊಳ್ಳಬೇಕು. ನಾನೊಂದು ಮೋಷನ್ ಕೊಟ್ಟೆ, ಅದಕ್ಕೆ ಕಾರಣ ಇಷ್ಟೆ: ಇಲ್ಲಿ ಇಂದು 7 ಸೂಚನೆಗಳಿವೆ, ಪಾಟೀಲರದು ಓಟುಮಾಡುವಹಾಗಿಲ್ಲ. 19ರ ನಿರ್ಣಯ ನಾನು ಓದಿದೆ, ಏನು ಅನ್ಯಾಯವಾಗಿದೆ ಎಂಬುದನ್ನು ಗೋಪಾಲಗೌಡರು ಹೇಳಿದ್ದಾರೆ. 19-12-1967ರ ನಿರ್ಣಯ ಈ ರಾಜ್ಯಕ್ಕೆ ಅನ್ಯಾಯವಾಗಿದೆ ಎಂಬ ಅಂಶವನ್ನೊಳಗೊಂಡಿದೆ. ನಾಗಪ್ಪನವರ ನಿರ್ಣಯ ರೂಲ್ಸ್ ಪ್ರಕಾರ ಇದೆ. ಆದರೆ ಕನ್ನಡ ರಾಜ್ಯಕ್ಕೆ ಅನ್ಯಾಯ ವಾಗಿದೆ ಎಂಬ ಅಂಶ ಎಲ್ಲಿದೆ? ಇನ್ನು ಬೊಮ್ಮೈ ಒಂದು ನಿರ್ಣಯ ಕೊಟ್ಟಿದ್ದಾರೆ. ಇದು ಗಂಭೀರವಾದ ಪ್ರಶ್ನೆ, ಜನರ ಗಮನವನ್ನು ಸೆಳೆಯುವ ಪ್ರಶ್ನೆ. ಆದುದರಿಂದ ಅವರು ನಿರ್ಣಯ ಕೊಟ್ಟಾಗ ಪಾಯಿಂಟ್ ಆಫ್ ಆರ್ಡರ್ ತರುವುದು ಯೋಗ್ಯವಲ್ಲ ಎಂದು ನಾನು ಸುಮ್ಮನಾದೆ. ಬೊಮ್ಮೈ ಸಲಹೆ ಕೂಡ 146 ನೆ ರೂಲ್ ಪ್ರಕಾರ ಚರ್ಚೆ ನಾವು ಮಾಡಬಾರದು ಎಂಬುದೇ ಆಗಿದೆ. It is not a good precedent also to infer something. We should not by a resolution or by a substitute motion infer anything which is not a fact. ಅವರು ಹಾಗೆ ಮಾಡಿದರೆ ನಾವು ತೆಗೆದುಕೊಳ್ಳುವ ತೀರ್ಮಾನ ಕ್ರಮಬದ್ಧವಾಗಿರುವುದು. ಪ್ರಧಾನಿಯವರಿಂದ ಬರವಣಿಗೆಯಲ್ಲಿ ಏನೂ ತಿಳುವಳಿಕೆ ಬಂದಿಲ್ಲದಿರು ವುದರಿಂದ ನಾವು ನಿರ್ಣಯಮಾಡಿ ಕೇಂದ್ರಕ್ಕೆ ಕಳಿಸುವುದು ಕ್ರಮವಲ್ಲ. ಆದುದರಿಂದ ಇದನ್ನು ಡಿಸ್‌ಅಲೋ ಮಾಡುವುದಕ್ಕಿಂತ ಓಟಿಗೆ ಹಾಕುವಾಗ ಅವರು ವಾಪಸ್ಸು ಪಡೆಯಲಿ ಎಂದು ನಾನು ಸೂಚಿಸುತ್ತೇನೆ. ಇನ್ನು ಗೋಪಾಲಗೌಡರ ನಿರ್ಣಯವಿದೆ, ಅದರಲ್ಲೂ ಕೂಡ ಇನ್‌ಫರೆನ್ಸ್ ಇದೆ. ರಿಪೋರ್ಟೆಡ್ ನ್ಯೂಸ್ ಮೇಲೆ ಸಭೆ ತೀರ್ಮಾನಮಾಡುವುದಕ್ಕಾಗುವುದಿಲ್ಲ. We cannot infer something based on some news appearing in the press. ಈ ಸಭೆ ತೀರ್ಮಾನ ಮಾಡಬೇಕಾದರೆ ಇಂಡಿಯಾ ಸರಕಾರ ಹೀಗೆ ಮಾಡಿದೆ ಎಂದು ಮುಖ್ಯ ಮಂತ್ರಿಗಳು ಸ್ಪೆಷಲ್ ರೆಸಲ್ಯೂಷನ್ ತರಬೇಕು. ಆದುದರಿಂದ ಇದು ಆ ಮಟ್ಟಕ್ಕೆ ಬರುವುದು. ಇನ್ನು ಶ್ರೀಕಂಠಯ್ಯನವರು ಒಂದು ಹೈ ಪವರ್ ಕಮಿಷನ್ ನೇಮಕಮಾಡಬೇಕೆಂದು ತಿಳಿಸಿದ್ದಾರೆ. ಅಲ್ಲಿಗೆ ಮಹಾಜನ್ ಕಮಿಷನ್ ಹೈಪವರ್ ಕಮಿಷನ್ ಅಲ್ಲ ಎಂಬ ಅರ್ಥವೇ? ಆದುದರಿಂದ ಹೈ ಪವರ್ ಕಮಿಷನ್ ಬೇಕು ಎಂದು ಹೇಳುವುದು ಯೋಗ್ಯವಲ್ಲ. ಪರೋಕ್ಷವಾಗಿ ಮಹಾಜನ್ ಕಮಿಷನ್ ಹೈ ಪವರ್ ಕಮಿಷನ್ ಅಲ್ಲ ಎಂದು ಅರ್ಥಕೊಡುವ ನಿರ್ಣಯ ಮಂಡಿಸಿರುವುದು ಉಚಿತವಲ್ಲ. ಮಹಾಜನ್‌ರವರಿಗೆ ಗೌರವ ಕೊಡುವುದಾದರೆ ಅವರು ತಮ್ಮ ನಿರ್ಣಯವನ್ನು ವಾಪಸು ಪಡೆಯಬೇಕು, ಹಾಗೆ ಮಾಡುವುದು ಒಳ್ಳೆಯದು.

ಇನ್ನು ಸಿದ್ದವೀರಪ್ಪನವರು ನಾನು ಕೊಟ್ಟ ಮೋಷನ್ ಏನಿದೆ ಅದನ್ನು ಸ್ವಲ್ಪ ಉದ್ದ ಮಾಡಿ ಕೊಟ್ಟಿದ್ದಾರೆ ಅರ್ಥ ಒಂದೇ. ಆದುದರಿಂದಲೇ ನಾನು ಹೀಗೆ ಹೇಳಿದ್ದೇನೆ:

"No change in the boundaries of Mysore State fixed in the S. R. Act be made except minor changes as may be found necessary by the Zonal Council."

ಜೋನಲ್ ಕೌನ್ಸಿಲ್ ವಿಚಾರ ಹೇಳಿದ್ದೇಕೆಂದರೆ ಇಂದು ಮಾಡಿರುವ ಎಲ್ಲಗಳ ಸೂಚನೆಯಲ್ಲಿ ಹೆಚ್ಚು ಅಂಶ ಮಹಾರಾಷ್ಟ್ರ-ಮೈಸೂರು ಬೌಂಡರಿ ವಿಚಾರಕ್ಕೆ ಮಾತ್ರ ಸಂಬಂಧಪಟ್ಟಿದೆ, ಈ ರೀತಿ ಆಗಬಾರದು, ಸ್ಟೇಟಸ್ಕೋ ಮೈನ್‌ಟೈನ್ ಆದರೂ ಚಿಂತೆಯಿಲ್ಲ, ಕೊಡುವುದು ತೆಗೆದುಕೊಳ್ಳು ವುದು ಬೇಡ, ಖಾನಾಪುರದಲ್ಲಿರುವ ಅರಣ್ಯಪ್ರದೇಶ ಕೊಡಬೇಕಾಗಿಲ್ಲ. ನಿಪ್ಪಾಣಿ ಆದಾಯ ಕಳೆದುಕೊಳ್ಳಬೇಕಾಗಿಲ್ಲ. ಎಸ್. ಆರ್. ಸಿ. ಆಕ್ಟ್ ಪ್ರಕಾರ ಏನಾದರೂ ಬೇಕಾದರೆ ಜೋನಲ್ ಕೌನ್ಸಿಲ್ ಸಣ್ಣ ಪುಟ್ಟ ಬದಲಾವಣೆ ಮಾಡಿಕೊಳ್ಳಲಿ.

[MR. SPEAKER in the Chair]

ಮಹಾರಾಷ್ಟ್ರ ಮೈಸೂರು ಬೌಂಡರಿ ವೆಸ್ಟರ್ನ್‌ಜೋನಲ್ ಕೌನ್ಸಿಲ್‌ನಲ್ಲಿ ಮತ್ತು ಕೇರಳ ಮೈಸೂರು ಬೌಂಡರಿ ಸದರನ್ ಜೋನಲ್ ಕೌನ್ಸಿಲ್‌ನಲ್ಲಿ ತೀರ್ಮಾನವಾಗಲಿ. ಅದನ್ನು ಬಿಟ್ಟರೆ ಯಾವುದೇ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದೂ ಕೂಡ ಎಸ್ ಆರ್ ಸಿ ಆಕ್ಟಿಗೆ ಬದ್ಧರಾಗದೇ ಹೋದರೆ—ಇವತ್ತು ಒಂದು ಪಕ್ಷ ಕೇಂದ್ರಸರ್ಕಾರ ಸಣ್ಣತನಕ್ಕೆ ಇಳಿದು ಏನೇ ಆಗಲಿ ಮೈಸೂರು ರಾಜ್ಯಕ್ಕೆ ತೊಂದರೆ ಕೊಡಬೇಕು ಅಂತ ಮಾಡುವುದಾದರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ನಾವು ವಿಚಾರ ಮಾಡಬೇಕು. ಅವತ್ತು ನಾವು ಈ ಕಮಿಷನ್‌ಗೆ ಒಪ್ಪಿದ್ದರಿಂದ ಇವತ್ತು ಕೇಂದ್ರಸರ್ಕಾರ ನಮ್ಮ ಮೇಲೆ ಸವಾರಿ ಮಾಡುವುದಕ್ಕೆ ಅವಕಾಶವಾಯಿತು ಎಂದು ನಾನು ಹೇಳುತ್ತೇನೆ. ಕಮಿಷನ್ ಅಪಾಯಿಂಟ್‌ಮೆಂಟಿಗೆ ಒಪ್ಪದೇ ಎಸ್ ಆರ್ ಸಿ ಆಕ್ಟ್ ಪ್ರಕಾರವೇ ಆಗಬೇಕು ಒಂದು ಕಿಂಚಿತ್ತೂ ನಾವು ಇಳಿಯುವುದಿಲ್ಲ ಎಂಬ ನಿಲುವನ್ನು ಆಗ ತೆಗೆದುಕೊಂಡಿದ್ದಿದ್ದೇ ಆಗಿದ್ದರೆ ಇವತ್ತು ಕೇಂದ್ರಸರ್ಕಾರ ಈ ರೀತಿ ನಮ್ಮನ್ನು ನಡೆಸಿಕೊಳ್ಳುವುದಕ್ಕೆ ಅವಕಾಶವಾಗುತ್ತಾ ಇರಲಿಲ್ಲ ಎಂದು ಹೇಳುತ್ತೇನೆ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಇವತ್ತು ಪ್ರಧಾನ ಮಂತ್ರಿಯವರು ಸಣ್ಣತನಕ್ಕೆ ಇಳಿದು ರಾಜಕೀಯ ಕಾರಣಕ್ಕಾಗಿ ಮೈಸೂರು ರಾಜ್ಯವನ್ನು ಬಗ್ಗುಬಡಿಯಬೇಕೆಂದು ಮನಸ್ಸು ಮಾಡುತ್ತಾ ಇದ್ದಾರೆ ಎಂದು ಹೇಳುತ್ತಾ ಇರತಕ್ಕ ಗಾಳಿ ಸಮಾಚಾರ ಏನಿದೆ ಅದು ಪ್ರಧಾನ ಮಂತ್ರಿಯವರ ಕಡೆಯಿಂದ ಬಂದಿದ್ದರೆ, ನಮ್ಮ ಮುಖ್ಯಮಂತ್ರಿಗಳ ಮೇಲೆ ದ್ವೇಷ ಇರುವುದಕ್ಕೆ ಅದು ಕಾರಣವಾಗಿದ್ದರೆ ಇವತ್ತು ಪ್ರಧಾನ ಮಂತ್ರಿಗಳಿಗೆ ಈ ಸಭೆಯ ಮುಖಾಂತರ ಅರಿಕೆ ಮಾಡಿಕೊಳ್ಳುತ್ತೇನೆ, ನಮ್ಮ ಮುಖ್ಯಮಂತ್ರಿಗಳ ಮಾತಿನಿಂದ ಅವರ ಮನಸ್ಸಿಗೆ ನೋವಾಗಿದ್ದರೆ ಅದಕ್ಕೆ ವಿಷಾದ ವ್ಯಕ್ತಪಡಿಸುತ್ತೇನೆ. ಅವರನ್ನು ಕೇಳಿಕೊಳ್ಳುತ್ತೇನೆ ನಮ್ಮ ಮುಖ್ಯಮಂತ್ರಿಗಳು ಮಾಡಿದಂತಹ ಸಣ್ಣತನಕ್ಕಾಗಿ ತಾವು ಸಣ್ಣತನಕ್ಕೆ ಇಳಿಯದೆ ತಮ್ಮ ಸ್ಥಾನದ ಗೌರವಕ್ಕೆ ತಕ್ಕಂತೆ ಇಡೀ ರಾಷ್ಟ್ರದ ಪ್ರಧಾನ ಮಂತ್ರಿಗಳಂತೆ ವರ್ತಿಸಿ ತಮ್ಮ ದೊಡ್ಡತನವನ್ನು ತೋರಿಸಬೇಕೆಂದು ಈ ಸಭೆಯ ಮುಖಾಂತರ ಈ ರಾಜ್ಯದ ಪರವಾಗಿ ಅರಿಕೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನೊಂದು ಮಾತು. ನಮ್ಮ ಮುಖ್ಯಮಂತ್ರಿಗಳಿಗೂ ಮತ್ತು ನಿಜಲಿಂಗಪ್ಪನವರಿಗೂ ಇರತಕ್ಕ ಸಂಪರ್ಕ ಏನಿದೆ ಇದನ್ನು ದೆಹಲಿಯ ರಾಜಕಾರಣದಲ್ಲಿ ಸರಿಯಾಗಿ ತಿಳಿದುಕೊಳ್ಳಬೇಕು, ನಿಜಾಂಶ ಅರ್ಥಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ನಮ್ಮ ಮುಖ್ಯಮಂತ್ರಿಗಳಿಗೂ ನಿಜಲಿಂಗಪ್ಪನವರಿಗೂ ಇರತಕ್ಕ ಸಂಪರ್ಕದಿಂದ ಇವತ್ತು ದೆಹಲಿ ರಾಜಕಾರಣದಲ್ಲಿ, ಅಖಿಲಭಾರತದ ಮಟ್ಟದಲ್ಲಿ ಯಾವುದೇ ಒಂದು ಕೆಲಸವನ್ನೂ ಕೂಡ ಕಾರ್ಯಗತ ಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಅರ್ಥಮಾಡಿಕೊಳ್ಳಬೇಕು. ಫೈನಾನ್ಸ್‌ಕಮಿಷನ್ ಆಯಿತು, ಪ್ಲಾನಿಂಗ್ ಕಮಿಷನ್ ಆಯಿತು, ಕಾವೇರಿ ನೀರಿನ ವಿವಾದಕ್ಕೆ ಸಂಬಂಧಪಟ್ಟ ವಿಷಯವಾಯಿತು, ಕೃಷ್ಣಾ ಯೋಜನೆ ಆಯಿತು ಯಾವ ವಿಷಯದಲ್ಲೇ ಆಗಲಿ ನಮಗೆ ತೊಂದರೆಯಾಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ನಾನು ಶ್ರೀಮಾನ್ ಸಿದ್ಧವೀರಪ್ಪನವರ ಸೂಚನೆ ಏನಿದೆ ಅಷ್ಟು ದೂರಕ್ಕೆ ಹೋಗುವುದಿಲ್ಲ. ಇವತ್ತು ಶ್ರೀಮಾನ್ ರಾಚಯ್ಯನವರ ಕೈಯಲ್ಲಿ ನಮ್ಮ ವ್ಯವಹಾರಗಳು ಸುಗಮವಾಗಿ ನಡೆಯುತ್ತವೆ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ ಅಂತ ವದಂತಿ ಏನಿದೆ ಅದು ನಮಗೆ ಅರ್ಥವಾಗುತ್ತದೆ. ಆದ್ದರಿಂದ ಈಗ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಬರಲಿ. ಇನ್ನು 3--4 ವರ್ಷಗಳಾದ ಮೇಲೆ ವೀರೇಂದ್ರ ಪಾಟೀಲ್‌ರವರೇ ಮುಖ್ಯಮಂತ್ರಿಗಳಾಗಲಿ. ಈಗ ಅವರು ಅಲ್ಲಿಗೆ ಹೋದರೆ ಯಾವ ರೀತಿ ಕಾಣುತ್ತಾರೆ ಅಂತ ಅನ್ನುವುದನ್ನು ನಾವು ಕೇಳಿದ್ದೇವೆ. ನಮ್ಮ ಪರವಾಗಿ ವೀರೇಂದ್ರ ಪಾಟೀಲರು ದೆಹಲಿಗೆಹೋದರೆ ಬಿಚ್ಚುಮನಸ್ಸಿನಿಂದ, ಅವರನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ನಮ್ಮ ರಾಜ್ಯದ ಸಮಸ್ಯೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳತಕ್ಕ ಸಹನೆ ಕೂಡ ಇಲ್ಲದೇ ಇರತಕ್ಕಂಥ ಒಂದು ವಾತಾವರಣ ನಿರ್ಮಿತವಾಗಿದೆ. ಇದಕ್ಕೆ ವೀರೇಂದ್ರಪಾಟೀಲರದು ತಪ್ಪು ಎಂದು ನಾನು ಹೇಳುವುದಿಲ್ಲ. ಅಂತಹ ಒಂದು ವಾತಾವರಣವನ್ನು ತಿಳಿಪಡಿಸಲಿಕ್ಕೆ ನಮ್ಮ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಹಿಂದು ಮುಂದೆ ನೋಡದೆ ಮುಖ್ಯಮಂತ್ರಿಗಳು ಮುಂದೆ ಬರುತ್ತಾರೆ ಎಂದು ನಾನು ನಂಬಿದ್ದೇನೆ. ಇವತ್ತಿನ ಈ ಸೂಚನೆ ನಿರ್ಣಯ ಏನಿದೆ ಇದು ಹಿಂದೆ 19—12—67ರಲ್ಲಿ ಮಾಡಿದ ನಿರ್ಣಯಕ್ಕಿಂತಲೂ ಪ್ರಬಲವಾದ ನಿರ್ಣಯವಾಗಬೇಕು, ಹಿಂದೆ ಮಹಾಜನ್ ಕಮಿಷನ್ ವರದಿಯನ್ನು ವಿಶಾಲ ಭಾವನೆಯಿಂದ ಒಪ್ಪಿಕೊಳ್ಳಲಾಯಿತು. ಇಂದಿನ ಪರಿಸ್ಥಿತಿಯಲ್ಲಿ ಎಸ್.ಆರ್.ಸಿ. ಆಕ್ಟ್ ಪ್ರಕಾರವೇ ಬೌಂಡರಿ ಇರಬೇಕು, ಸಣ್ಣಪುಟ್ಟ ಬದಲಾವಣೆಗಳನ್ನು ಜೋನಲ್ ಕೌನ್ಸಿಲ್‌ನಲ್ಲಿ ಮಾಡಬೇಕು, ಕೇಂದ್ರಸರ್ಕಾರವೇ ಕ್ರಮ ಕೈಕೊಂಡು ಇದೆಲ್ಲವನ್ನೂ

(ಶ್ರೀ ಎಚ್. ಎನ್. ನಂಜೇಗೌಡ)

ಮಾಡಬಾರದು ಎಂದು ಕೇಳಿಕೊಂಡು ಎಲ್ಲರೂ ಕೂಡ ನನ್ನ ಸೂಚನೆಗೆ ಬೆಂಬಲ ಕೊಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. 10—15 ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ ಗ್ರಾಮಾಂತರ).—ಮಾನ್ಯ ಅಧ್ಯಕ್ಷರೆ, ಈ ದಿವಸ ಶ್ರೀಮಾನ್ ಪಿ. ಎನ್. ಪಾಟೀಲರು ಇಟ್ಟಂಥ ಪ್ರಸ್ತಾವನೆಯನ್ನು ಅನುಮೋದಿಸುತ್ತಾ, ಗೋಪಾಲಗೌಡರು ಮಂಡಿಸಿದಂತಹ ಠರಾವನ್ನು ಅನುಮೋದಿಸುತ್ತಾ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಈಗ ಮಾನ್ಯ ಗೋಪಾಲಗೌಡರು ಈ ಮನೆಯಲ್ಲಿ ಇಲ್ಲ, ಅವರು ತಂದಂಥ ಠರಾವಿನಲ್ಲಿ ನಾನು ಒಂದೇ ಒಂದು ತಿದ್ದುಪಡಿಯನ್ನು ಸೂಚನೆ ಮಾಡಬಯಸುತ್ತೇನೆ. ಅದು ಈ ರೀತಿ ಇದೆ:—

'ಡಿಬೇಟೆಡ್ ಆನ್ ಫಿಫ್‌ಟೀಂತ್' ಎಂದು ಇವಿದೆ ಅದನ್ನು 'ಮಾವ್ಡ್ ಆನ್ ಫಿಫ್‌ಟೀಂತ್ ಅಂಡ್ ಡಿಬೇಟೆಡ್ ಆನ್ ಟ್ವೆಂಟಿಯತ್' ಎಂದು ತಿದ್ದುಪಡಿ ಮಾಡಿಕೊಳ್ಳಬೇಕಾಗಿದೆ. ಅನಂತರ ಈ ದಿವಸ ನಾನು ಮಾತನಾಡಬೇಕೆಂದರೆ ಬಹಳ ವ್ಯಥೆಯಿಂದ ಮತ್ತು ದುಃಖದಿಂದ ಮತ್ತು ಬಹಳ ಕಳವಳದಿಂದ ಮಾತನಾಡಬೇಕಾಗಿದೆ. ಈ ದಿವಸ ನಮ್ಮ ಮುಂದಿರುವ ವಿಷಯ ಬಹಳ ಮಹತ್ತರವಾದ ವಿಷಯ. ಇಡೀ ಕನ್ನಡಗರಿಗೆ ಅಲ್ಲ, ಇಲ್ಲಿ ಇರುವಂಥ ಎಲ್ಲಾ ಸದಸ್ಯರಿಗೆ ಬಹಳ ಅಭಿಮಾನವನ್ನು ತರುವಂಥದ್ದು ಮತ್ತು ಸಂಘಟಣೆಯಿಂದ ನಾವು ನಮಗೆ ಆದಂಥ ಅನ್ಯಾಯವನ್ನು ಎದುರಿಸಬೇಕಾಗಿ ಬಂದಿದೆ. ಯಾರೂ ಕನ್ನಡ ನಾಡಿನ ಬಗ್ಗೆ ಎಂತಹ ತ್ಯಾಗವನ್ನು ಕೂಡ ಮಾಡಲು ಹಿಂಜರಿಯುವುದಿಲ್ಲ ಎನ್ನುವ ಮಾತನ್ನು ಸ್ಪಷ್ಟಪಡಿಸುತ್ತೇನೆ. ಈಗ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ತಮ್ಮ ಉದ್ದೇಶ ಸಾಧನೆಗಾಗಿ ಈ ಠರಾವನ್ನು ವಿರೋಧ ಮಾಡಬಹುದು. ಅದು ಅಷ್ಟು ಮಹತ್ತರವಾದ ವಿಷಯ ಅಲ್ಲ. ಅವರು ಈ ಒಂದು ಕಾರಣದಿಂದ ಚುನಾಯಿತರಾಗಿ ಇಲ್ಲಿಗೆ ಆರಿಸಿ ಬಂದಿಲ್ಲ. ಮಹಾರಾಷ್ಟ್ರಕ್ಕೆ ನಮ್ಮ ಗಡಿ ಪ್ರದೇಶಗಳು ಹೋಗಬೇಕೆಂದು ಅವರ ಎಲೆಕ್ಷನ್ ಮಾನಿಫೆಸ್ಟೋನಲ್ಲಿ ಹೇಳಲಿಲ್ಲ. ಅವರು ಕಾಂಗ್ರೆಸ್ಸ್ ವಿರುದ್ಧ ಮತಗಳಿಸಿ ಇಲ್ಲಿಗೆ ಬಂದಿದ್ದಾರೆ. ಆದುದರಿಂದ ಅವರು ವಿರೋಧ ಮಾಡಿದರೆ ಅದು ದೊಡ್ಡ ಪ್ರಶ್ನೆ ಅಲ್ಲ. ಬೆಳಗಾಂ ಬಗ್ಗೆ ನಾನು ಹೇಳಬೇಕೆಂದರೆ ನನಗೆ ಬಹಳ ವ್ಯಥೆಯಾಗುತ್ತದೆ. ಅಂತಹ ಪರಿಸ್ಥಿತಿ ಈಗ ಬಂದು ಬಿಟ್ಟಿದೆ. ನಾನು ಇದ್ದಂತ ಮನೆ ನನ್ನ ಮನೆ, ಅಪ್ಪನ ಮನೆ, ಅಜ್ಜನ ಮನೆ ಎಂದು ಹೇಳುವ ಪ್ರಸಂಗ ಬಂದಿದೆ. ಕೋರ್ಟಿನಲ್ಲಿ ಮಾಜಿಸ್ಟ್ರೇಟರಮುಂದೆ ನಿಮ್ಮ ಮನೆ ಹೌದೋ ಅಲ್ಲವೋ ಎಂದು ಕೇಳಿದಾಗ ಇದು ನಮ್ಮ ಅಪ್ಪನ ಮನೆ, ಅಜ್ಜನ ಮನೆ ಎಂದು ಹೇಳುವ ಕಾಲ ಬಂದಿದೆ. ಯಾವಾಗ ಜಗತ್ತು ಹುಟ್ಟಿತೋ ಆಗ ಭಾರತ ಹುಟ್ಟಿತು. ಅದರ ಜೊತೆಯಲ್ಲೇ ಬೆಳಗಾಂ ಹುಟ್ಟಿತು. ಈವೊತ್ತಿನ ದಿವಸ ಈವೊತ್ತಿನವರೆಗೂ ಬೆಳಗಾಂ ಕರ್ಣಾಟಕದ್ದು ಎಂದು ದೇವರು ನಿರ್ಮಿಸಲ್ಪಟ್ಟ ಮಾನವರು ಹೇಳಿದರು. ಮಹಾತ್ಮಗಾಂಧಿಯವರು ಕೂಡ ಹಾಗೆಯೇ ಹೇಳಿದರು. ಇಲ್ಲಿಗೆ ಈಗ ಆರಿಸಿ ಬಂದಂಥ ಸದಸ್ಯರು ಆಗ ಬೆಳಗಾಮಿನಲ್ಲಿ ಇರಲಿಲ್ಲ. ಕನ್ನಡ ನಾಡು ಫಲವತ್ತಾದ ಪ್ರದೇಶ. ವ್ಯಾಪಾರ ಮತ್ತು ನೌಕರಿಯನ್ನು ಹುಡಿಕಿಕೊಂಡು ಕೆಲಸಮಾಡಲು ಮಹಾರಾಷ್ಟ್ರಕ್ಕೆ ಮತ್ತು ಬೆಳಗಾಮಿಗೆ ಕೆಲವರು ಬಂದರು. ಯಾರು ಬಂದರೂ ಸ್ವಾಗತ ಮಾಡುವ ಚಟ ಕನ್ನಡಿಗರದ್ದು. ಆ ರೀತಿ ಅವರನ್ನು ನಾವು ಸ್ವಾಗತಿಸಿದ್ದೇವೆ. ಕೆಚ್ಚೆದೆಯ ಕನ್ನಡಿಗರು ಆದಂಥ ನಾವು ಎಲ್ಲರನ್ನೂ ಸ್ವಾಗತ ಮಾಡುತ್ತಾ ಬಂದೆವು. ಅನಂತರ ಬ್ರಿಟಿಷರು ಆಳುತ್ತಾ ಬಂದರು.

Sri P. B. NANDIHALI.—A point of Order, Sir. My hon, friend Sri Agnihotri is misleading the House on behalf of the Maharastra Ekikarana Samithi. We have clearly contested the elections on the border issue. The second thing is I am very sorry to hear my friend saying that Marathi people came to Belgaum in search of appointment and business.

Mr. SPEAKER.- There is no point of order. Hon. Member may continue his speech.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಪರದೇಶದವರು ನಮ್ಮನ್ನು ಆಳುತ್ತಾ ಬಂದರು. ಆಗ ಧಾರವಾಡ ಡಿವಿಜನ್‌ನಲ್ಲಿ ಬೆಳಗಾಂ ಇತ್ತು. ಅನಂತರ 1924ನೆ ಇಸವಿಯಲ್ಲಿ ಮಹಾತ್ಮಗಾಂಧಿಯವರ ನೇತೃತ್ವದಲ್ಲಿ ಅಖಿಲಭಾರತ ಕಾಂಗ್ರೆಸ್ ಸಮಿತಿ ಸಭೆ ಕೂಡಿತು. ಆಗ ಕನ್ನಡ ನಾಡಿನ

ವರು ಸ್ವಾಗತ ಮಾಡಿದ್ದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ಮಹಾತ್ಮಗಾಂಧಿಯವರು ಹೇಳಿದರು. ಅನಂತರ 18 ವರ್ಷಗಳ ಪರ್ಯಂತರ ಇಂಡಿಯಾದ ಪ್ರಧಾನ ಮಂತ್ರಿಗಳಾಗಿದ್ದ ಪಂಡಿತ ಜವಹರ್‌ಲಾಲ್ ನೆಹರೂರವರು ಕೂಡ ಬೆಳಗಾಂ ಕನ್ನಡ ನಾಡಿಗೆ ಸೇರಿದ್ದು ಎಂದು ಹೇಳಿದರು. ಯಾವ ರಾಜಕೀಯಕ್ಕೂ ಪ್ರವೇಶ ಮಾಡದೆ ಜಯಪ್ರಕಾಶ್ ನಾರಾಯಣರವರೂ ಕೂಡ ಬೆಳಗಾಂ ಕನ್ನಡ ನಾಡಿಗೆ ಸೇರಿದ್ದು ಎಂದು ಹೇಳಿದ್ದಾರೆ. ಪಟ್ಟಾಭಿಸೀತಾರಾಮಯ್ಯನವರು ಹಾಗೆ ಹೇಳಿದ್ದಾರೆ. ಕೇಲಕರ್ ಸಮಿತಿಯವರೂ ಅವರು ಬೆಳಗಾಂ ವಿಚಾರದಲ್ಲಿ ಅದೇ ಮಾತನ್ನು ಹೇಳಿದ್ದಾರೆ. ಹೀಗೆ ರಾಷ್ಟ್ರಕ್ಕಾಗಿ ತ್ಯಾಗ ಮಾಡಿದಂಥ ಹಿರಿಯರೆಲ್ಲರೂ ಕೂಡ ಬೆಳಗಾಂ ಕನ್ನಡ ನಾಡಿಗೆ ಸೇರಿದ್ದು ಎಂದು ಹೇಳುತ್ತಾ ಬಂದರು. ಯಾರೂ ಯಾವ ಮಹಾರಾಷ್ಟ್ರದವರೂ ಬೆಳಗಾಂ ಅವರಿಗೆ ಸೇರಿದ್ದು ಎಂದು ಹೇಳಲಿಲ್ಲ. ಭಾಷಾವಾರು ಪ್ರಾಂತ್ಯ ಆಗಬೇಕೆಂದು ಯಾರು ಕೇಳಿದರು ? ಆಂಧ್ರದಲ್ಲಿ ಪೊಟ್ಟಿ ಶ್ರೀರಾಮುಲುರವರು ಉಪವಾಸ ಮಾಡಿದ್ದರಿಂದ ಭಾಷಾವಾರು ಪ್ರಾಂತ್ಯಗಳು ಆದವು. ಆಗ ನಮಗೆ ನಮ್ಮ ಭಾಗದ ಕನ್ನಡ ರಾಜ್ಯ ಸಿಕ್ಕಿತು. ಆ ಕಾಲದಲ್ಲಿಯೇ ಕನ್ನಡ ರಾಜ್ಯ ಆಯಿತು.

4-00 P. M.

ಕನ್ನಡ ರಾಜ್ಯವೆಂದರೆ ಯಾವ ಪ್ರಕಾರವಾಗಬೇಕು ಎಂದು ವಿಚಾರ ಮಾಡಿ ಪಾರ್ಲಿಮೆಂಟಿನವರು ಫಜಲ್ ಅಲಿ ಕಮಿಷನ್ ನೇಮಿಸಿದರು. ಅದೇ ಪ್ರಕಾರ ಮಾಡಬೇಕು ಎಂದು ಹಿಂದೂಸ್ತಾನವನ್ನು ಭಾಷಾವಾರು ಪ್ರಕಾರ ವಿಭಜಿಸಿದರು. ಅವಾಗ ಕೂಡ ಅವರು ಏನು ನಿರ್ಣಯ ಕೊಟ್ಟರು ಎಂದರೆ ಹೈ ಪವರ್ ಕಮಿಷನ್ ಎಂದು ಹೇಳಿದರು. ಸಜ್ಜನಿಕೆ ಮತ್ತು ಕಾಯಿದೆಬದ್ಧವಾಗಿ ನಡೆಯತಕ್ಕ ಕನ್ನಡಿಗರು ಆ ನಿರ್ಣಯಕ್ಕೆ ವಿರೋಧ ಮಾಡಲಿಲ್ಲ, ಆ ಪ್ರಕಾರ ನಡೆದುಕೊಂಡಿದ್ದಾರೆ. ಆ ಪ್ರಕಾರವಾಗಿ ಅದು ನಮ್ಮ ಪ್ರದೇಶ ಎಂದು ಕಾರ್ಯಗತ ಮಾಡಿಕೊಂಡು ಬಂದೆವು. ಅದರಲ್ಲಿ ಬೆಳಗಾಂ ಕನ್ನಡಿಗರದ್ದು ಎಂದು ಫಜಲ್ ಅಲಿಯವರು ಹೇಳಿದರು. ಕೆಲವು ರಾಜಕೀಯ ಮುಖಂಡರು ಬೆಳಗಾಮಿನ ಕೆಲವು ಭಾಗ ಬರಬೇಕು, ಷೋಲಾಪುರದ ಕೆಲವು ಭಾಗ ಬರಬೇಕು ಎಂದು ಏನು ಬೇಕಾದರೂ ಹೇಳುತ್ತಾರೆ. ಹಿಂದೆ ಭಾಷಾವಾರು ಪ್ರಾಂತಗಳ ರಚನೆಯಾದಾಗ ಮಹಾರಾಷ್ಟ್ರ ಬೇರೆ ರಾಜ್ಯವಾಗಿ ಆಗಲಿಲ್ಲ. ಅದು ಕನ್ನಡ ರಾಜ್ಯವಾದ ಮೇಲೆ ಹಿಂದೆ ಆದದ್ದು. ಹೇಗೆ ಎಂದರೆ ಮುಂಬೈ ಪ್ರದೇಶದಲ್ಲಿ ಅವರೂ ಇದ್ದರು. ಮುಂಬೈ ರಾಜ್ಯ ಬೈಲಿಂಗ್ವಲ್ ಸ್ಟೇಟ್ ಆಗಿತ್ತು. ಅವಾಗ ಒಬ್ಬರೂ ಮಾತನಾಡಲಿಲ್ಲ. ಮಾತನಾಡಿದ್ದರೆ ಯಾವುದಕ್ಕೂ ಜವಹರಲಾಲ್ ನೆಹರೂ ಅವರು ಒಪ್ಪುತ್ತಿರಲಿಲ್ಲ. ಶ್ರೀಮತಿ ಇಂದಿರಾ ಗಾಂಧಿಯವರು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಮಹಾರಾಷ್ಟ್ರೀಯರು ಪ್ರಯತ್ನ ಮಾಡಿ ಪಡೆದುಕೊಂಡರು. ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳ ರಚನೆಯಾದಾಗ ಹಳ್ಳಿಯನ್ನು ಘಟಕವಾಗಿ ಹಿಡಿಯಿರಿ ಎಂದು ಯಾರೂ ಕೇಳಲಿಲ್ಲ. ಈ ಹೊತ್ತು ಮಾನ್ಯ ಕದಂ ಅವರು ದಿವಂಗತ ಪಾಟಸ್ಕರ್ ಅವರು ಹೇಳಿದ್ದಾರೆ ಎಂದು ಹೇಳುತ್ತಿದ್ದಾರೆ. ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಒಂದು ರೀತಿ ಮಾಡಿಕೊಂಡು ಈಗ ಮತ್ತೊಂದು ರೀತಿ ಹೇಳುತ್ತಿದ್ದಾರೆ. ಬಸವಣ್ಣನವರು ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ಎಂದು ಹೇಳಿದ್ದಾರೆ. ಮಹಾರಾಷ್ಟ್ರದ ರಾಜಕಾರಣಿಗಳು ಎಲ್ಲಿಯೂ ಸೇರುವವರಲ್ಲ. ಅವರಿಗೆ ಕನ್‌ವಿನ್ಸ್ ಮಾಡುವುದು ಕಷ್ಟವಿದೆ. ನಮ್ಮ ಹಿರಿಯರಾದ ಚನ್ನಯ್ಯನವರು ಮುಂತಾದವರಿಗೇ ಸಾಧ್ಯವಾಗಿಲ್ಲ. ಸುದೈವದಿಂದಲೋ, ದುರ್ದೈವದಿಂದಲೋ ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಮನ್ನಣೆಯನ್ನು ಕೊಡಲೇಬೇಕು, ಆ ಪ್ರಕಾರ ನಡೆಯಲೇಬೇಕು. ಕೆಲವೊಂದು ವಿಷಯಗಳಲ್ಲಿ ನನ್ನ ಮನಸ್ಸಿಗೆ ವಿರೋಧವಾದ ತೀರ್ಮಾನವಾಗಬಹುದು. ಬಹುಮತಕ್ಕೆ ಮನ್ನಣೆಯನ್ನು ಕೊಡಬೇಕು ಎನ್ನುವುದನ್ನು ತಿಳಿದುಕೊಳ್ಳದೆ ಹೋದರೆ ಪ್ರಜಾಪ್ರಭುತ್ವ ಬಹಳ ದಿವಸ ಉಳಿಯಲಿಕ್ಕೆ ಸಾಧ್ಯವಿಲ್ಲ. ಶ್ರೀ ನಿಜಲಿಂಗಪ್ಪನವರು ಏನೂ ಮಾಡಲಿಲ್ಲ, ಶ್ರೀ ಚನ್ನಯ್ಯನವರು ಏನೂ ಮಾಡಲಿಲ್ಲ, ನಮ್ಮ ರಾಜ್ಯದ ಮುಖ್ಯ ಮಂತ್ರಿಗಳು ಏನೂ ಮಾಡಲಿಲ್ಲ ಎಂಬ ಹೇಳುವುದು ಅಷ್ಟು ಒಳ್ಳೆಯದಲ್ಲ, ಅಷ್ಟು ಯೋಗ್ಯವಲ್ಲ ಎನ್ನುವ ಮಾತನ್ನು ನೊಂದ ಮನಸ್ಸಿನಿಂದ ಹೇಳಬಯಸುತ್ತೇನೆ. ಇಬ್ಬರು ಪ್ರತಿನಿಧಿಗಳು ಮಹಾರಾಷ್ಟ್ರದಿಂದ ಬರಬೇಕು, ಇಬ್ಬರು ಮೈಸೂರಿನಿಂದ ಬರಬೇಕು ಎಂದು ಹೇಳಿದಾಗ ಶ್ರೀ ಮಳಿಮಠ ಅವರೂ ಶ್ರೀ ಎಸ್. ಚನ್ನಯ್ಯ ಅವರೂ ನಮ್ಮ ರಾಜ್ಯದ ಪರವಾಗಿ ಹೋಗಿದ್ದರು. ಅವರು ತಮ್ಮ ಕೆಲಸವನ್ನು ಮಾಡಿದ್ದಾರೆ. ಅವರು ರಾಜ್ಯದ ಪರವಾಗಿ ಏನೂ ಮಾಡಲಿಲ್ಲವೆಂದರೆ ತಪ್ಪಾದೀತು. ಅವರು ಮಾಡಿದಂಥ ಸೇವೆಯನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ಹಿಂದೆ ಮುಖ್ಯ ಮಂತ್ರಿಯವರಾಗಿ ಇದ್ದವರು, ಈಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಅವರು ಕನ್ನಡ ನಾಡಿನ ಬಗ್ಗೆ ಏನೂ

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಮಾಡಲಿಲ್ಲವೆಂದು ಯಾರಾದರೂ ಹೇಳಿದರೆ ಅದನ್ನೂ ಒಪ್ಪುವುದಕ್ಕಾಗುವುದಿಲ್ಲ. ಮಾನ್ಯ ಗೆಳೆಯರಾದ ದಯಾನಂದ ಸಾಗರ್ ಅವರು ಹಿಂದಿನ ಮುಖ್ಯ ಮಂತ್ರಿಗಳು ಏನು ಮಾಡಿದರು ಎಂದು ಕೇಳಿದರು. ಅದು ನನಗೆ ಬಹಳ ದುಃಖವನ್ನುಂಟು ಮಾಡಿತು. ಅವರ ಮಂತ್ರಿಮಂಡಲದಲ್ಲಿ ಇವರು ಉಪಮಂತ್ರಿಗಳಾಗಿದ್ದವರು. ಅದು ಅವರ ಸಾಮೂಹಿಕ ಜವಾಬ್ದಾರಿ. ಅಂಥವರು ಈಗ ಹಿಂದೆ ಇದ್ದ ಮುಖ್ಯಮಂತ್ರಿಯವರ ಬಗ್ಗೆ ಏನಾದರೂ ಹೇಳಿದರೆ ಅದನ್ನು ಯಾರೂ ಒಪ್ಪುವುದಕ್ಕೆ ಬರುವುದಿಲ್ಲ. ಹೊರಗಡೆ ಯಾರು ಮಾತನಾಡಿದ್ದೂ ಯಾರೂ ಬರೆದುಕೊಳ್ಳುವುದಿಲ್ಲ. ಇಲ್ಲಿ ಮಾತನಾಡುವಾಗ ಎಲ್ಲವನ್ನೂ ಬರೆದುಕೊಳ್ಳಲಾಗುತ್ತದೆ. ಮುಂದೆ ನಮ್ಮ ಪೀಳಿಗೆಯವರು ಇಂಥ ಕಡೆ ಹೀಗಿದೆ. ಇಂಥ ಕಡೆ ಹೀಗೆ ಹೇಳಿದ್ದಾರೆ ಎನ್ನುವುದನ್ನು ನೋಡುತ್ತಾರೆ. ಮುಂದಿನ ಪೀಳಿಗೆ ನಮ್ಮಷ್ಟು ದಡ್ಡರಲ್ಲ, ಅತಿಶಯ ಜಾಣರು.

ಪತ್ರಿಕೆಗಳಲ್ಲಿ ಬಂದಿರುವಂತೆ ನಮ್ಮ ಪ್ರಧಾನ ಮಂತ್ರಿಗಳ ವಿಚಾರ ಹೇಗಿದೆ ಎನ್ನುವ ಊಹೆಯಿಂದ ನಮ್ಮಲ್ಲಿ ಕಳವಳವುಂಟಾಗಿ ಈ ಮಾತನ್ನು ಹೇಳಬೇಕಾಗಿದೆ. ನಿರ್ದಿಷ್ಟವಾಗಿ ಇದೇ ಪ್ರಕಾರ ಮಾಡುತ್ತಾರೆಂದು ಗೊತ್ತಿಲ್ಲ. ಅದೆಲ್ಲ ಗೊತ್ತಾದಾಗ ಮಾಡೋಣ ಎನ್ನುವುದು ತಪ್ಪಾದೀತು ಎನ್ನುವ ದೃಷ್ಟಿಯಿಂದ ನಾವು ವಿಚಾರ ಮಾಡಬೇಕಾಗಿದೆ

497 ಹಳ್ಳಿಗಳು ಈಗ ಮಹಾರಾಷ್ಟ್ರಕ್ಕೆ ಹೋಗಿ ಬಿಡಲಿ, ಬೆಳಗಾಂನಲ್ಲಿ ರೈಲ್ವೆ ಲೈನಿನ ದಕ್ಷಿಣದ ಭಾಗ ಮಹಾರಾಷ್ಟ್ರಕ್ಕೆ ಹೋಗಲಿ, ಐದು ಲಕ್ಷ ಜನರು ಹೋಗಿ ಬಿಡಲಿ ಎನ್ನುವಂಥ ವರದಿಗಳು ಪತ್ರಿಕೆಗಳಲ್ಲಿ ಬಂದಿವೆ. ಪತ್ರಿಕೆಗಳಲ್ಲಿ ಬಂದಿರುವುದು ನಿಜವಲ್ಲದೆ ಇದ್ದಲ್ಲಿ ಒಳ್ಳೆಯದು. ಆಕಸ್ಮಾತ್ ನಿಜವಿದ್ದರೆ ಅದನ್ನು ನಾವು ಪ್ರತಿಭಟಿಸಲೇ ಬೇಕು, ಕನ್ನಡ ನಾಡಿನ ಕೆಚ್ಚೆದೆಯ ಶೂರರಾಗಿ, ಧೀರರಾಗಿ ಕೆಲಸ ಮಾಡಬೇಕು.

ಈಗ ಇರುವಂಥ ಪ್ರಸಂಗದೊಳಗೆ ಒಂದೇ ಒಂದು ಠರಾವು ಬರಬೇಕಾಗಿತ್ತು. ಆದರೆ ಅನೇಕ ಮಿತ್ರರು ಅನೇಕ ಠರಾವುಗಳನ್ನು ಮಂಡಿಸಿದ್ದಾರೆ. ಇಂಥ ಒಂದು ಕಠಿಣ ಪ್ರಸಂಗದಲ್ಲಿ ಎಲ್ಲ ಮಾನ್ಯ ಸದಸ್ಯರೂ ತಮ್ಮ ತಮ್ಮ ಠರಾವುಗಳನ್ನು ಹಿಂತೆಗೆದುಕೊಂಡು, ಒಂದೇ ಠರಾವನ್ನು ಮಂಡಿಸಿ ಅದನ್ನು ಅಂಗೀಕರಿಸಿ, ಕೇಂದ್ರ ಸರ್ಕಾರದ ಮತ್ತು ಕೇಂದ್ರದ ನಾಯಕರ ಮನ ಒಲಿಸಿಕೊಂಡು ನಮಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸಬೇಕೆಂದು ಹೇಳಬಯಸುತ್ತೇನೆ. ಈಗ ಫಜಲಾಲಿ ಕಮಿಷನ್ ರಿಪೋರ್ಟ ಪ್ರಕಾರ ನಡಕೊಳ್ಳೋಣ ಎಂದು ಸಿದ್ಧವೀರಪ್ಪನವರು ನಿರ್ಣಯ ಮಂಡಿಸಿದ್ದಾರೆ. ಕೇಂದ್ರ ಸರಕಾರದ ನೀತಿಗೆ ಒಪ್ಪಿಕೊಳ್ಳೋಣ ಎಂದು ಮಂಡಿಸಿದ್ದಾರೆ. ಈ ಹಿಂದೆ 1967 ರಲ್ಲಿ ಈ ಸಭೆಯಲ್ಲಿ ನಾವು ಒಂದು ಠರಾವು ಮಾಡಿದ್ದೇವೆ. ಮಹಾಜನ್ ಕಮಿಷನ್ ವರದಿ ಇನ್ ಟೋಟೋ ಒಪ್ಪಿಕೊಳ್ಳಬೇಕು ಎಂದು ಸರ್ವಾನುಮತದಿಂದ—ಮಹಾರಾಷ್ಟ್ರ ಏಕೀಕರಣ ಸದಸ್ಯರನ್ನು ಸೇರಿಸದೆ—ಠರಾವು ಮಾಡಿದ್ದೇವೆ. ಶ್ರೀ ಸಿದ್ಧವೀರಪ್ಪನವರು ನಮಗೆಲ್ಲರಿಗೂ ಹಿರಿಯರಾಗಿದ್ದಾರೆ, ನಮಗೆ ಬುದ್ಧಿ ಹೇಳುತ್ತಾರೆ, ಅವರ ಬಗ್ಗೆ ಭಕ್ತಿ ಶ್ರದ್ಧೆ ಇಟ್ಟುಕೊಂಡಿದ್ದೇವೆ. ಫಜಲಾಲಿ ಕಮಿಷನ್ ವರದಿ ಒಪ್ಪಿಕೊಳ್ಳಬೇಕೆಂದು ಆಗ್ಗೆ ಅವರು ಹೇಳಿದ್ದು ಅವರು ತಪ್ಪು ಮಾಡಿದ್ದಾರೆ ಎಂದು ಹೇಳುವುದಿಲ್ಲ. ಯಾಕೆಂದರೆ ಆಗ್ಗೆ ಅವರು ಜನತಾ ಪಾರ್ಟಿ ಸದಸ್ಯರಾಗಿದ್ದರು. ಎಸ್.ವಿ.ಡಿ. ಇದ್ದಾಗ ಅವರು ಅದರ ಸದಸ್ಯರಿದ್ದರು. ಆದರೆ ಈಗ ಅವರು ಜವಾಬ್ದಾರಿಯಿಂದ ಮಾತನಾಡಬೇಕಾಗಿದೆ. ಈಗ ಇಂಡಿಕೇಟ ಗ್ರುಪ್, ಆರ್ ಕಾಂಗ್ರೆಸ್ಸಿನ ಲೀಡರ್ ಆಗಿದ್ದಾರೆ. ಒಬ್ಬ ಲೀಡರ್ ಆಗಿ ಈ ಸೂಚನೆಗಳನ್ನು ಅವರು ಮಂಡಿಸಿದ್ದಾರೆ. ಈ ರಾಜಕೀಯದಲ್ಲಿ ಸಾಮಾನ್ಯ ಸದಸ್ಯನಾಗಿ ಮಾತನಾಡುವುದು ಬೇರೆ, ಲೀಡರ್ ಆಗಿ ಮಾತನಾಡುವುದು ಬೇರೆ. ನಿಜಲಿಂಗಪ್ಪನವರ ಬಗ್ಗೆ ಹೇಳುವುದು ಅದರ ಬಗ್ಗೆ ತಂಟೆಗೆ ಹೋಗುವುದಿಲ್ಲ. ಹಿರಿಯರಾದ ಅವರು ಕಾಂಗ್ರೆಸ್ ಆರ್ ಲೀಡರ್ ಆಗಿ ಮಾತನಾಡಿದರು. ಆದುದರಿಂದ ಅವರ ಎರಡೂ ಹೇಳಿಕೆಗಳನ್ನು ತುಲನೆ ಮಾಡಿ ನೋಡಬೇಕು. ಕನ್ನಡ ನಾಡಿನ ಬಗ್ಗೆ ಅವರಿಗೆ ಕಡಿಮೆ ಭಾವನೆ ಇದೆ ಎಂದು ಯಾರೂ ತಿಳಿದುಕೊಳ್ಳಬಾರದು. ಆದರೂ ಕೆಲವು ಸಂಗತಿ ಇಲ್ಲಿ ಹೇಳಬೇಕಾಗಿದೆ. ಶ್ರೀಮಾನ್ ನಿಜಲಿಂಗಪ್ಪನವರು ಮುಂಬಯಿಯಲ್ಲಿ ನಡೆದ ವರ್ಕಿಂಗ್ ಕಮಿಟಿಯಲ್ಲಿ ಹೇಗೆ ಒಪ್ಪಿಕೊಂಡರು ? ಆ ನಿರ್ಣಯ ತೆಗೆದುಕೊಂಡಾಗ್ಗೆ ಪ್ರತಿಭಟನೆ ಏತಕ್ಕೆ ಮಾಡಲಿಲ್ಲ ? ಎಂದು ಅವರು ಕೇಳಿದರು. ಮುಂಬಯಿಯಲ್ಲಿ 9-10-1966 ರಂದು ಎ.ಐ.ಸಿ.ಸಿ. ವರ್ಕಿಂಗ್ ಕಮಿಟಿ ಒಂದು ನಿರ್ಣಯ ತೆಗೆದುಕೊಂಡರು. ಆಗ್ಗೆ ಅದರಲ್ಲಿ ನಿಜಲಿಂಗಪ್ಪನವರು ಒಬ್ಬ ಸದಸ್ಯರು ಆಗಿದ್ದರು. ವರ್ಕಿಂಗ್ ಕಮಿಟಿಯಲ್ಲಿ ಒಬ್ಬ ಸದಸ್ಯರಾಗಿದ್ದರೂ ಕೂಡ ಹೇಗೆ ಒಪ್ಪಿಕೊಂಡರು ?

ಇದರಿಂದ ಅವರು ಅನ್ಯಾಯ ಮಾಡಿದ್ದಾರೆ ಎಂದು ಯಾರೂ ಭಾವಿಸಬಾರದು. ವರ್ಕಿಂಗ್ ಕಮಿಟಿ ಠರಾವು ಓದಿ ತೋರಿಸುತ್ತೇನೆ:

"Taking into consideration the fundamental basis of the reorganisation of States in India and with a view to solving the existing border disputes between the States of Maharashtra and Mysore and the States of Mysore and Kerala, the Working Committee requests the Government to set up a Commission which shall hear concerned parties and give its *final decision.*"

SRI H. M. CHANNABASAPPA.—Sri Nijalingappa himself has stated on the floor of this House that he agreed to the appointment of the Commission. When asked, why he agreed to the appointment of the Commission, he stated: Well, I have agreed to this, because there was a welcome for this Commission by Maharashtra.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಈ ಮಹಾಜನ ಕಮಿಷನ್ ನೇಮಕಕ್ಕೆ ಏತಕ್ಕಾಗಿ ಒಪ್ಪಿಕೊಂಡರು ಅಂದರೆ ಇದು ಒನ್ಸ್ ಫಾರ್ ಆಲ್ ಫೈನಲ್ಲಾಗಿ ಠರಾವಾಗುತ್ತದೆ ಎಂದು ಒಪ್ಪಿಕೊಂಡರು. ಆ ಸಭೆ ಮುಗಿದ ನಂತರ ಕೆಲವು ಪತ್ರಿಕೆಯವರು ರಾಜಕಾರಣಿಗಳು ಪ್ರಶ್ನೆ ಮಾಡಿದರು, ಅದಕ್ಕೆ ಎ.ಐ.ಸಿ.ಸಿ.ಯ ಜಾಯಿಂಟ ಸೆಕ್ರೆಟರಿ ಸಾದಿಕ್ ಅಲ್ಲಿಯವರು ಈ ರೀತಿ ಹೇಳಿದ್ದು ವರದಿಯಾಗಿದೆ: Sri Sadiq Ali, the then General Secretary of AICC, said:

"When we say the decision of the Commission will be final, it will be binding on both the parties."

ಇದು ಅಧಿಕೃತವಾದ ವರದಿ. ಇದನ್ನು ಗಾಳಿಯಲ್ಲಿ ಹೇಳಿದರು ಅಂತಾ ಅಲ್ಲ. ಅವರ ಈ ಸ್ಟೇಟ ಮೆಂಟು ಅಧಿಕೃತವಾಗಿ ರಿಕಾರ್ಡಿನಲ್ಲಿ ಬಂದಿದೆ. ಮಹಾರಾಷ್ಟ್ರದ ಮುಖ್ಯ ಮಂತ್ರಿ ಶ್ರೀ ವಿ. ಪಿ. ನಾಯಕರವರೂ ಕೂಡ ಇದು ಫೈನಲ್ಲಾಗಿ ತೀರ್ಮಾನವಾಗುತ್ತದೆ ಎಂದು ಒಪ್ಪಿದ್ದಾರೆ. ಇದು ಒಂದು ಅವಾರ್ಡ ಎಂದು ತಿಳಿದುಕೊಳ್ಳುತ್ತೇನೆ ಮತ್ತು ಒಪ್ಪುತ್ತೇನೆ ಎಂದು ಹೇಳಿದರು. ಇದೇ ರೀತಿ ಈಗಿನ ಕೇಂದ್ರ ಸರಕಾರದ ಗೃಹ ಮಂತ್ರಿ ಚವಾಣರವರೂ ಸಹ ಹೇಳಿದ್ದಾರೆ. ಇಂಥ ರಾಜಕೀಯದಲ್ಲಿ ಜಂಟಲಮನ್ಸ ಅಗ್ರೀಮೆಂಟ್ ಎಂದು ಇರುತ್ತದೆ, ಕಾನ್‌ಸ್ಟಿಟ್ಯೂಷನಲ್ ಅಗ್ರೀಮೆಂಟ ಎಂದು ಇರುತ್ತದೆ. ಇದಕ್ಕೆ ಮೊದಲು ಒಪ್ಪಿಕೊಂಡು ಆಮೇಲೆ ಅದನ್ನು ಅಲ್ಲಗಳೆದರೆ ಅದಕ್ಕೆ ಅರ್ಥ ಇಲ್ಲ ಎಂದು ಆಗುತ್ತದೆ. ಆದುದರಿಂದ ಕಾನ್‌ಸ್ಟಿಟ್ಯೂಷನಲ್ ಅಗ್ರೀಮೆಂಟನ್ನು ಒಪ್ಪಿಕೊಳ್ಳಲೇ ಬೇಕು. ನಮಗೆಲ್ಲರಿಗೂ ಹಿರಿಯರಾದ ಚೆನ್ನಯ್ಯನವರೇ ಆಗಲಿ ಸಿದ್ಧವೀರಪ್ಪನವರೇ ಆಗಲಿ, ಶಿವಪ್ಪನವರೇ ಆಗಲಿ ವೀರೇಂದ್ರ ಪಾಟೀಲರವರೇ ಆಗಲಿ ನಮ್ಮ ರಾಜ್ಯಕ್ಕೆ ಮರ್ಯಾದೆ ಬರಬೇಕಾದರೆ ಕನ್ನಡ ನಾಡಿನ ಒಂದು ಅಂಗುಲ ಪ್ರದೇಶವನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳಬಯಸುತ್ತೇನೆ. ಶ್ರೀಮಾನ್ ಸಿದ್ಧವೀರಪ್ಪನವರು ಕೆಲವು ಸೂಚನೆಗಳನ್ನು ಮಾಡಿದರು. ಇದರ ಎಲ್ಲ ಜವಾಬ್ದಾರಿ ನಿಜಲಿಂಗಪ್ಪನವರ ಮತ್ತು ವೀರೇಂದ್ರ ಪಾಟೀಲರ ಮೇಲೆ ಇದೆ ಎಂದು ಹೇಳಿದರು. ಈ ಒಂದು ರೂ. ಜವಾಬ್ದಾರಿಯಲ್ಲಿ 15 ಆಣೆ ನಿಜಲಿಂಗಪ್ಪನವರ ಮೇಲೆ ಒಂದು ಆಣೆ ವೀರೇಂದ್ರ ಪಾಟೀಲರ ಮೇಲೆ ಇದೆ ಎಂದು ಅರ್ಥ ಬರುವ ಹಾಗೆ ಹೇಳಿದರು. ಆದರೆ ಅವರಿಂದ ದೇಶದ ಕಲ್ಯಾಣ ಆಗುತ್ತದೆ ಎನ್ನುವ ಭಾವನೆ ಇದೆ. ಆದುದರಿಂದ ಅವರಿಗೆ ನಮ್ಮ ಬಗ್ಗೆ ಅಭಿಮಾನ ಕಡಿಮೆಯಾಗಿದೆ ಎಂದು ಅಲ್ಲ. ಯಾಕೆಂದರೆ ಅವರೂ ಸಹ ಕಾಂಗ್ರೆಸ್ಸಿನವರು. ಒಂದು ಕೆಟ್ಟಗಳಿಗೆ ಬಂದು ಒಂದು ವಿಷ ಕಾಲ ಬಂದು ಅವರು ಆ ಕಡೆ ಹೋದರು. ಕಾಂಗ್ರೆಸ್ ಆರ್. ಕಾಂಗ್ರೆಸ್ ಓ, ಏನೇ ಇರಲಿ, ಎಲ್ಲರೂ ಕಾಂಗ್ರೆಸ್ಸಿಗರು ಎನ್ನುವುದನ್ನು ಒಪ್ಪಲೇಬೇಕು. ಮುಂದೆ ಏನಾಗುತ್ತದೆ. ಎನ್ನುವುದಕ್ಕೆ ಅನಿಶ್ಚಿತ ಪರಿಸ್ಥಿತಿ ಇದೆ. ಇದಕ್ಕಾಗಿ ಉಳಿದ ಮಾನ್ಯ ಸದಸ್ಯರು ಚಿಂತೆ ಮಾಡ ಬೇಕಾಗಿಲ್ಲ. ಸಿದ್ಧವೀರಪ್ಪನವರು ಉಪದೇಶ ಹೇಳಿದರು. ಅದಕ್ಕೆ ವಿರೋಧ ಏನೂ ಇಲ್ಲ. ಅದಕ್ಕೆ ಮನ್ನಣೆ ಕೊಡುವುದಿಲ್ಲ ಎಂದು ಹೇಳುವುದಿಲ್ಲ. ಮೋಸಿಸ್‌ನು ತಪಶ್ಚರ್ಯೆಮಾಡಿ 10 ಕಮಾಂಡಮೆಂಟ್ಸ್ ತಂದು ಕ್ರಿಶ್ಚಿನ್ನರನ್ನು ಉದ್ಧಾರ ಮಾಡಿದರು. ಸಿದ್ಧವೀರಪ್ಪನವರು ಐದು ಕಮಾಂಡಮೆಂಟ್ಸ ಹೇಳಿದ್ದು ಎಲ್ಲಿಂದ ತಂದರು ಗೊತ್ತಿಲ್ಲ. ಕ್ರಿಶ್ಚನ್‌ರಾದ್ದರಿಂದ ಮೋಸಿಸ್ ಕ್ರೈಸ್ತ ಕಾರೀನ ತಪಶ್ಚರ್ಯೆಮಾಡಿ ತಂದು ಹೇಳಿದರು. ನಾವು ಹಿಂದುಗಳಾದ್ದರಿಂದ ಇವರು

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಬಹುಶಃ ಇಂದ್ರನಿಂದ ಕಮಾಂಡಮೆಂಟ್ಸ್ ತಂದಿರಬೇಕು. ಸಿದ್ಧವೀರಪ್ಪನವರು ಹೇಳಿರುವುದನ್ನು ನಾವು ಎಲ್ಲರೂ ಒಪ್ಪಿಕೊಳ್ಳಲು ಪ್ರಯತ್ನ ಮಾಡುತ್ತೇವೆ. ಅವರ ಮೊದಲನೇ ಕಮಾಂಡಮೆಂಟು ಅಂದರೆ ಮುಖ್ಯ ಮಂತ್ರಿಗಳು ಪ್ರಧಾನ ಮಂತ್ರಿಗಳನ್ನು ಬಯ್ಯುವುದನ್ನು ಬಿಟ್ಟುಬಿಡಬೇಕು ಎಂದು ಹೇಳಿದರು. ನಾನು ನಮ್ರತೆಯಿಂದ ಹೇಳುತ್ತೇನೆ ಹಿಂದೆ ಬಯ್ದಿಲ್ಲ, ಈಗ ಬಯ್ಯುತ್ತಿಲ್ಲ, ಮುಂದೆ ಸಹ ಬಯ್ಯುವುದಿಲ್ಲ. ಆದುದರಿಂದ ನಾವು ಅವರ ಮೊದಲನೇ ಕಮಾಂಡಮೆಂಟ ಒಪ್ಪಿಕೊಂಡಹಾಗೆ ಆಯಿತು. ಎರಡನೇಯದಾಗಿ ಕೇಂದ್ರ ಸರಕಾರದೊಡನೆ ಸಹಕರಿಸಬೇಕು ಎಂದು ಹೇಳಿದರು. ಹಿಂದೆ ಸಹಕರಿಸಿದ್ದೇವೆ, ಈಗ ಸಹಕಾರ ಮಾಡುತ್ತಾ ಇದ್ದೇವೆ, ಮುಂದೆ ಸಹ ಸಹಕಾರ ಮಾಡುವೆವು. ಕೇಂದ್ರ ಸರಕಾರದೊಡನೆ ಯಾವ ತಂಟೆ ಇಲ್ಲ. ಅದರಿಂದ ಅವರ ಎರಡನೇ ಕಮಾಂಡಮೆಂಟ ಒಪ್ಪಿಕೊಂಡ ಹಾಗೆ ಆಯಿತು. ಇನ್ನು ಮೂರನೇ ಕಮಾಂಡಮೆಂಟ ಅಂದರೆ ರಾಜಿನಾಮೆ ಕೊಡಿ, ಈ ಭಾಗ ಉಳಿದೀತು ಎಂದು ಹೇಳಿದರು. ಈ ಸಂದರ್ಭದಲ್ಲಿ ಒಂದು ಮಾತು ಹೇಳುವುದಾದರೆ ಯುದ್ಧ ನಡೆದಾಗ ಯಾರಾದರೂ ಬಿಟ್ಟು ಹೋದರೆ ಅವರು ಓಡಿ ಹೋದರು ಎಂದು ಆಗುತ್ತದೆ. ಆದುದರಿಂದ ರಾಜೀನಾಮೆ ಕೊಡಲಿಕ್ಕೆ ಬರುವುದಿಲ್ಲ. ಅಲ್ಲಿ ಗೆದ್ದಮೇಲೆ ನಾವು ರಾಜಿನಾಮೆ ಕೊಡುತ್ತೇವೆಂದು ಹೇಳಬಯಸುತ್ತೇನೆ.

ಇನ್ನು ಶ್ರೀಮಾನ್ ಸಿದ್ಧವೀರಪ್ಪನವರು ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರಪಾಟೀಲರವರು ಮೊನ್ನೆ ಬೆಳಗಾಂನಲ್ಲಿ ನಡೆದ ಪೊಲಿಟಿಕಲ್ ಕಾನ್‌ಫರೆನ್ಸಿನಲ್ಲಿ ಬಹಳ ಉಗ್ರವಾಗಿ ಮಾತನಾಡಿದ್ದಾರೆ ಅದ್ದರಿಂದ ಆ ಬೆಳಗಾಮನ್ನು ಕರ್ಣಾಟಕದಲ್ಲಿ ಉಳಿಸಿಕೊಳ್ಳುವುದಕ್ಕಾಗುವುದಿಲ್ಲ ಎಂಬುದಾಗಿ ಒಂದು ಮಾತನ್ನು ಹೇಳಿದ್ದಾರೆ. ಆದರೆ ಅವರು ಅಲ್ಲಿ ಹೇಳಿದತಕ್ಕ ಮಾತುಗಳೇನಿವೆ ಅವು ಆ ಕೇಂದ್ರದವರನ್ನು ಜರಿಯುವುದಕ್ಕಾಗೇ ಹೇಳಿದ ಮಾತುಗಳು ಅವರೊಂದಿಗೆ ಜಗಳವಾಡುವುದಕ್ಕಾಗೇ ಆಡಿದ ಮಾತುಗಳವು ಎಂಬುದನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಅಂಥ ಒಂದು ರಾಜಕೀಯ ಸಮ್ಮೇಳನಗಳು ನಡೆಯುತಕ್ಕ ಕಡೆ ಜನರು ವೀರಾವೇಶದಿಂದ ಬಹಳ ಅತಿಶಯದಿಂದ ಮಾತನಾಡತಕ್ಕದ್ದು ಸ್ವಾಭಾವಿಕ. ನಮ್ಮ ಮಹಾರಾಷ್ಟ್ರೀಯ ಸ್ನೇಹಿತರಾದ ಶ್ರೀ ಕದಂರವರೂ ಕೂಡ ಅಂಥ ಒಂದು ವೀರಾವೇಶದಿಂದ ಮಾತನಾಡದೆ ಇದ್ದಿದ್ದರೆ ಅವರು ಈ ಸಭೆಗೆ ಆರಿಸಿ ಬರುವುದಕ್ಕೆ ಆಗುತ್ತಲೇ ಇರಲಿಲ್ಲ. ಆದ್ದರಿಂದ ಅಂಥ ಸಮ್ಮೇಳನಗಳಲ್ಲಿ ಹಾಗೆ ಮಾತನಾಡುವುದು ಸ್ವಾಭಾವಿಕ.

Sri B. P. KADAM.—I am on a point of order. He is insinuating certain things. He is saying certain things on the figment of imagination. He says that I have used vituperative language. I want to know who is using the vituperative language ?

Mr. SPEAKER.—Hon. Member is expressing his feeling. There is no point of order.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಸ್ವಾಮಿ, ಅಧ್ಯಕ್ಷರೇ ಶ್ರೀ ಕದಂರವರದೂ ನಮ್ಮದೂ ಇಬ್ಬರದೂ ಲಾ ಅಂಡ್ ಅಫೆಕ್ಷನ್ ಇದು ಇದ್ದದ್ದೆ. ಆದ್ದರಿಂದ ನಾವು ಹೀಗೆ ಮಾತನಾಡಿದ್ದರಲ್ಲಿ ಏನೂ ದೋಷವಿರುವುದಿಲ್ಲ.

ಇನ್ನೂ ಮಾನ್ಯ ಸದಸ್ಯರು ಹೇಳಿದ್ದೇನೆಂದರೆ—ನಮ್ಮ ಪಕ್ಷದವರಿಗೆ ಈ ವರೆಗೂ ಕೇಂದ್ರ ಸರ್ಕಾರದವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕಾಗಲಿಲ್ಲ ಎಂದು, ಹಾಗೆ ಅನ್ನುವುದಿದ್ದರೂ ಅದಕ್ಕಾಗಿ ನಮ್ಮ ಭಾಗದ ಪ್ರದೇಶವನ್ನು ಬೇರೆಯವರಿಗೆ ದಾನ ಮಾಡಬಾರದೆಂದು ಹೇಳಿದರೆ ಅದರಲ್ಲಿ ತಪ್ಪೇನಿದೆ ? ಈ ವಿಚಾರದಲ್ಲಿ ಆ ಮಹಾರಾಷ್ಟ್ರದ ಮುಖ್ಯಮಂತ್ರಿಗಳಾದ ವಿ. ಪಿ. ನಾಯಕರಾದರೂ ಅಷ್ಟೇ ಹೇಳುತ್ತಾರೆ; ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರಾದರೂ ನಮ್ಮ ಭಾಗದ ರಾಜ್ಯವನ್ನು ಬೇರೆಯವರಿಗೆ ದಾನ ಮಾಡಬೇಡಿ ಎಂಬುದಾಗೇ ಹೇಳುತ್ತಾರೆ. ಇದರಲ್ಲಿ ಅಂಥ ತಪ್ಪೇನೂ ಇರುವುದಿಲ್ಲ.

Sri B. P. KADAM.—Who gave it to you ?

Sri S. V. AGNIHOTHRI.—God has given to us. ಆ ದಿವಸ ಅಲ್ಲಿ ನಮ್ಮ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದರಲ್ಲಿ ಕೇಂದ್ರದ ಪ್ರಧಾನ

ಸಚಿವೆಯರಿಗಾಗಲೀ ಅಥವಾ ಮತ್ತೆ ಯಾವ ಮಂತ್ರಿಗಳಿಗಾಗಲೀ ಯಾವ ಒಂದು ಅವಾಚ್ಯ ಶಬ್ದ ವನ್ನೂ ಬಳಸಿರುವುದಿಲ್ಲ. ಹಾಗಿದ್ದರೂ ಕೂಡ ಏನೋ ಒಂದು ಉದ್ದೇಶವನ್ನು ಮನಸ್ಸಿನಲ್ಲಿಟ್ಟು ಕೊಂಡು ಅಲ್ಲಿ ಒಂದು ಹೇಳಿದ್ದರೆ ಅದನ್ನು ಎರಡು ಮಾಡಿ ಅದಕ್ಕೆ ಉಪ್ಪು ಹುಳಿ ಕಾರ ಹಚ್ಚಬಾರ ದೆಂದು ತಮ್ಮೆಲ್ಲರಲ್ಲೂ ನಾನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಕೇಂದ್ರದವರನ್ನು ಒಲಿಸಿಕೊಂಡು ಕೆಲಸಮಾಡುವುದಕ್ಕೆ ಸಾಧ್ಯವಿಲ್ಲದಿರುವುದರಿಂದ ಅವರು ಕೂಡಲೆ ರಾಜ್ಯದಲ್ಲಿ ಕೊಯಿಲೇಷನ್ ಸರ್ಕಾರವನ್ನು ನೇಮಿಸಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೆ ಬಹುಮತವಿರತಕ್ಕ ಪಾರ್ಟಿಯವರು ಆಡಳಿತ ನಡೆಸುವುದಕ್ಕೆ ಅವಕಾಶವಿಲ್ಲ ಅನ್ನತಕ್ಕ ತತ್ವ ಪ್ರಜಾಪ್ರಭುತ್ವದ ಇತಿಹಾಸದಲ್ಲೇ ಇಲ್ಲ. ಹಾಗಿದ್ದರೂ ಆ ಬಹುಮತವುಳ್ಳ ಪಾರ್ಟಿಗೆ ಕೊಯಿಲೇಷನ್ ಸರ್ಕಾರವನ್ನು ಸ್ಥಾಪಿಸಬೇಕೆಂದು ಹೇಳುತ್ತಿರುವುದೂ ಒಂದು ಹುಚ್ಚುತನ.

ಶ್ರೀ ಎಚ್. ಸಿದ್ಧವೀರಪ್ಪ.—ದೇಶದಲ್ಲಿ ನ್ಯಾಷನಲ್ ಕ್ರೈಸೀಸ್ ಇದ್ದಾಗ ಅಥವಾ ಮತ್ತೆ ಯಾವುದಾದರೂ ಜಟಿಲ ಪ್ರಶ್ನೆಗಳಿದ್ದಾಗ ಕೊಯಿಲೇಷನ್ ಕ್ಯಾಬಿನೆಟ್ ಫಾರಂ ಮಾಡುವುದಕ್ಕೆ ಬರುತ್ತದೆ......

ಶ್ರೀ ಎಸ್. ಅಗ್ನಿಹೋತ್ರಿ.—ನಿಜ, ದೇಶದಲ್ಲಿ ಯುದ್ಧ ವಗೈರೆ ನಡೆಯತಕ್ಕ ಸಂದರ್ಭಗಳಿದ್ದರೆ ಮಾಡಬಹುದು. ಆದರೆ ಈ ದಿವಸ ರಾಷ್ಟ್ರದಲ್ಲಿ ಅಂಥ ಒಂದು ಯುದ್ಧದ ಭೀತಿ ಇದೆ ಅನ್ನುವುದಾದರೆ ಒಬ್ಬರ ಚಂಡಿ ಇನ್ನೊಬ್ಬರ ಕೈಲಿ ಬಂದಾವು. ಆದರೆ ಇದು ಹಾಗಲ್ಲ. ಇದು ಕೇವಲ ಅಣ್ಣತಮ್ಮಂದಿರ ವಾಜ್ಯ; ಯುದ್ಧವಲ್ಲ. ಇದರ ಬಗ್ಗೆ ಅಂದರೆ ಈ ಕಲಹದಲ್ಲಿ ಪಂಚರು ಯಾರಾದರೂ ಬಂದು ಅದು ನಿಮ್ಮದು, ಇದು ಅವರದು ಎಂದು ಹೇಳಿದರೆ ಆಯಿತು.

ಆದರೆ ಇದೇ ಸಂದರ್ಭದಲ್ಲಿ ಪ್ರಧಾನಮಂತ್ರಿಯವರೂ ಮತ್ತು ಶ್ರೀಮಾನ್ ಚವಾಣರೂ ಸೇರಿ ನಿಮ್ಮ ರಾಜ್ಯದಲ್ಲಿ ಹಾಲಿ ಇರತಕ್ಕ ಮುಖ್ಯಮಂತ್ರಿಗಳನ್ನು ಬದಲಾಯಿಸಿ ಬೇರೆ ಇನ್ನೊಬ್ಬರನ್ನು ಆ ಸ್ಥಾನಕ್ಕೆ ನೇಮಕ ಮಾಡಿ ಎಂದು ಹೇಳಿದ್ದರು. ಅದಕ್ಕನುಸಾರವಾಗಿ ನಾವೂ ಕೂಡ ಒಂದು ಮೀಟಿಂಗನ್ನು ಕರೆದವು; ನಮಗೆ ಈ ದಿವಸ ಶ್ರೀ ವೀರೇಂದ್ರಪಾಟೀಲರು ಮುಖ್ಯಮಂತ್ರಿ ಆಗಿ ಇರುವುದು ಬೇಡ ಆ ಸ್ಥಾನಕ್ಕೆ ಬೇರೆ ಯಾರಾದರೂ ತಯಾರಿದ್ದರೆ ತಮ್ಮ ಹೆಸರನ್ನು ಸೂಚಿಸಬೇಕು ಎಂದು ಕೇಳಿದಾಗ ಯಾರೊಬ್ಬರೂ ಹೆಸರನ್ನು ಸೂಚಿಸಲಿಲ್ಲ; ಆ ಸ್ಥಾನಕ್ಕೆ ಬರಲು ತಾವ್ಯಾರೂ ತಯಾರಾಗಿಲ್ಲವೆಂದು ಹೇಳಿ ಸುಮ್ಮನಿದ್ದರು. ಹಾಗೆ ಯಾರೂ ತಯಾರಿಲ್ಲದ ಹೊತ್ತಿನಲ್ಲಿ ನಾವೇನು ಮಾಡಬೇಕು ಎಂಬ ಪ್ರಸಂಗದಲ್ಲಿ ನಾವು ಸಿಕ್ಕಿಕೊಂಡಿದ್ದಾಗ ಇಲ್ಲಿ ಸೇರಿರತಕ್ಕ ಪ್ರತಿ ಒಬ್ಬ ಕನ್ನಡಿಗನೂ ಈ ಪ್ರಜಾಪ್ರಭುತ್ವದಲ್ಲಿ ಕನ್ನಡನಾಡು ಉಳಿಯಬೇಕು.........

ಶ್ರೀ ಎಚ್. ಸಿದ್ಧವೀರಪ್ಪನವರು.—ಶ್ರೀಮಾನ್ ಬಿ. ರಾಚಯ್ಯನವರಿದ್ದಾರೆ. ಅವರಿಗೆ ಮುಖ್ಯಮಂತ್ರಿ ಸ್ಥಾನ ಕೊಡಿ, ಅವರು ಅದಕ್ಕೆ ಸಿದ್ಧವಾಗಿದ್ದಾರೆ.........

ಶ್ರೀ ಎಸ್. ವಿ. ಅಗ್ನಿಹೋತ್ರಿ.—ತಾವು ಈಗಾಗಲೇ ಈ ಸಭೆಯಲ್ಲೇ ಒಪ್ಪಿಸಿಬಿಡಿ, ನಾವು ಅವರಿಗೆ ಆ ಸ್ಥಾನವನ್ನು ಇಲ್ಲೇ ಕೊಟ್ಟುಬಿಡುತ್ತೇನೆ. ಆದರೆ ಅಲ್ಲಿ ಸಾಧ್ಯವಿಲ್ಲವೆಂದು ಹೇಳಿದರು ಇಲ್ಲಿ ನಿಮ್ಮ ಕಿವಿಯಲ್ಲಿ ಬಂದು ಹೇಗೆ ಹೇಳಿದ್ದಾರು? ಹಾಗೆಂದಿಗೂ ಅವರ ಹೇಳತಕ್ಕವರಲ್ಲ. ರಾಷ್ಟ್ರದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾಗಿದ್ದರೆ ಕನ್ನಡ ನಾಡಿಗೆ ಸೇರಿದ ಒಂದು ಅಂಗುಲ ಜಾಗವನ್ನೂ ಸಹಾ ನಾವು ಯಾರಿಗೂ ಬಿಟ್ಟುಕೊಡುವುದಕ್ಕಾಗುವುದಿಲ್ಲ. ನಮಗೆ ಇನ್ನೊಬ್ಬರ ನಾಡೂ ಬೇಕಾಗಿಲ್ಲ. ನಮಗೆ ಯಾರ ತಂಟೆತಕರಾರುಗಳು ಬೇಡ. ನಮ್ಮಲ್ಲಿ ಮಹಾರಾಷ್ಟ್ರೀಯರು ಮಾಡಿದಂತೆ ಶಿವಸೇನೆಯನ್ನು ಕಟ್ಟತಕ್ಕ ಹವ್ಯಾಸಕ್ಕೆ ಹಾದಿಕೊಡಬಾರದು ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ನಾವು ಕೇಳುತ್ತಿರುವುದು ಯಾವತ್ತೂ ನ್ಯಾಯವಾದದ್ದು, ಅದನ್ನು ಕೇಂದ್ರ ಸರ್ಕಾರ ಮನ್ನಣೆ ಮಾಡಬೇಕು. ಮಹಾಜನ್ ಆಯೋಗವನ್ನು ನೇಮಕ ಮಾಡತಕ್ಕ ಕಾಲಕ್ಕೆ ಆ ಆಯೋಗದವರು ಕೊಡತಕ್ಕ ವರದಿಯನ್ನು ಒಂದು ಅವಾರ್ಡೆಂದು ಪರಿಗಣಿಸಿ ಉಭಯ ರಾಜ್ಯಗಳವರೂ ಒಪ್ಪಿಕೊಳ್ಳಬೇಕೆಂಬ ನಿರ್ಬಂಧವನ್ನು ಹಾಕೇ ಆ ಆಯೋಗವನ್ನು ಮಾಡಿದ್ದು. ಆದ್ದರಿಂದ ಈ ದಿವಸ ಶ್ರೀ ವಿ. ಪಿ. ನಾಯಕರೂ ಮತ್ತು ಕೇಂದ್ರದಲ್ಲಿರತಕ್ಕ ನಾಯಕರೂ ಮತ್ತು ನಾವೂ ಎಲ್ಲರೂ ಬದ್ಧರಾಗಿದ್ದೇವೆ. ಅದನ್ನು ಬಿಟ್ಟು ಬೇರೆ ಪ್ರಶ್ನೆಗಳನ್ನೆತ್ತಲು ಯಾರಿಗೂ ಅವಕಾಶವಿಲ್ಲ. ಅದು ಎಲ್ಲರನ್ನೂ ಬೈಂಡಿಗ್ ಮಾಡಿದೆ. ಅದು ಒಂದು ಜಡ್ಜ್‌ಮೆಂಟ್, ಅದು ವರದಿ ಅಲ್ಲ. ಆ ವಿಚಾರ ಶ್ರೀ ಕದಂರವರಿಗೆ ಗೊತ್ತಿಲ್ಲದಿರಬಹುದು. ಆ ವಿಷಯ ಕೇಂದ್ರದಲ್ಲಿರತಕ್ಕ ನಾಯಕರಿಗೂ ಮತ್ತು ಶ್ರೀ ಚವಾಣರಿಗೂ ಕೇಂದ್ರದ ಮುಖ್ಯ ಮಂತ್ರಿಗಳಿಗೂ ಚೆನ್ನಾಗಿ ಗೊತ್ತಿದೆ.

Sri B. P. KADAM.—I am on a point of order. Please meet Chavan and Naik. You will come to know what it is. What is an award is mentioned in the Indian Administrative Act. So far as Mahajan report is concerned, it is a report containing recommendations and it cannot become an award. The Hon. Member is ignorant of law.

Mr. SPEAKER.—There is no merit in the point of order. The statement is untenable. You should not do it.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ಅವರು ಕೊಟ್ಟಿರತಕ್ಕದ್ದು ಒಂದು ಅವಾರ್ಡ್. ಅದು ಎರಡು ಪಾರ್ಟಿಯವರನ್ನೂ ಬೈಂಡಿಂಗ್ ಮಾಡಿದೆ. ಇಲ್ಲಿ ಯಾರೂ ವಕಾಲತ್ತು ವಹಿಸಿ ಮಾತನಾಡುವುದಕ್ಕೆ ಆಸ್ಪದ ಇಲ್ಲ.

4-30 P. M.

ಕೊನೆಯದಾಗಿ ನಾನು ಹೇಳುವುದು ಇಷ್ಟೆ. ಒಂದುವೇಳೆ ನಮ್ಮ ಮೇಲೆ ಅಂದರೆ ಕನ್ನಡಿಗರ ಮೇಲೆ ಇವರು ಉದಾರಿಗಳು ಎಂದು ತಿಳಿದುಕೊಂಡು ಅತ್ಯಾಚಾರ ಮಾಡುವುದಾದರೆ ಅದು ತಪ್ಪಾಗುತ್ತದೆ. ಅಂತಹ ಭಾವನೆ ಅವರಲ್ಲಿ ಮೂಡಿರಬಹುದು. ಆ ರೀತಿ ಆದರೆ ಕನ್ನಡಿಗರ ಕೆಚ್ಚು ಏನು ಇದೆ ಎನ್ನುವುದನ್ನು ನೋಡಿರಿ. ನಮಗೆ ಅನ್ಯಾಯವಾಗುವುದಾದರೆ ನಾವು ಬೇಕಾದಂಥ ತ್ಯಾಗಕ್ಕೂ ಹಿಂಜರಿಯುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಹಾರಾಷ್ಟ್ರದವರ ವಿಷಯದಲ್ಲಿ ಹೇಳಬೇಕಾದರೆ ಮಹಾರಾಷ್ಟ್ರದ ಬಂಧುಗಳು ನಾವು ಮೊದಲು ಮಹಾರಾಷ್ಟ್ರೀಯರು ಆಮೇಲೆ ಭಾರತೀಯರು ಎಂದು ಹೇಳುತ್ತಾರೆ. ನಮ್ಮ ವಿಷಯದಲ್ಲಿ ಹೇಳಬೇಕಾದರೆ ನಾವು ಮೊದಲು ಭಾರತೀಯರು ಆಮೇಲೆ ಕನ್ನಡಿಗರು ಎಂದು ಹೇಳುತ್ತೇವೆ. ನಮ್ಮಲ್ಲಿ ಒಂದು ಹಿಂದೂ ಸಂಸ್ಕೃತಿ ಇದೆ. ಅದು ಏನೆಂದರೆ ಯಾವ ಕೆಲಸಕ್ಕಾದರೂ ಮೊದಲು ಗಣಪತಿಯನ್ನು ತರುತ್ತೇವೆ. ಅದು ಭಿನ್ನವಾದರೆ ಪೂಜೆ ಮಾಡುವುದಿಲ್ಲ. ಗಣಪತಿಯನ್ನು ಪೂಜೆ ಮಾಡಬೇಕಾದರೆ ಬಹಳ ಭಕ್ತಿಯಿಂದ ಪೂಜೆ ಮಾಡುತ್ತೇವೆ. ಅನಂತರ ನೀರಿಗೆ ಹೋಗಿ ಮುಳುಗಿಸುತ್ತೇವೆ. ಆ ರೀತಿಯಂತೆ ನಮ್ಮ ದೇಶದಲ್ಲಿ ಏನಾದರೂ ನಡೆದರೆ ನಾವು ದೇವರ ಬಳಿಗೆ ಯಾವರೀತಿಯಾಗಿ ಭಕ್ತಿಯಿಂದ ಹೋಗುತ್ತೇವೆಯೋ ಅಷ್ಟೇ ಭಕ್ತಿಯಿಂದ, ದೇವರು ಯಾವರೀತಿಯಾಗಿ ಸೃಷ್ಟಿ ಮಾಡಿದ್ದಾನೋ ಅದೇರೀತಿಯಾಗಿ ಹೋಗಿ ಯಾವ ಅವಯವಗಳೂ ಭಿನ್ನವಾಗದೆ ಇರುವ ರೀತಿಯಲ್ಲಿ ಹೋರಾಟ ಮಾಡುತ್ತೇವೆ ಎಂದು ಹೇಳಿ ಈ ಸಂದರ್ಭದಲ್ಲಿ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮಿ, ನಮ್ಮ ಪಕ್ಷದಿಂದ ಸಿದ್ಧವೀರಪ್ಪನವರ ವಿನಃ ಬೇರೆ ಯಾರೂ ಮಾತನಾಡಲಿಲ್ಲ. ನಮಗೆ ಮಾತನಾಡವುದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಚ್. ಸಿದ್ಧವೀರಪ್ಪ.—ಸ್ವಾಮಿ, ಶ್ರೀಮಾನ್ ಚೆನ್ನಬಸಪ್ಪನವರಿಗೆ ಆರೋಗ್ಯ ಚೆನ್ನಾಗಿಲ್ಲದೇ ಇರುವುದರಿಂದ ಅವರಿಗೆ ಈವೊತ್ತು ಮಾತನಾಡಲು ಅವಕಾಶ ಸಿಕ್ಕುತ್ತದೋ ಇಲ್ಲವೋ ತಿಳಿಸಿಬಿಡಿ.

Mr. SPEAKER.—Yesterday I had stated that Sri Gangadhar would be the first person to speak today on this motion. I could not accommodate him. Now Sri Vatal Nagaraj has requested me that he has Court work tomorrow, and therefore, I should give him some time to speak today.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಿನ್ನೆ ದಿವಸ ನಾನು ಒಂದು ಸಬ್‌ಸ್ಟಿಟ್ಯೂಟ್ ಮೋಷನ್ ಕಳುಹಿಸಿದ್ದೆ. ಅದನ್ನು ವಾಪಸ್ಸು ತೆಗೆದುಕೊಂಡೆ. ಅವಾಗ ತಾವು ಹೇಳಿದಿರಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆಂದು. ಆದುದರಿಂದ ನನಗೆ ಟೈಂ ಕೊಡಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು.—ತಮಗೆ ಅವಕಾಶ ಕೊಡುತ್ತೇನೆ. ಸ್ವಲ್ಪ ತಡವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ,......

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ತಾವು ಈಗ ಮೂರು ಜನಕ್ಕೆ ಪರ್ಮಿಷನ್ ಕೊಡುತ್ತೇವೆ ಎಂದು ಹೇಳುತ್ತೀರಿ. ಈ ಸಭೆಯಲ್ಲಿ ಎಸ್. ವಿ. ಡಿ. ಮತ್ತು ಕಾಂಗ್ರೆಸ್ (ಆರ್) ಈ ಎರಡು ಪಾರ್ಟಿಯಲ್ಲಿ ಯಾರು ಯಾರು ಮಾತನಾಡುತ್ತಾರೆ ಎಂದು ಬೇರೆ ಬೇರೆ ಲಿಸ್ಟನ್ನು ಕಳುಹಿಸಿದ್ದೇವೆ. ಈ ವಿಷಯವನ್ನು ಈವೊತ್ತೇ ಮುಗಿಸುತ್ತೀರೋ ಅಥವಾ ನಾಳೆಯೂ ತೆಗೆದುಕೊಳ್ಳುತ್ತಾರೋ ಏನು ಮಾಡುತ್ತಾರೋ ಗೊತ್ತಿಲ್ಲ. ದಯವಿಟ್ಟು ಇದರ ಬಗ್ಗೆ ಏನು ಮಾಡುತ್ತೀರಿ ಎಂದು ತಿಳಿಸಬೇಕಾಗಿದೆ.

ಶ್ರೀ ಬಿ. ಪಿ. ಗಂಗಾಧರ್.—ಸ್ವಾಮಿ, ಬೇರೆ ಯಾರೂ ಮಾತನಾಡ ಬೇಡವೇ ? ಕೆಲವರಿಗೆ ಮಾತನಾಡಲು 3/4 ಗಂಟೆ ಅವಕಾಶ ಮಾಡಿಕೊಟ್ಟಿದ್ದೀರಿ. ಅದೇರೀತಿ ನಮಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಗಂಟೆ ಗಂಟೆ ಮಾತನಾಡುವವರಿಗೆ ಅವಕಾಶ ಕೊಟ್ಟಿರಿ. ನಾವು ಎದ್ದರೆ ನಮ್ಮನ್ನು ಕೂಡಿರಿ ಎಂದು ಹೇಳುತ್ತೀರಿ, ನಾವು ಏನೂ ತಪ್ಪು ಮಾಡಿಲಿಲ್ಲ. ನಮಗೂ ಮಾತನಾಡಲು ಅವಕಾಶ ಕೊಡಬೇಕು.

Mr. SPEAKER.—The leader, who moved the substantive motion was given the chance. I am not bound to give chance to all the signatories. I am going partywise and I am calling one member from each party.

ಶ್ರೀ ಎಸ್. ಚಂದ್ರಕಾಂತ್.—ನಮ್ಮ ಪಾರ್ಟಿಯಲ್ಲಿ ಯಾರೂ ಮಾತನಾಡಲಿಲ್ಲ. ನಮಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಸ್. ಎಸ್. ಆರಕೇರಿ.—ಮೊದಲು ಪಾರ್ಟಿ ಲೀಡರ್ಸ್‌ಗೆ ಮಾತನಾಡಲು ಅವಕಾಶ ಕೊಟ್ಟಿರಿ. ನಮಗೆ ಅವಕಾಶ ಕೊಡಲಿಲ್ಲ. ಆದುದರಿಂದ ನಮಗೆ ಮಾತನಾಡಲು ಅವಕಾಶ ಕೊಡಬೇಕು.

† ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಮಾನ್ಯ ಅಧ್ಯಕ್ಷರೇ, ತಾವು ನನಗೆ ಮಾತನಾಡಲು 5 ನಿಮಿಷ ಮಾತ್ರ ಕಾಲಾವಕಾಶ ಕೊಟ್ಟಿದ್ದೀರಿ. ನನಗೆ ಸಾಧ್ಯವಾದರೆ 4 ನಿಮಿಷದಲ್ಲೇ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಲ್ಲದೇ ಹೋದರೆ ಸ್ವಲ್ಪ ಮುಂದಕ್ಕೆ ಹೋಗುತ್ತದೆ.

ಈ ಮಹಾಜನ್ ವರದಿ ಬಗ್ಗೆ ನಾವು ಪತ್ರಿಕೆಗಳಲ್ಲಿ ಸುದ್ದಿ ನೋಡಿದಾಗ ಕೇಂದ್ರಸರ್ಕಾರ ಕರ್ನಾಟಕ ರಾಜ್ಯದ ಮೇಲೆ ಒಂದು ರೀತಿಯಾದಂಥ ಆಕ್ರಮಣವನ್ನು ಮಾಡುವುದಕ್ಕೆ ಹೊರಟಿದೆ ಎಂದು ನಮಗಿಂದಾಗೂ ಅನಿಸುತ್ತದೆ. 3 ವರ್ಷದಿಂದಲೂ ಮಹಾಜನ್ ಕಮಿಷನ್ ಕೊಟ್ಟಂಥ ವರದಿಯನ್ನು ಕಾರ್ಯಗತ ಮಾಡದೆ ಈ ಒಂದು ಸಂದರ್ಭದಲ್ಲಿ ತಕ್ಷಣ ಆತುರಾತುರವಾಗಿ ಕಾರ್ಯಗತ ಮಾಡತಕ್ಕಂಥ ಉದ್ದೇಶದಿಂದ ಹೊರಟಿರತಕ್ಕಂತ ಕೇಂದ್ರ ಸರ್ಕಾರದ ನೀತಿ ನೋಡಿದಾಗ ನನಗಂತೂ ಅನಿಸುತ್ತದೆ, ಇದರಲ್ಲಿ ರಾಜಕೀಯವಲ್ಲದೆ ಬೇರೆ ಯಾವ ಪ್ರಶ್ನೆಯೂ ಇಲ್ಲ ಎಂದು. ಈ ರೀತಿ ಹೇಳುವುದಕ್ಕೆ ಆಧಾರಗಳೂ ಇವೆ, ಅಂಕಿ ಅಂಶಗಳೂ ಇವೆ. ಈ ಕಮೀಷನ್ನನ್ನು ಕರ್ನಾಟಕದ ಜನ ವಿರೋಧ ಮಾಡಿದಾಗ ಈ ಅನ್ಯಾಯವನ್ನು ಕನ್ನಡದ ಜನತೆಯ ಮೇಲೆ ಹೇರಿದಾಗ, ಈ ಮಹಾಜನ್ ವರದಿ ಅಂತಿಮ ತೀರ್ಮಾನವೆಂದು ಎರಡು ರಾಜ್ಯದ ಮುಖ್ಯ ಮಂತ್ರಿಗಳೂ ಒಪ್ಪಿಕೊಂಡರು. ಅವಾಗ ಈ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳೂ ಒಂದೇ ಒಂದು ಪಕ್ಷದಲ್ಲಿ, ಅಂದರೆ ಕಾಂಗ್ರೆಸ್ ಪಕ್ಷದಲ್ಲಿ ಇದ್ದಂಥಾವರಾಗಿದ್ದರು. ದೇಶದ ಸುದೈವದಿಂದಲೋ, ಅಥವಾ ದುರ್ದೈವದಿಂದಲೋ ಈವೊತ್ತು ಕಾಂಗ್ರೆಸ್ ಎರಡು ಗುಂಪಾಗಿ ಒಡೆದು, ಕರ್ನಾಟಕ ರಾಜ್ಯ ಸಿಂಡಿಕೇಟ್ ಗುಂಪಿನ ಆಳ್ವಿಕೆಯಲ್ಲಿದೆ. ಮಹಾರಾಷ್ಟ್ರ ಇಂಡಿಕೇಟ್ ಗುಂಪಿನ ಆಳ್ವಿಕೆಯಲ್ಲಿವೆ. ಇತ್ತೀಚಿನ ಪತ್ರಿಕೆಯ ವರದಿ ನೋಡಿದಾಗ ಸಿಮ್ಲಾದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಮಾತನಾಡುತ್ತಾ ನಮ್ಮ ದಾರಿ ಹತ್ತಿರಕ್ಕೆ ಬಂದಿದೆ, ಯಾವ ಘಳಿಗೆಯಲ್ಲಿ ನಾವಿಬ್ಬರೂ ಒಂದಾಗುತ್ತೇವೆ ಎನ್ನುವುದು ಗೊತ್ತಿಲ್ಲ ಎಂದು ಅವರು ಹೇಳಿದ್ದಾರೆ. ನಿನ್ನೆ ಇದೇ ಸಭೆಯಲ್ಲಿ ಶ್ರೀಮಾನ್ ಸಿದ್ಧವೀರಪ್ಪನವರು ಮಾತನಾಡುತ್ತಾ ಸೆಂಟರಿನಲ್ಲಿ ಹಾಗೂ ಇಲ್ಲಿ ಕೋಯಲಿಷನ್ ಸರಕಾರ ರಚನೆ ಮಾಡಬೇಕೆಂದು ಹೇಳಿದ್ದಾರೆ. ಇದರಲ್ಲಿ ಇಂಡಿಕೇಟಿನವರು ಸಿಂಡಿಕೇಟಿಗೆ ಹತ್ತಿರ ಹತ್ತಿರ ಬರುತ್ತಿದ್ದಾರೆ ಎನ್ನುವುದು ನನಗೆ ಕಾಣುತ್ತದೆ. ಇದು ಹೇಗಿದೆ ಎಂದರೆ, ಹೊಸದಾಗಿ ಮದುವೆ ಮಾಡಿಕೊಳ್ಳುವ ಗಂಡು ಹಾಗೂ ಹೊಸದಾಗಿ ಮದುವೆಯಾಗುವ ಹೆಣ್ಣು ಯಾವ ರೀತಿ ಪ್ರೇಮ ಬೆಳಸುತ್ತಿದೆ ಎನ್ನುವಂತಾಗಿದೆ. ಹೀಗೆ ಇಂದು ಸಿಂಡಿಕೇಟು ಹಾಗೂ ಇಂಡಿಕೇಟು ಹತ್ತಿರ ಹೇಗೆ ಬರುತ್ತಿವೆ ಎಂದರೆ ಮದುವೆ ಗಂಡು ಚಪ್ಪರದೊಳಗೇ ನಿಂತುಕೊಂಡು ಹೊಸದಾಗಿ

(ಶ್ರೀ ವಾಟಾಳ್ ನಾಗರಾಜ್)

ಬರುವ ಹೆಣ್ಣನ್ನು ಇಣಿಕಿ ನೋಡುತ್ತಿರುತ್ತದೆ. ಹಾಗೆ ಇಂದು ಇಲ್ಲಿ ಚಪ್ಪರದಾಟ ಆಡುತ್ತಿದ್ದಾರೆ. ಇದನ್ನು ನೋಡಿದರೆ ನನಗೇನು ಅನಿಸುತ್ತದೆ ಎಂದರೆ ಇವೊತ್ತು ಇಂಡಿಕೇಟು ಹಾಗೂ ಸಿಂಡಿಕೇಟು ಕಾಂಗ್ರೆಸ್ಸು ಒಂದಾಗಲಿ ಬಿಡಲಿ, ಇವೊತ್ತು ನಮಗೆ ಬಂದಿರತಕ್ಕ ಪ್ರಶ್ನೆ ನಮ್ಮ ರಾಜ್ಯದ ಗಡಿಯನ್ನು ರಕ್ಷಣೆ ಮಾಡಲು ಎಲ್ಲ ಪಕ್ಷದವರೂ ಯಾವ ಭೇದ ಭಾವನೆಯೂ ಇಲ್ಲದೆ ಹೋರಾಡಬೇಕು ಮತ್ತು ನಮ್ಮ ಕನ್ನಡ ಜನರ ನೆಲವನ್ನುಳಿಸಬೇಕು. ಇಂದು ಮಹಾರಾಷ್ಟ್ರದಲ್ಲಿ ತಮ್ಮ ನೆಲ ಉಳಿಸಲು ಎಲ್ಲ ಪಕ್ಷಗಳೂ ಒಂದಾಗಿವೆ. ಆದರೆ ನಮ್ಮ ರಾಜ್ಯದಲ್ಲಿ ಹಾಗೆ ಒಂದಾಗಿಲ್ಲದಿರುವುದು ನಮ್ಮ ದುರ್ದೈವ. ನಮ್ಮ ದೇಶದ ಹಾಗೂ ಇನ್ನಿತರ ನಾಯಕರು ಬಿಟ್ಟರೂ ಕನ್ನಡದ ಜನ ತಮ್ಮ ಒಂದು ಅಂಗುಲ ನೆಲವನ್ನೂ ಬಿಡಲು ತಯಾರಾಗಿಲ್ಲ. ನನಗೆ ಇಂದು ರಾಜ್ಯದಲ್ಲಿ ಕೆಲವು ನಾಯಕರು ಆಡುತ್ತಿರುವ ಮಾತುಗಳನ್ನು ನೋಡಿದರೆ ನಮಗೆ ಅನುಮಾನ ಬರುತ್ತಿದೆ. ಇದಕ್ಕಾಗಿ ನಮ್ಮ ರಾಜ್ಯದ ಎಲ್ಲ ಜನರೂ ಉಗ್ರವಾದ ಹೋರಾಟ ಮಾಡಿ ನಮ್ಮ ನೆಲವನ್ನು ಪಡೆಯಬೇಕಾಗಿದೆ. ಇಂದು ನಮ್ಮ ರಾಜ್ಯವನ್ನು ನಾಯಕರು ಉಳಿಸುವ ಕಾಲ ಹೋಗಿದೆ. ಇದಕ್ಕಾಗಿ ನಮ್ಮ ಕನ್ನಡದ ಜನರು ಒಗ್ಗಟ್ಟಿನಿಂದ ಕನ್ನಡದ ನೆಲವನ್ನು ಪಡೆಯಲು ಉಗ್ರ ಹೋರಾಟ ಮಾಡಲು ಸಿದ್ಧರಾಗಿದ್ದಾರೆ. ಬೇಕಾದರೆ ನಮ್ಮ ಎಲ್ಲಾ ನಾಯಕರುಗಳನ್ನೂ ಬೀದಿಗೆ ಎಳೆಯಲು ಸಿದ್ಧರಾಗಿದ್ದಾರೆ. ಕನ್ನಡದ ಜನರು ಅಷ್ಟೇನೂ ಹೇಡಿಗಳಲ್ಲ. ಇದಕ್ಕೆ ವಿರೋಧವಾಗಿ ಇಂದು ಕೇಂದ್ರದವರು ತೀರ್ಮಾನ ಮಾಡುವುದಾದರೆ ಕನ್ನಡದ ಜನ ಒಂದು ಅಂಗುಲ ನೆಲವನ್ನೂ ಬಿಟ್ಟುಕೊಡುವುದಿಲ್ಲ. ಇದಕ್ಕಾಗಿ ಬೇಕಾದ ಹೋರಾಟಗಳಾಗಲೀ ರಕ್ತಪಾತವಾಗಲೀ ಹೆದರುವುದಿಲ್ಲ. ನಾನಂತೂ ನನ್ನ ಒಂದು ತೊಟ್ಟು ರಕ್ತ ಇರುವವರೆಗೂ ಹೋರಾಡುತ್ತೇನೆ, ಕನ್ನಡದ ನೆಲವನ್ನು ಮಹಾರಾಷ್ಟ್ರಕ್ಕೆ ಬಿಡುವುದಕ್ಕೆ ತಯಾರಿಲ್ಲ ಮತ್ತು ಬಿಟ್ಟುಕೊಡುವುದಿಲ್ಲ ಎಂದು ಖಂಡಿತವಾಗಿ ಇಲ್ಲಿ ಹೇಳುತ್ತಿದ್ದೇನೆ. ಇಲ್ಲಿ ಕುಳಿತುಕೊಂಡು ಬರೀ ಭಾಷಣಗಳನ್ನು ಮಾಡುವುದರಿಂದ ನಮ್ಮ ಗಡಿ ಪ್ರದೇಶಗಳು ನಮಗೆ ಬಂದಂತಾಗುವುದಿಲ್ಲ. ಬೆಳಗಾಂ ಗಡಿ ಪ್ರದೇಶಕ್ಕೆ ಎಲ್ಲರೂ ಹೋಗಿ ಅಲ್ಲಿನ ಗಡಿಯನ್ನು ರಕ್ಷಣೆ ಮಾಡಲು ಮುನ್ನುಗ್ಗಬೇಕಾಗಿದೆ. ಇವೊತ್ತು ಬೆಂಕಿಯ ಮುಂದೆ ಹೋರಾಡಲು ಎಲ್ಲರೂ ಸಿದ್ಧರಾಗಿರಬೇಕು. ಮಹಾರಾಷ್ಟ್ರದಲ್ಲಿ ಶಿವಸೇನೆ ನಾಯಕರಾದ ಶ್ರೀ ಬಾಳಠಾಕರೆಯವರಿಗೆ ಅಲ್ಲಿನ ಸರಕಾರ ಜನರನ್ನು ಕೊಲ್ಲಲು ಪಿಸ್ತೂಲು ಕೊಟ್ಟಿದೆಯೆಂದು ಕೇಳುತ್ತೇವೆ. ಇಂದಿರಾಗಾಂಧಿಯವರ ಕೆಲವು ಅನುಯಾಯಿಗಳು ಈ ರೀತಿಯಾಗಿ ಮಾಡುತ್ತಿದ್ದಾರೆಂದು ಕಾಣುತ್ತೆ. ಇದು ಒಬ್ಬರ ಪ್ರಶ್ನೆಯಲ್ಲ. ದೇಶದ ದೊಡ್ಡ ಪ್ರಶ್ನೆ. ಅವರ ಕಡೆಯವರೆಲ್ಲಾ ಇಂದು ನಮ್ಮ ರಾಜ್ಯದ ಮೇಲೆ ದಂಡೆತ್ತಿ ಬರುವ ಕಾಲ ಬಂದಿದೆ. ಇದಕ್ಕಾಗಿ ನಮ್ಮ ಕನ್ನಡ ನಾಡಿನ ಎಲ್ಲ ಜನರೂ ಹಾಗೂ ಬೆಳಗಾಂನಲ್ಲಿರುವ ಎಲ್ಲ ಜನರೂ ಒಗ್ಗಟ್ಟಿನಿಂದ ಕೂಡಿಕೊಂಡು ನಮ್ಮ ನೆಲವನ್ನುಳಿಸಲು ಹೋರಾಡಲೇಬೇಕು. ನಮ್ಮ ರಾಜ್ಯ ಸರಕಾರದವರು ಒಪ್ಪದೇ ಇದ್ದರೂ ಕೇಂದ್ರದವರ ಬಲವಂತಕ್ಕೆ ಒಳಗಾಗಿ ಮಹಾಜನ್ ಕಮಿಷನ್ ನೇಮಕ ಮಾಡಲು ಒಪ್ಪಿದ ಮೇಲೆ ಆ ಕಮಿಷನ್ ಕೊಟ್ಟ ತೀರ್ಪನ್ನು ಅವರು ಪೂರ್ಣವಾಗಿ ಒಪ್ಪಲೇ ಬೇಕು. ಇದರಿಂದ ಅನುಕೂಲವಾಗಲಿ ಬಿಡಲಿ ಕೇಂದ್ರದವರು ಇದನ್ನು ಒಪ್ಪಲೇಬೇಕು. ಇಂತಹ ಕಮಿಷನ್ ವರದಿಯಿಂದ ಮಹಾರಾಷ್ಟ್ರದವರಿಗೆ ಅನುಕೂಲವಾಗಲಿಲ್ಲ ಮತ್ತು ಅಲ್ಲಿನ ಜನಕ್ಕೆ ಸಂತೋಷವಾಗಲಿಲ್ಲ ಎಂದು ಇಂದು ಯಾವುದೇ ರೀತಿಯಿಂದಲಾದರೂ ಸರಿಯೆ ಬೆಳಗಾಂನ್ನು ತೆಗೆದುಕೊಳ್ಳಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಕಮಿಷನ್ ಎಂದು ಒಂದು ಸಾರಿ ಮಾಡಿದಮೇಲೆ ಅದರ ವರದಿಯನ್ನು ಒಪ್ಪುವ ಜವಾಬುದಾರಿ ಕೇಂದ್ರ ಸರಕಾರದ್ದು. ಈಗ ನಮಗೆ ತಿಳಿದುಬಂದಿರುವಂತೆ ಶ್ರೀಮತಿ ಇಂದಿರಾ ಗಾಂಧಿಯವರು ಹೇಳುವಂತೆ ಅರ್ಧ ಗಡಿ ಭಾಗ ಒಂದು ಕಡೆಗೆ ಇನ್ನರ್ಧ ಭಾಗ ಒಂದು ಕಡೆಗೆ ಎಂದು ಹರಿದು ಹಂಚಲು ನಮ್ಮ ರಾಜ್ಯ ತಯಾರಾಗಿಲ್ಲ. ನನಗೆ ಶ್ರೀಮತಿ ಇಂದಿರಾ ಗಾಂಧಿಯವರ ಬಗ್ಗೆ ಬಹಳವಾದ ಗೌರವ ಇದೆ. ಅವರು ಅನುಸರಿಸುತ್ತಿರುವ ನೀತಿಯನ್ನು ನೋಡಿ ಡಿ.ಎಂ.ಕೆ. ಸರಕಾರದವರೂ ಅವರನ್ನು ಒಪ್ಪುತ್ತಿದ್ದಾರೆ. ಅವರು ಎಲ್ಲ ಜನರಿಗೂ ಅನುಕೂಲವಾಗುವಂತಹ ಸರ್ವ ಸಮ್ಮತವಾದ ನೀತಿಯನ್ನು ಅನುಸರಿಸುತ್ತಾರೆಂದು ಇತ್ತು. ಆದರೆ ಇಂದು ಕನ್ನಡದ ಜನಕ್ಕೆ ಒಂದು ರೀತಿಯಾದ ಶಂಕೆಗಳು ಬರಲಾರಂಭಿಸಿವೆ. ಇಂದು ಯಾರು ಇಂದಿರಾ ಗಾಂಧಿಯವರ ನೀತಿಯನ್ನು ಅನುಸರಿಸುವುದಿಲ್ಲವೋ ಅಂತಹವರನ್ನು ದೇಶದಿಂದ ಬೇರೆ ಇಡಬೇಕು ಎನ್ನುವಂತೆ ಹೇಳುತ್ತಿರುವುದರಿಂದ ಇವೊತ್ತು ಕನ್ನಡದ ಜನ ಇವರ ನೀತಿಯನ್ನು ಕೈಬಿಡುವ ಕಾಲ ಬಂದಿದೆ. ಇವರು ಹೇಳುವಂತೆ ನೋಡಿದರೆ ನಾವೆಲ್ಲಾ ಭಾರತ ರಾಜ್ಯವನ್ನು ಬಿಟ್ಟು ಬೇರೆ ಹೋಗಬೇಕೆಂದಾಗುತ್ತದೆ. ಇವೊತ್ತು ವಿರೋಧ ಸರಕಾರ ಇರುವ ಡಿ.ಎಂ.ಕೆ. ಸರಕಾರ ಹೇಳಿದ್ದನ್ನು ಶ್ರೀಮತಿ ಇಂದಿರಾ ಗಾಂಧಿಯವರು ಒಪ್ಪುತ್ತಾರೆ. ಆದರೆ ಇಲ್ಲಿ ಸಿಂಡಿಕೇಟು ಆಡಳಿತ ಇರುವ ಸರಕಾರ ಇದೆ ಎಂದು ಈ ಸರಕಾರ ಹೇಳಿದುದನ್ನು ಒಪ್ಪದೇ ಸುಮ್ಮನೇ ನಿಧಾನ ಮಾಡುತ್ತಿದ್ದಾರೆ. ಶ್ರೀಮತಿ

ಇಂದಿರಾ ಗಾಂಧಿಯವರು ದೇಶದಲ್ಲಿ ಇಂದು ಎಲ್ಲ ಕಡೆಗಳಲ್ಲೂ ಸಮಾಜವಾದ ಜಾರಿಗೆ ತರುತ್ತೇವೆ ಎಂದು ಹೇಳುತ್ತಾರೆ. ಶ್ರೀಮತಿ ಇಂದಿರಾ ಗಾಂಧಿಯವರು ಹೇಳುವ ಸಮಾಜವಾದವನ್ನು ನಾವೂ ಒಪ್ಪುತ್ತೇವೆ. ಅವರೇ ನೇಮಕ ಮಾಡಿದ ಈ ಮಹಾಜನ್ ಕಮಿಷನ್ ರಿಪೋರ್ಟನ್ನು ಖಂಡಿತ ಒಪ್ಪಬೇಕು. ಹಾಗೆ ಒಪ್ಪುತ್ತೇವೆ ಎಂದು ಹೇಳಿ ಅವರು ನಮ್ಮ ಕರ್ಣಾಟಕಕ್ಕೆ ಬರಲಿ, ನಾನು ಅವರಿಗೆ ಭವ್ಯವಾದ ಸ್ವಾಗತವನ್ನು ಏರ್ಪಾಡು ಮಾಡುತ್ತೇನೆ. ರಾಷ್ಟ್ರದಲ್ಲಿ ಇರುವ ಮೂರು ಕೋಟಿ ಜನ ಕನ್ನಡಿಗರ ಪರವಾಗಿ ಅವರಿಗೆ ಭವ್ಯವಾದ ಸ್ವಾಗತ ಕೊಡುತ್ತೇನೆ. ಆದರೆ ಇದರಲ್ಲಿ ಯಾವುದೇ ವಿಧವಾದ ರಾಜಕೀಯ ಮಾಡುವುದಕ್ಕೆ ಹೋದರೆ, ಇದರಲ್ಲಿ ಘರ್ಷಣೆ ತಪ್ಪಿದ್ದಲ್ಲ. ಇಂದು ನಾವು ನೋಡುವಾಗ ಇಲ್ಲಿ ಒಂದು ರೀತಿಯಾದ ರಾಜಕೀಯದ ತಾಂಡವ ನೃತ್ಯವಾಗುತ್ತಿರುವುದು ಕಂಡು ಬರುತ್ತಿದೆ. ಇದಕ್ಕಾಗಿ ಕನ್ನಡದ ನೆಲ ಸ್ಮಶಾನವಾಗದಿರಲಿ. ನಮ್ಮ ಕನ್ನಡದ ನೆಲದ ಒಂದಂಗುಲವನ್ನೂ ನಾವು ಕೊಡುವುದಿಲ್ಲ. ಹಿಂದೆ ಕಾಂಗ್ರೆಸ್ಸು ಒಂದಾಗಿದ್ದಾಗಿನಿಂದಲೂ ನಮ್ಮ ಕನ್ನಡದ ಜನಕ್ಕೆ ಕೇಂದ್ರದವರು ಯಾವ ರೀತಿ ಯಾವ ಸಹಾಯವನ್ನೂ ಮಾಡಿ ರಾಜ್ಯಕ್ಕೆ ಅನುಕೂಲ ಮಾಡಲಿಲ್ಲ. ಇವೊತ್ತು ನಮ್ಮ ರಾಜ್ಯದಲ್ಲಿ ಸಿಂಡಿಕೇಟು ಕಾಂಗ್ರೆಸ್ಸಿನ ಆಡಳಿತ ಇದೆ, ಇದಕ್ಕಾಗಿ ಇಂಡಿಕೇಟು ಆಡಳಿತ ಇರುವ ಕೇಂದ್ರದವರು ಇದನ್ನು ವಿರೋಧಿಸಬೇಕೆಂದು ರಾಜಕೀಯ ಆಟವಾಡುವುದಕ್ಕೆ ಹೊರಟರೆ ಮುಂದೆ ರಾಜ್ಯದ ಎಲ್ಲ ಜನರೂ ಅಂದೋಲನ ಮಾಡಿ ಹೋರಾಟ ಮಾಡಲು ಸಿದ್ಧವಾಗುತ್ತಾರೆ. ಕರ್ಣಾಟಕದ ರಾಜ್ಯವನ್ನು ಕೇಂದ್ರದವರು ಕಾಲು ಚೆಂಡಿನಂತೆ ಆಡುತ್ತಿದ್ದಾರೆ. ಇಂದು ಕನ್ನಡ ಜನರ ಸೌಜನ್ಯವನ್ನು ಪರೀಕ್ಷೆ ಮಾಡುವ ಕಾಲ ಬಂದಿದೆ. ಮಹಾರಾಷ್ಟ್ರದಲ್ಲಿ ಶಿವಸೇನೆ ನಾಯಕರಾದ ಬಾಳಠಾಕರೆಯವರಿಗೆ ಅಲ್ಲಿನ ಸರಕಾರ ಪಿಸ್ತೂಲು ಕೊಟ್ಟಿದೆ. ಅವರು ಅದನ್ನು ತೆಗೆದುಕೊಂಡು ಗಡಿಗೆ ಮಾರ್ಚ್ 2ನೇ ತಾರೀಖು ಬರುತ್ತಾರಂತೆ. ಬರಲಿಲ್ಲ ಅವರು ಕರ್ಣಾಟಕದ ಎಲ್ಲಿಗೆ ಬರಲಿ ಮತ್ತು ಎಲ್ಲ ಜನರನ್ನು ಕೂಡಿಕೊಂಡು ದಂಡೆತ್ತಿ ಬರಲಿ, ನಾವೇನೂ ಕನ್ನಡಿಗರು ಬಳೆ ತೊಟ್ಟುಕೊಂಡು ಕೂತಿಲ್ಲ, ನಾನು ಈ ಸಂದರ್ಭದಲ್ಲಿ ಮಹಾರಾಷ್ಟ್ರದವರಿಗೆ ಹೇಳುತ್ತಿದ್ದೇನೆ. ಬೇಕಾದವರು ದಂಡತ್ತಿ ಬರಲಿ.

ಶ್ರೀಮತಿ ಕೆ. ಲೀಲಾವತಿ ರೈ.—ಬಳೇ ತೊಟ್ಟವರೂ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ಬರಲಿ, ಅವರೂ ನಾವು ಕೂಡಿಕೊಂಡು ಹೋರಾಟ ಮಾಡಲು ಸಿದ್ಧರಾಗೋಣ. ಆದರೆ ಶ್ರೀಮಾನ್ ಸಿದ್ಧವೀರಪ್ಪನವರು ಕೇಂದ್ರ ಸರಕಾರಕ್ಕೆ ವಿರುದ್ಧವಾಗಿ ಇಂದು ಇಲ್ಲಿ ಆಡಳಿತ ನಡೆಸುತ್ತಿರುವ ಸರಕಾರ ವರ್ತಿಸುತ್ತಿದೆ ಎನ್ನುವಂತಹ ಮಾತುಗಳನ್ನು ಹೇಳಿದರು. ಆದರೆ ಶ್ರೀಮಾನ್ ಸಿದ್ಧವೀರಪ್ಪನವರೂ ಈ ರಾಜ್ಯದ ಒಬ್ಬರು ಕನ್ನಡಿಗರು ಮತ್ತು ಇಲ್ಲಿನ ಜನರ ಮುಂದಾಳುಗಳೂ ಆಗಿದ್ದಾರೆ. ಇದರಿಂದ ರಾಜ್ಯದ ಎಲ್ಲ ಗೌರವಗಳನ್ನೂ ಕಾಪಾಡುವುದರಲ್ಲಿ ಮತ್ತು ರಾಜ್ಯದ ಗಡಿಗಳನ್ನು ಉಳಿಸುವುದರಲ್ಲಿ ಅವರ ಪಾತ್ರವೂ ಸಂಪೂರ್ಣವಾಗಿ ಸೇರುತ್ತದೆ ಎಂದು ನಾನು ಅವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇವೊತ್ತು ಇಲ್ಲಿ ಮುಖ್ಯ ಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರು ರಾಜೀನಾಮೆ ಕೊಡಬೇಕೆಂದು ಕೇಳಿದರು. ಅವರು ರಾಜೀನಾಮೆ ಕೊಡುವುದು ಬಿಡುವುದು ಅವರಿಗೆ ಬಿಟ್ಟದ್ದು. ನಾನು ಇದರ ಬಗ್ಗೆ ಕೇಳುತ್ತಿಲ್ಲ. ಆದರೆ ಇವೊತ್ತು ದೇಶದಲ್ಲಿರುವ ಒಂದು ದೊಡ್ಡ ಹಡಗೇ ಮುಳುಗುತ್ತಿದೆ. ನಾವು ಇಂತಹ ಹಡಗಿನಲ್ಲಿ ಕುಳಿತು ಮುಳುಗುವಾಗ ಮುಂದೆ ಯಾರೂ ಅದರಲ್ಲಿ ಉಳಿಯುವುದಿಲ್ಲ. ಇದರಿಂದ ರಾಜ್ಯದ ಜನಕ್ಕೆ ಕಷ್ಟವಾಗುತ್ತದೆ. ಹಿಂದೆ ಇದೇ ಸಭೆಯಲ್ಲಿ ಆಗಲೂ ಕೂಡ ಮಹಾಜನ್ ವರದಿಯನ್ನು ಕಾರ್ಯಗತ ಮಾಡಬೇಕೆಂದು ಒಮ್ಮತದಿಂದ ನಿರ್ಣಯ ಪಾಸು ಆಗಿ ಕೇಂದ್ರ ಸರಕಾರಕ್ಕೆ ಕಳುಹಿಸಲಾಗಿತ್ತು. ಅದರೆ ಇದುವರೆಗೂ ಕೇಂದ್ರದವರಿಂದ ಏನೂ ಉತ್ತರ ಬರಲಿಲ್ಲ. ನಾನು ಇವತ್ತು ಹೇಳುತ್ತಿದ್ದೇನೆ, ನಮ್ಮ ಜನತೆಯ ಪರವಾಗಿ ಹೇಳುತ್ತಿದ್ದೇನೆ, ರಕ್ತದ ಕೋಡಿ ಹರಿದರೂ ಚಿಂತೆಯಿಲ್ಲ, ಬೆಳಗಾಮನ್ನು ಮಹಾರಾಷ್ಟ್ರದವರಿಗೆ ಬಿಟ್ಟುಕೊಡುವುದಿಲ್ಲ. ಆ ರೀತಿ ಏನಾದರು ಬೆಳಗಾಮನ್ನು ಕೇಂದ್ರ ಸರ್ಕಾರದವರು ಮಹಾರಾಷ್ಟ್ರದವರಿಗೆ ಕೊಟ್ಟರೆ ನಾವು ಎಲ್ಲ ರೀತಿಯ ಚಳುವಳಿಗೂ ಕೂಡ ಸಿದ್ಧರಿದ್ದೇವೆ. ಗಡಿಯಲ್ಲಿ ಹೆಣದ ರಾಸಿ ಬೀಳುತ್ತದೆಂದು ಕೇಂದ್ರದವರಿಗೆ ಎಚ್ಚರಿಕೆ ಕೊಡುತ್ತಿದ್ದೇನೆ. ಬೇಕಾದರೆ ಮೊದಲನೆಯ ಹೆಣ ನನ್ನದೇ ಬೀಳಲಿ, ಇದರಲ್ಲಿ ಯಾವ ಅನುಮಾನವೂ ಇಲ್ಲ.

ಶ್ರೀ ಸದಾಶಿವಪ್ಪ ಪಾಟೀಲ್.—ಇಷ್ಟರಲ್ಲಿಯೇ ಇವರ ಮದುವೆ ಇದೆ, ನನ್ನ ಹೆಣ ಬೇಕಾದರೆ ಬೀಳಲಿ ಎಂದು ಹೇಳುತ್ತಿದ್ದಾರೆ ?

ಶ್ರೀ ವಾಟಾಳ್ ನಾಗರಾಜ್.—ತರುಣ ಭಾರತ ಎಂಬ ಮರಾಠಿ ಪತ್ರಿಕೆಯಲ್ಲಿ ಬಂದಿರುವ ಒಂದು ಸುದ್ಧಿಯನ್ನು ಕನ್ನಡಪ್ರಭಾ ಪತ್ರಿಕೆಯವರು ಪ್ರಕಟಿಸಿದ್ದಾರೆ. ಅದನ್ನು ಪೂರ್ಣವಾಗಿ

(ಶ್ರೀ ವಾಟಾಳ್ ನಾಗರಾಜ್)

ಇಲ್ಲಿ ಓದುವುದಕ್ಕೆ ನಾನು ಹೋಗುವುದಿಲ್ಲ. ಶ್ರೀಮಾನ್ ದೇವರಾಜ ಅರಸ್ ಅವರು ಆ ರೀತಿ ಸ್ಟೇಟ್‌ಮೆಂಟ್ ಕೊಟ್ಟಿರುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಮತಿ ಇಂದಿರಾಗಾಂಧಿಯವರು ಕೊಟ್ಟಿರತಕ್ಕಂಥ ಯಾವುದೇ ಸೂತ್ರವನ್ನು ಶ್ರೀ ದೇವರಾಜ ಅರಸ್ ಅವರು ಒಪ್ಪಿಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆಂಬ ಅಂಶವನ್ನು ಈ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಆ ರೀತಿ ಅವರು ಹೇಳಿರುವುದಿಲ್ಲ, ಮಹಾಜನ್ ಕಮಿಷನ್ ವರದಿ ಕಾರ್ಯಗತವಾಗುವ ಬಗ್ಗೆ ಅವರು ಸಹ ನಮ್ಮೊಂದಿಗೆ ಒಮ್ಮತದಿಂದ ಇದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಶಾಖೆಯ ಮಂತ್ರಿಗಳು).—ನಾನು ದೆಹಲಿಗೆ ಹೋಗಿದ್ದಾಗ ಶ್ರೀ ದೇವರಾಜ ಅರಸ್ ಅವರು ಕೂಡ ನನ್ನ ಜೊತೆಯಲ್ಲಿ ಇದ್ದರು. ಈ ರಾಜ್ಯದ ಗಡಿ ಸಂರಕ್ಷಣೆಯ ಬಗ್ಗೆ ಏನು ಪ್ರಯತ್ನ ಮಾಡಬೇಕೋ ಅದನ್ನು ಅವರು ಮಾಡುತ್ತಿದ್ದಾರೆ. ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ ಸರಿ ಎಂದು ಮಾನ್ಯ ಸದಸ್ಯರು ತಿಳಿದುಕೊಳ್ಳಬಾರದು.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ರಾಚಯ್ಯನವರಿಗೆ ಗಡಿ ವಿಚಾರದಲ್ಲಿ ಬಹಳ ಆಸಕ್ತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ದೆಹಲಿಗೆ ಹೋಗಿ ಏನನ್ನು ಸಾಧಿಸಿಕೊಂಡು ಬಂದರು ಎಂದು ಕೇಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ದೆಹಲಿಗೆ ಹೋಗಿ ಏನು ಮಾಡಿದಿರಿ ಎಂದು ಕೇಳುತ್ತಿದ್ದಾರೆ. ನಾನು ದೆಹಲಿಗೆ ಹೋಗಿ ಅಲ್ಲಿ ನಮ್ಮ ರಾಜ್ಯದಿಂದ ಆರಿಸಿ ಹೋಗಿರುವ ಇಂಡಿಕೇಟ್, ಸಿಂಡಿಕೇಟ್, ಪಿ.ಎಸ್.ಪಿ., ಎಸ್.ಎಸ್.ಪಿ. ಮುಂತಾದ ಎಲ್ಲಾ ಪಕ್ಷಗಳ ಸದಸ್ಯರನ್ನು ಒಟ್ಟುಗೂಡಿಸಿ ಅವರಿಗೆಲ್ಲಾ ಮುಖ್ಯಮಂತ್ರಿಗಳ ಮನವಿ ಏನಿದೆ ಎಂಬುದನ್ನು ತಿಳಿಸಿದೆ. ನಂತರ ಅವರೆಲ್ಲಾ ಒಗ್ಗಟ್ಟಿನಿಂದ ಒಂದುಗೂಡಿಕೊಂಡು ಪ್ರಧಾನ ಮಂತ್ರಿಯವರಲ್ಲಿ ಹೋಗಿ ನಮ್ಮ ರಾಜ್ಯದ ಗಡಿ ಸಂರಕ್ಷಣೆ ಮಾಡಬೇಕಾದ ಕರ್ತವ್ಯವನ್ನು ವಿವರವಾಗಿ ಹೇಳಿದರು. ಈ ರೀತಿ ಅವರೆಲ್ಲಾ ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಿದ್ದರು ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಕೂಡ ಸಮಾಜವಾದದ ಬಗ್ಗೆ ಮಾತನಾಡುತ್ತೇನೆ. ಆದರೆ ಎಲ್ಲರಂತೆ ನಾನು 30 ಲಕ್ಷ ರೂಪಾಯಿಗಳ ಆಸ್ತಿ ಮಾಡಿಕೊಂಡು ಇಲ್ಲಿ ಸಮಾಜವಾದದ ಬಗ್ಗೆ ಹೇಳುವುದಕ್ಕೆ ಬಂದಿಲ್ಲ. ನಾನು ಯಾವ ಆಸ್ತಿಯನ್ನು ಸಹ ಮಾಡಿಕೊಂಡಿಲ್ಲ. ಮತ್ತು ಶ್ರೀಮತಿ ಇಂದಿರಾಗಾಂಧಿಯವರು ಏನು ಸಮಾಜವಾದವನ್ನು ಹೇಳುತ್ತಿದ್ದಾರೆ ಅದಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ.

ಶ್ರೀ ಎಸ್. ಚನ್ನಯ್ಯ.—ಯಾರು 30 ಲಕ್ಷ ರೂಪಾಯಿಗಳ ಆಸ್ತಿ ಮಾಡಿಕೊಂಡಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಬಿ. ರಾಚಯ್ಯ.—ಧೀರೋದಾತ್ತವಾದ ಭಾಷಣ ಮಾಡಿ ಆತ್ಮವಂಚನೆ ಮಾಡಿಕೊಳ್ಳುವುದು ಸರಿಯಲ್ಲ. ಮಾನ್ಯ ಸದಸ್ಯರು ಯಾರು ಯಾರು ಆಸ್ತಿ ಮಾಡಿಕೊಂಡಿದ್ದಾರೆ ಎಂಬುದನ್ನು ವಿವರವಾಗಿ ಹೇಳಲಿ.

ಶ್ರೀ ವಾಟಾಳ್ ನಾಗರಾಜ್.—ನಾನು ನಿಮ್ಮ ಬಗ್ಗೆ ಹೇಳಲಿಲ್ಲ. ಈ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವ ಬಗ್ಗೆ ನಾವೆಲ್ಲಾ ಒಂದಾಗಬೇಕು. ಇದರಲ್ಲಿ ಪಕ್ಷ ರಾಜಕೀಯ ತರುವುದು ಸರಿಯಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಯಾರ ಒತ್ತಡಕ್ಕೂ ಒಳಗಾಗದೆ ಮಹಾಜನ್ ವರದಿಯನ್ನು ಜಾರಿಗೆ ತಂದು, ನಂತರ ಮೈಸೂರು ರಾಜ್ಯಕ್ಕೆ ಬಂದರೆ ಯಾರೂ ಹಿಂದೆ ಕೊಟ್ಟಿರಬಾರದು, ಅಂತಹ ಹಾರ್ದಿಕ ಸ್ವಾಗತವನ್ನು ಇಡೀ ಕನ್ನಡ ನಾಡಿನ ಜನರ ಪರವಾಗಿ ನಾವು ಕೊಡುತ್ತೇವೆ. ಮಹಾರಾಷ್ಟ್ರದವರ ಒತ್ತಾಯಕ್ಕೆ ಮಣಿದು, ಮೈಸೂರನ್ನು ಕಡೆಗಣಿಸಿ ನಮ್ಮ ರಾಜ್ಯದ ಒಂದು ಅಂಗುಲ ಭೂಮಿಯನ್ನು ಸಹ ಪ್ರಧಾನ ಮಂತ್ರಿಯವರು ಮಹಾರಾಷ್ಟ್ರದವರಿಗೆ ಕೊಡುವುದಕ್ಕೆ ಹೋಗಬಾರದು. ಆ ರೀತಿ ಏನಾದರು ಕೊಟ್ಟರೆ ನಾವೆಲ್ಲರೂ ಒಗ್ಗಟ್ಟಿನಿಂದ ವಿರೋಧ ಮಾಡಬೇಕು. ಇದಕ್ಕೆ ಎಲ್ಲ ಪಕ್ಷದ ನಾಯಕರುಗಳು ಸಹ ಬೆಂಬಲ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮೊನ್ನೆ ಬೆಳಗಾಂನಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರು ಭಾಷಣ ಮಾಡುವಾಗ ನಾನು ಮುಖ್ಯಮಂತ್ರಿಯಾಗಿರುವವರೆಗೆ ಬೆಳಗಾಂನ್ನು ಬರ್ಲಿನ್ ಮಾಡುವುದಕ್ಕೆ ಬಿಡುವುದಿಲ್ಲ ಎಂಬತಕ್ಕಂಥ ಮಾತನ್ನು ಬಹಳ ಜೋರಾಗಿ ಕೈಬೀಸಿ ಹೇಳಿದ್ದಾರೆಂಬ ಅಂಶ ಪತ್ರಿಕೆಗಳಲ್ಲಿ ಬಂದಿತ್ತು. ಅದನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಈ ಬಗ್ಗೆ ಮುಖ್ಯಮಂತ್ರಿಗಳು ಒಂದು ಧೀರೋದಾತ್ತವಾದ ನಿಲುವನ್ನು ತಳೆದಿರುವುದು ಸಂತೋಷದ

ವಿಚಾರ. ಆದರೂ ಕೂಡ ಅವರಿಗೆ ಎಚ್ಚರಿಕೆ ಕೊಡುತ್ತಿದ್ದೇನೆ, ಏನೆಂದರೆ ಮಹಾಜನ್ ವರದಿಯನ್ನು ಬಿಟ್ಟು ಬೇರೆ ಯಾವುದೇ ಸೂತ್ರವನ್ನು ನಮ್ಮ ರಾಜ್ಯದ ಮೇಲೆ ಕೇಂದ್ರದವರು ಹೇರುವುದಕ್ಕೆ ಹೊರಟರೆ ಮುಖ್ಯಮಂತ್ರಿಯವರು ಒಂದು ಗಳಿಗೆಯೂ ಕೂಡ ಆ ಸ್ಥಾನದಲ್ಲಿ ಇರಬಾರದು. ಅವರು ಮುಂದುವರೆದರೆ ಇಡೀ ರಾಜ್ಯದಲ್ಲಿ ಪ್ರಚಂಡವಾದಂಥ ಚಳುವಳಿ ಅವರ ವಿರುದ್ಧವಾಗಿ ನಡೆಯುತ್ತದೆಂದು ಎಚ್ಚರಿಕೆ ಕೊಡುತ್ತಿದ್ದೇನೆ. ಈ ಕಾರಣದಿಂದ ಮುಖ್ಯಮಂತ್ರಿಗಳು ಆದಷ್ಟು ಜಾಗ್ರತೆ ಕೇಂದ್ರಕ್ಕೆ ಹೋಗಿ ತಮ್ಮ ಪ್ರಭಾವವನ್ನು ಅಲ್ಲಿರುವ ವರಿಷ್ಠರ ಮೇಲೆ ಬೀರಿ ನಮ್ಮ ನಿಲುವು ಏನು ಎಂಬುದನ್ನು ಹೇಳಬೇಕು. ಆ ರೀತಿ ಮಾಡುತ್ತಾರೆಂದು ನಾನು ನಂಬಿ ಕೊಂಡಿದ್ದೇನೆ.

ಇದೇ ಸಂದರ್ಭದಲ್ಲಿ ಮತ್ತೊಂದು ವಿಚಾರ ಹೇಳಬೇಕಾಗಿದೆ. ಮೊನ್ನೆತಾನೆ ನಾವು ತಾಳವಾಡಿಯಲ್ಲಿ ಚಳುವಳಿ ನಡೆಸುವುದಕ್ಕೆ ಹೋಗಿದ್ದೆವು. ಅಲ್ಲಿ ಪ್ರಚಂಡವಾದಂಥ ಚಳುವಳಿ ನಡೆಯಿತು. ತಾಳವಾಡಿ ನಮ್ಮ ರಾಜ್ಯಕ್ಕೆ ಸೇರಬೇಕೆಂಬ ಬಗ್ಗೆ ಕಳೆದ 13 ವರ್ಷಗಳಿಂದ ಯಾವುದೇ ಆಯೋಗವನ್ನು ನೇಮಕ ಮಾಡಿಲ್ಲ. ಅಲ್ಲಿಯ ಜನರು ನಮ್ಮ ರಾಜ್ಯದೊಂದಿಗೆ ಸೇರುವುದಕ್ಕೆ ಇಷ್ಟಪಟ್ಟಿದ್ದಾರೆ. ಅದಕ್ಕಾಗಿ ಚಳುವಳಿ ನಡೆಸಬೇಕಾಯಿತು. ತಾಳವಾಡಿಯನ್ನು ಕರ್ನಾಟಕಕ್ಕೆ ಸೇರಿಸುವ ಬಗ್ಗೆ ಮೈಸೂರಿನ ಮುಖ್ಯಮಂತ್ರಿಗಳು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ, ಮತ್ತು ತಾಳವಾಡಿಯನ್ನು ಕರ್ನಾಟಕಕ್ಕೆ ಕೊಡುವ ಬಗ್ಗೆ ಮದ್ರಾಸ್‌ನ ಮುಖ್ಯಮಂತ್ರಿಗಳು ಸಹ ಯಾವ ಕ್ರಮವನ್ನೂ ಸಹ ಕೈಕೊಳ್ಳಲಿಲ್ಲವೆಂದು ಅಲ್ಲಿಯ ಜನರು ನಮಗೆ ಹೇಳಿದರು. ತಾಳವಾಡಿ ಚಳುವಳಿಯಲ್ಲಿಯೂ ಕೂಡ ಇಂಡಿಕೇಟ್ ಸಿಂಡಿಕೇಟ್ ಜಗಳ ಬಂತು. ಶ್ರೀಮಾನ್ ಪುಟ್ಟಸ್ವಾಮಿಯವರು ಇಂದಿರಾ ಗಾಂಧಿಯವರ ಇಂಡಿಕೇಟ್ ಪಕ್ಷಕ್ಕೆ ಸೇರಿದವರು, ಅವರು ನನ್ನ ಜೊತೆಯಲ್ಲಿ ಇದ್ದಾರೆಂಬ ಕಾರಣದಿಂದ ಸಿಂಡಿಕೇಟಿಗೆ ಸೇರಿದ ಶ್ರೀ ಎಂ. ಸಿ. ಬಸಪ್ಪನವರು ಆ ಚಳುವಳಿಗೆ ವಿರೋಧ ಮಾಡಿದರು. ಮತ್ತು ಜನತೆಯಲ್ಲಿ ಒಂದು ದೊಡ್ಡ ಆಂಧೋಳನವನ್ನು ಉಂಟುಮಾಡಿದರು. ಇದರಿಂದ ನನ್ನ ಮನಸ್ಸಿಗೆ ಮತ್ತು ತಾಳವಾಡಿಯಲ್ಲಿರುವ ಜನರ ಮನಸ್ಸಿಗೆ ಬಹಳ ತೀವ್ರವಾದಂಥ ನೋವು ಉಂಟಾಯಿತು. ಮಾನ್ಯ ರಾಚಯ್ಯನವರು ಸಹ ಆಲೂರಿಗೆ ಹತ್ತಿರದ ಊರಿನವರು. 1967ರಲ್ಲಿ ಚುನಾವಣೆಯ ಸಮಯದಲ್ಲಿ ಅಲ್ಲಿಗೆ ಹೋಗಿ ತಾಳವಾಡಿ ಮುಂತಾದ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಹೇಳಿ ಉದ್ದುದ್ದದ ಹಾರಗಳನ್ನು ಹಾಕಿಸಿಕೊಂಡು ಬಂದರು. ಕಳೆದ ಮೂರು ವರ್ಷಗಳಿಂದ ಇವರು ಆ ಕಡೆಗೆ ಹೋಗಿಯೇ ಇಲ್ಲ. ಅಲ್ಲಿಯ ಜನರನ್ನು ಮರೆತೇ ಬಿಟ್ಟರು. ಮತ್ತೆ 1972ರ ಚುನಾವಣೆಯ ಸಮಯದಲ್ಲಿ ಅಲ್ಲಿಗೆ ಹೋಗುತ್ತಾರೆ.

ಶ್ರೀ ಬಿ. ರಾಚಯ್ಯ.—ಈಗಲೂ ಕೂಡ ತಾಳವಾಡಿಯನ್ನು ಮೈಸೂರಿಗೆ ಸೇರಿಸಬೇಕೆಂದೇ ನನ್ನ ಪ್ರಯತ್ನ ಇರುವುದು. ಅದನ್ನು ಮದ್ರಾಸ್‌ಗೆ ಬಿಟ್ಟುಬಿಟ್ಟಿದ್ದೇವೆಂದು ತಪ್ಪು ಕಲ್ಪನೆ ಮಾಡಿಕೊಳ್ಳಬಾರದು. ಇದು ಮೈಸೂರು ಮದ್ರಾಸ್‌ಗಡಿಗೆ ಸಂಬಂಧಪಟ್ಟ ಪ್ರಶ್ನೆ. ಈಗ ಇಲ್ಲಿ ಚರ್ಚೆಯಾಗುತ್ತಿರುವುದು ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆ. ತಾಳವಾಡಿಯನ್ನು ಮೈಸೂರಿಗೆ ಸೇರಿಸುವ ಪ್ರಶ್ನೆಯನ್ನು ಜೋನಲ್ ಕೌನ್ಸಿಲ್ ಮುಂದೆ ಮೊದಲು ತರಬೇಕಾಗುತ್ತದೆ. ಆ ರೀತಿ ತಂದಾಗ ಸಂಬಂಧಪಟ್ಟ ಮುಖ್ಯ ಮಂತ್ರಿಗಳು ಚರ್ಚೆ ಮಾಡುತ್ತಾರೆ. ಆ ಸಮಯದಲ್ಲಿ ನಾನು ಸಹ ನನ್ನ ಪಾತ್ರವನ್ನು ವಹಿಸುತ್ತೇನೆ. ತಾಳವಾಡಿಯನ್ನು ಮೈಸೂರಿಗೆ ಸೇರಿಸುವ ವಿಚಾರದಲ್ಲಿ ನಾನು ಹಿಂದೆಗೆಯುತ್ತಿದ್ದೇನೆಂದು ಹೇಳಬೇಡಿ.

ಶ್ರೀ ವಾಟಾಳ್ ನಾಗರಾಜ್.—ತಾಳವಾಡಿಯ ಚಳುವಳಿಯಲ್ಲಿ ಚಾಮರಾಜನಗರದವರು ಯಾರು ಯಾರು ಸೇರಿಲ್ಲವೋ ಅವರೆಲ್ಲರೂ ಕೂಡ ತಾಳವಾಡಿಗೆ ಬರಲಿ, ನಾನು ಸ್ವಾಗತ ಮಾಡುತ್ತೇನೆ. ಅಲ್ಲಿ ಶೇಕಡ 2 ರಷ್ಟು ತಮಿಳು ಮಾತನಾಡುವವರು ಇದ್ದರೆ ತಾಳವಾಡಿಯನ್ನು ಮೈಸೂರಿಗೆ ಸೇರಿಸುವುದು ಬೇಡ.

5-00 P.M.

ನಾನು ತಾಳವಾಡಿಯಲ್ಲಿ 62 ಹಳ್ಳಿಗಳನ್ನು ಪ್ರತ್ಯಕ್ಷವಾಗಿ ಹೋಗಿ ನೋಡಿದ್ದೇನೆ. ಅಲ್ಲಿ ಶೇಕಡಾ ಒಂದು ಭಾಗ ಕೂಡ ತಮಿಳರು ಇಲ್ಲ. ಅಲ್ಲಿ ಸುಮಾರು 50 ಸಾವಿರ ಕನ್ನಡ ಜನ ಇದ್ದಾರೆ. ಅದನ್ನು ಕರ್ಣಾಟಕಕ್ಕೆ ಸೇರಿಸಬೇಕೆಂದು 13 ವರ್ಷಗಳಿಂದ ಪ್ರಯತ್ನ ನಡೆಯುತ್ತಿದೆ. ಮಾನ್ಯ ಬಿ. ರಾಚಯ್ಯನವರು ಅಲ್ಲಿಗೆ ಒಂದು ಸಮ್ಮೇಳನಕ್ಕೆ ಹೋಗಿದ್ದಾಗ ತಮ್ಮ ಬೆಂಬಲವನ್ನು ಕೊಟ್ಟಿದ್ದಾರೆ. ಆದರೆ ಇದನ್ನು ಜೋನಲ್ ಕೌನ್ಸಿಲ್‌ನಲ್ಲಿ ಇತ್ಯರ್ಥ ಮಾಡುತ್ತೇವೆಂದು

(ಶ್ರೀ ವಾಟಾಳ್ ನಾಗರಾಜ್)

ಹೇಳುತ್ತಾರೆ. ಜೋನರ್ ಕೌನ್ಸಿಲ್‌ನಲ್ಲಿ ಏನು ನಡೆಯಿತು ? ಅಲ್ಲಿ ಪಿಟಿಕ್ ಎನ್ನಲಿಲ್ಲ. ಜೋನಲ್ ಕೌನ್ಸಿಲ್ ಎಂದು ಹೇಳುತ್ತಾ ಇವರು ದ್ವಾಪರಯುಗ, ಶಿಲಾಯುಗದಲ್ಲಿ ಇದ್ದಾರೆ. ಆ ರೀತಿ ಇರುವುದು ಸರಿಯಲ್ಲ. ಆ ಪ್ರದೇಶದ ಜನ ನಿಮ್ಮನ್ನು ನಂಬಿಕೊಂಡಿದ್ದಾರೆ. ಆ ಪ್ರದೇಶದ ಜನ ಬಿ. ರಾಚಯ್ಯನವರು ಏನು ಮಾಡುತ್ತಿದ್ದಾರೆ ಎಂದು ಆಕಾಶ ನೋಡುತ್ತಿದ್ದಾರೆ. ಎಂ. ಸಿ. ಬಸಪ್ಪನವರು ಮುಗಿಲು ನೋಡುತ್ತಿದ್ದಾರೆ. ಗುರುಪಾದಸ್ವಾಮಿಯವರು ಈ ಪ್ರಶ್ನೆಯನ್ನು ಬಿಡಿಸಲಿಕ್ಕೆ ಏನು ಮಾಡುತ್ತಾ ಇದ್ದಾರೆ? ಇನ್ನು ಬೆಂಗಳೂರಿಗೆ 20 ಮೈಲಿ ದೂರದಲ್ಲಿರುವ ಹೊಸೂರಿನ ಪ್ರಶ್ನೆ. ಇವೆಲ್ಲ ಜೀವಂತವಾಗಿಲ್ಲದೆ ಸತ್ತುಹೋದ ಪ್ರಶ್ನೆಗಳಾಗಿವೆ. ಇದನ್ನು ಬಗೆಹರಿಸುವುದಕ್ಕೆ ನಮ್ಮ ರಾಜ್ಯ ಸರ್ಕಾರದವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಮೊನ್ನೆ ನಡೆದ ಚಳುವಳಿ ಬಹಳ ಉಗ್ರವಾಗಿ ಆಯಿತು, ಬೆಂಗಳೂರಿನಲ್ಲಿ ಹಾಗೆ ಆಯಿತು, ಹೀಗೆ ಆಯಿತು ಎಂದು ಹೇಳಿದರು. ಶ್ರೀ ಶಾಮಣ್ಣನವರು ಅಥವಾ ಸರಕಾರದವರು ಆ ರೀತಿ ನಡೆಸಿರಬಹುದು. ಶ್ರೀಮಾನ್ ವೀರೇಂದ್ರ ಪಾಟೀಲರ ಸರಕಾರ ವಾಟಾಳ್ ನಾಗರಾಜರಿಗೆ ನಾವು ಮಾಡಿದ ಚಳುವಳಿಗೆ ಕೊಟ್ಟ ಬಹುಮಾನ 107ನೆ ಸೆಕ್ಷನ್ ಹಾಕಿದ್ದಾರೆ.

ಶ್ರೀ ಟಿ. ಆರ್. ಶಾಮಣ್ಣ.—ಹೋಟಲಿಗೆ ಕಲ್ಲು ಹೊಡೆಯಬೇಡಿ, ಸಿನಿಮಾಗೆ ಕಲ್ಲು ಹೊಡೆಯಬೇಡಿ ಎಂದು ಹೇಳಿದೆವು ಅಷ್ಟೆ.

ಶ್ರೀ ವಾಟಾಳ್ ನಾಗರಾಜ್.—ಕನ್ನಡ ಚಳುವಳಿಗೆ ಕೆಟ್ಟ ಹೆಸರು ಶಾಮಣ್ಣನವರ ಕಡೆಯವರು ಕೊಟ್ಟಿದ್ದಾರೆ. ಶಾಮಣ್ಣನವರೇ ಕಲ್ಲು ಹೊಡೆಸಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ. ಒಬ್ಬ ಶಾಸಕನ ಮೇಲೆ ಮಾಣಕರಾವ ಪಾಟೀಲರು 107 ಗೂಂಡಾ ಸೆಕ್ಷನ್ ಹಾಕಿದ್ದಾರೆ. ಕನ್ನಡಿಗರಿಗೋಸ್ಕರ ಹೋರಾಟ ಮಾಡಿದರೆ ಇವರು ಕೊಡುವ ಬಳುವಳಿ ಇದು! ಶ್ರೀಮಾನ್ ರಾಜಾತಿಮ್ಮಯ್ಯ ಈ ಸಭೆಯಲ್ಲಿ ಮಾತನಾಡುತ್ತಾ 8—10 ಮಕ್ಕಳು ಬೆಂಗಳೂರಿನಿಂದ ಹೊರಟು ಹೋದರು ಎಂದು ಹೇಳಿದರು. ತಾಳವಾಡಿಗೆ ಹೋದ 82 ಜನರ ಪೈಕಿ ಬೆಂಗಳೂರಿನಿಂದ ಹೋದವರು ಐದು ಜನ. ಅದರಲ್ಲಿ ಎಲ್ಲಕ್ಕೂ ತಯಾರಾಗಿದ್ದವರು ನಾವು ಮೂರು ಜನ ಎಂದರೆ ನಾನು, ಸಂಜೀವಪ್ಪ ಮತ್ತು ಸಂಪಂಗಿ. ಇನ್ನು ಇಬ್ಬರ ಪರವಾಗಿ ಯಾವ ಹೆಂಗಸೂ ಅಳಲಿಲ್ಲ. ಆದುದರಿಂದ ತಾಳವಾಡಿಯಲ್ಲಿ 8—10 ಜನ ಬೆಂಗಳೂರಿನವರು ಸಿಕ್ಕಿ ಹಾಕಿಕೊಂಡಿದ್ದಾರೆ ಎಂದು ಹೇಳುವುದು ನಿಜವಲ್ಲ. ನನಗೆ ಮದುವೆನೇ ಆಗಿಲ್ಲ. ಯಾವ ಹೆಣ್ಣುಮಕ್ಕಳೂ ಅಳಲು ತಯಾರಾಗಿಲ್ಲ. ಒಂದು ವೇಳೆ ಹಾಗೆ ಹೆಣ್ಣುಮಕ್ಕಳು ಅತ್ತಿದ್ದು ನಿಜ ಇದ್ದರೆ ನಾನು ಶಾಸನ ಸಭೆಗೆ ರಾಜೀನಾಮೆ ಕೊಟ್ಟು ಹೋಗುತ್ತೇನೆ. ನಾವು ಯಾರೂ ಅತ್ತದ್ದು ಇಲ್ಲ. ಶ್ರೀಮಾನ್ ರಾಜಾತಿಮ್ಮಯ್ಯನವರು ಹೇಳಿದ್ದು ನಿಜವಲ್ಲ. ಅವರನ್ನು ನೋಡಿದರೆ ನನಗೆ ನಗು ಬರುತ್ತದೆ, ಸಂತೋಷ ಬರುತ್ತದೆ, ಕರುಣೆ ಬರುತ್ತದೆ, ಪ್ರೀತಿ ಬರುತ್ತದೆ, ಒಂದು ತರಹ ಲವ್ ಬರುತ್ತದೆ. ಇನ್ನು ಮಾನ್ಯ ಮುಖ್ಯ ಮಂತ್ರಿಗಳು ವೀರೇಂದ್ರ ಪಾಟೀಲರು ಒಂದು ಹೇಳಿಕೆ ಕೊಡುತ್ತಾ ಹೇಳಿದರು, ವಾಟಾಳ್ ನಾಗರಾಜರವರು ಮದರಾಸ್ ಗಡಿಯೊಳಗೆ ಹೋಗಿ ಅಲ್ಲಿ ಪ್ರತಿಬಂಧಕಾಜ್ಞೆ ಮೀರಿದ್ದಾರೆ, ಅವರನ್ನು ಸರಕಾರ ಹಾರ ಹಾಕಿ ಸ್ವಾಗತಿಸಬೇಕೇ ಎಂದು. ಇದು ಕೋರ್ಟಿನಲ್ಲಿ ಪ್ರಮುಖವಾದ ಸಾಕ್ಷಿಯನ್ನು ಕೊಟ್ಟ ಹಾಗೆ ಇವರು ನಮಗೆ ಸಪೋರ್ಟ್ ಮಾಡುತ್ತಾರೆಯೆ? ಇಂತಹ ಸರಕಾರದವರು ಎಷ್ಟರಮಟ್ಟಿಗೆ ನಮಗೆ ಸಪೋರ್ಟ್ ಮಾಡುತ್ತಾರೆ ಎನ್ನುವುದನ್ನು ತಾವು ತಿಳಿದುಕೊಳ್ಳಬಹುದು.

ಮತ್ತೆ ಗುಡಿಸಲುಗಳನ್ನು ಸುಟ್ಟು ಹಾಕುತ್ತಾರೆ ಎಂದು ಹೇಳಿದರು. ಖಂಡಿತವಾಗಿಯೂ ಈ ಕೆಲಸವನ್ನು ಯಾವುದೇ ವಿಧದಲ್ಲಿಯೂ ಕನ್ನಡ ಚಳುವಳಿಗಾರರು ಮಾಡುತ್ತ ಇಲ್ಲ, ಮಾಡಲಿಲ್ಲ, ಮಾಡುವುದಿಲ್ಲ. ಯಾವಾಗ ಸರಕಾರದವರು ಯಾರ ಯಾರ ಗುಡಿಸಲುಗಳು ಸುಟ್ಟು ಹೋಗಿದೆಯೋ ಅವರಿಗೆ ನಾವು ಪರಿಹಾರ ಕೊಡುತ್ತೇವೆ ಎಂದು ಹೇಳಿದರೋ ಆಗ ತಾವೇ ಬೆಂಕಿ ಹಚ್ಚಿ ಸುಟ್ಟು ಹೋಯಿತು ಎಂದು ಹೇಳಲು ಶುರು ಮಾಡಿದರು. ಶ್ರೀ ಅರಕೇರಿಯವರು ಹರಿಜನರ ಗುಡಿಸಲುಗಳು ಸುಟ್ಟು ಹೋದುವು ಎಂದು ಹೇಳಿದರು. ಹರಿಜನರು ಮುಂದುವರಿಯಬೇಕು ಎಂದು ಹೇಳುವವರಲ್ಲ ನಾನೂ ಒಬ್ಬ. ಅವರಿಗೆ ಯಾವ ರೀತಿಯಿಂದಲಾದರೂ ನಮ್ಮಿಂದ ತೊಂದರೆ ಆಗಿದ್ದರೆ ನಾನು ಸಂಪೂರ್ಣ ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತೇನೆ. ಆ ರೀತಿ ಮನೆಗಳನ್ನು ಸುಡಲಿಲ್ಲ, ಮುಂದೆಯೂ ಸಹ ಅದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳುತ್ತೇನೆ. ಏನು ನಡೆದರೂ ಕನ್ನಡ ಚಳುವಳಿಗಾರರ ಮೇಲೆ ಹಾಕತಕ್ಕ ನೀತಿ ಸರಿಯಾದುದು ಅಲ್ಲ. ಡೆಕ್ಕನ್ ಹೆರಾಲ್ಡ್‌ನ ಅಸಿಸ್ಟೆಂಟ್ ಎಡಿಟರ್ ಆದ ಶ್ರೀಮಾನ್ ಜನಾರ್ಧನ್‌ರವರು ಹಿಂದೂಸ್ಥಾನ್ ಟೈಂಮ್ಸ್ ನಲ್ಲಿ ಬಾಯಿಗೆ ಬಂದ ರೀತಿಯಲ್ಲಿ ಕನ್ನಡಿಗರ ಬಗ್ಗೆ ಬರೆದಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಹರಿಜನರ ಮನೆ ಸುಡಲಿಲ್ಲ ಎಂದು ಹೇಳಿದರು. ಓಕಳಿಪುರದಲ್ಲಿ ಹರಿಜನರ ಮನೆಗಳನ್ನು ಸುಟ್ಟು ಹಾಕಿದ್ದಾರೆ. ಅವರು ಬರುವುದಾದರೆ ನಾನು ಕರೆದುಕೊಂಡು ಹೋಗಿ ತೋರಿಸಲು ತಯಾರಿದ್ದೇನೆ. ಕನ್ನಡ ಚಳುವಳಿಗಾರರು ಸುಟ್ಟಿದ್ದಾರೆ ಎಂದು ಪ್ರತಿಪಾದನೆ ಮಾಡಲಿಲ್ಲ. ಗಲಾಟೆ ಆದಾಗ ಎರಡು ಮನೆಗಳು ಸುಟ್ಟುಹೋದುವು ಎಂದು ಹೇಳಿದರು. ಆದರೆ ಅದು ಎರಡು ಮನೆಗಳು ಅಲ್ಲ ಐದು ಮನೆಗಳು. ಅವರು ತಮಿಳರೂ ಹೌದು, ಹರಿಜನರೂ ಹೌದು. ಈಗಲೇ ಬಂದರೆ ತೋರಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮನೆಗಳನ್ನು ಸುಡಬಾರದು ಎಂದು ಹೇಳುತ್ತಿದ್ದೇನೆ. ಚಳುವಳಿಯನ್ನು ಬೇಕಾದರೆ ನಡೆಸಲಿ. ಆದರೆ ಮನೆಗಳನ್ನು ಸುಡುವ ಪ್ರಕರಣ ಬರಬಾರದು. ಅವರು ಹರಿಜನರೇ ಆಗಲೀ, ತಮಿಳರೇ ಆಗಲೀ, ಆಂಧ್ರದವರೇ ಆಗಲಿ, ಮುಸ್ಲಿಮರೇ ಆಗಲೀ, ಮನೆಗಳನ್ನು ಸುಡುವುದು ಪ್ರಜಾಪ್ರಭುತ್ವಕ್ಕೆ ಅವಹೇಳನ. ನಿರಪರಾಧಿಗಳನ್ನು ಆ ರೀತಿ ತೊಂದರೆಗೆ ಒಳಪಡಿಸಬಾರದು. ಯಾವ ಚಳುವಳಿಯಾದರೂ, ಅದರಲ್ಲಿ ನಿರಪರಾಧಿಗಳು ಬಲಿಯಾಗುತ್ತಿದ್ದಾರೆ ಮತ್ತು ಹರಿಜನರ ಮನೆಗಳನ್ನು ಸುಡುತ್ತಿದ್ದಾರೆ, ಇದು ನಾಚಿಕೆಗೇಡು. ಅದನ್ನು ತಪ್ಪಿಸಬೇಕು.

ಶ್ರೀ ಎ. ಮುನಿಯಪ್ಪ.—ವಾಟಾಳ್ ನಾಗರಾಜರಿಗೆ ಹರಿಜನರ ಸಂಪೂರ್ಣ ಬೆಂಬಲ ಇದೆ. ಹರಿಜನರನ್ನು ಬಿಟ್ಟರೆ ಅವರ ಚಳುವಳಿ ಯಶಸ್ವಿಯಾಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜರು ಹರಿಜನರಿಗೆ ಪರಿಹಾರ 75—80 ರೂಪಾಯಿ ಸಿಗುತ್ತದೆಂದು ತಾವೇ ಗುಡಿಸಲುಗಳಿಗೆ ಬೆಂಕಿ ಹಚ್ಚುತ್ತಿದ್ದಾರೆಂದು ಹೇಳಿದರು. ಅದು ಸರಿಯಾದುದಲ್ಲ. ಅದನ್ನು ಅವರು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್.—ನಾನು ಆಗ ಜೈಲಿನಲ್ಲಿದ್ದೆ. ಹೋಗಡೆ ಬಂದಾಗಲೂ ನನ್ನನ್ನು ಭಾಷಣ ಮಾಡುವುದಕ್ಕೂ ಬಿಡಲಿಲ್ಲ. ನಾನು ಹಾಗೆ ಇಲ್ಲದಿದ್ದಾಗ ಏನಾದರೂ ಅಂಥ ಅಚಾತುರ್ಯ ನಡೆದಿದ್ದರೆ, ನಾನು ಅದಕ್ಕೆ ಕ್ಷಮಾಪಣೆ ಕೇಳುತ್ತೇನೆ. ಕೆಲವರು ಕನ್ನಡಿಗರಿಗೆ ಕೆಟ್ಟ ಹೆಸರು ತರುವುದಕ್ಕೋಸ್ಕರ ಈ ರೀತಿ ಗುಡಿಸಲುಗಳನ್ನು ಸುಡುತ್ತಿದ್ದಾರೆ. ನಾನೂ ಹರಿಜನರು ಮುಂದೆ ಬರಬೇಕು, ಅವರ ಅಭಿವೃದ್ಧಿಯಾಗಬೇಕೆಂದು ಹೇಳುವುದರಲ್ಲಿ, ಎಲ್ಲರಂತೆ ಆಸಕ್ತಿವುಳ್ಳವನು. ನಾನು ಅವರ ಬಗ್ಗೆ ಯಾವುವೇ ವಿಧವಾದಂತಹ ಚಳುವಳಿ ಮಾಡಬೇಕೆನ್ನುವ ಉದ್ದೇಶದಿಂದ ಇಲ್ಲ ಅದನ್ನು ಮಾನ್ಯ ರಂಗನಾಥ್‌ರವರಾಗಲೀ, ಪ್ರಭಾಕರ್‌ರವರಾಗಲೀ, ತಪ್ಪಾಗಿ ತಿಳಿದುಕೊಳ್ಳಬಾರದು. ಈ ಸಂದರ್ಭದಲ್ಲಿ ಕನ್ನಡಿಗರಿಗೆ ಅವಮಾನವನ್ನು ಮಾಡತಕ್ಕ ರೀತಿಯಲ್ಲಿ ಡೆಕ್ಕನ್ ಹೆರಾಲ್ಡಿನ ಜನಾರ್ಧನರು, ಹಿಂದೂಸ್ಥಾನ್ ಟೈಮ್ಸ್‌ನಲ್ಲಿ ಬರೆದಿರತಕ್ಕದ್ದು ತೀರಾ ಖಂಡನೀಯ ಮತ್ತು ವಿಷಾದಕರವಾದ ವಿಚಾರ. ಅದನ್ನು ನಾನು ತೀವ್ರ ಕಳವಳದಿಂದ ಹೇಳುತ್ತಿದ್ದೇನೆ. ಅವರ ಬಗ್ಗೆ ಕನ್ನಡಿಗರು ತೀವ್ರ ಪ್ರತಿಭಟನೆ ಮಾಡಬೇಕಾಗಿದೆ ಎಂದು ವ್ಯಸನದಿಂದ ಹೇಳುತ್ತೇನೆ. ಆದ್ದರಿಂದ ಈ ಮಹಾಜನ್ ವರದಿಯನ್ನು ಕಾರ್ಯಗತ ಮಾಡುವುದಕ್ಕೆ ಮೈಸೂರು ರಾಜ್ಯದ ಎಲ್ಲರೂ ಹೋರಾಡಬೇಕು ಮತ್ತು ರಾಜ್ಯಸರ್ಕಾರದವರು ಇದರ ಬಗ್ಗೆ ಯಾವ ವಿಧದಲ್ಲೂ ಹೆಜ್ಜೆಯನ್ನು ಹಿಂದೆ ತೆಗೆಯದೆ, ಮುಂದುವರಿದು ಬಗೆಹರಿಸಬೇಕೆಂದು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಪ್ರಭಾಕರ್.—ಮಾನ್ಯ ನಾಗಪ್ಪನವರು ಮಾತನಾಡುತ್ತಾ, ಡೆಲ್ಲಿಗೆ ಹೋಗಿ ಬಂದಂತಹ ರಾಚಯ್ಯನವರು ಡೆಲ್ಲಿಯಲ್ಲಿರತಕ್ಕಂತಹ ಎಲ್ಲಾ ರಾಜಕೀಯ ಪಕ್ಷಗಳ ಎಂ. ಪಿ. ಗಳು ಇದರ ಬಗ್ಗೆ ಒಮ್ಮತವಾದ ಅಭಿಪ್ರಾಯಕ್ಕೆ ಬಂದು ಪ್ರಧಾನಿಯವರಲ್ಲಿ ಮಾತನಾಡಿದ್ದಾರೆ, ಎಂದು ಹೇಳಿದರು ಮತ್ತು ಅದರಲ್ಲಿ ಒಂದು ಪಕ್ಷದ ಬೆಂಬಲ ಇದೆ, ಇನ್ನೊಂದು ಪಕ್ಷದ್ದು ಇಲ್ಲವೆಂಬ ಕಲ್ಪನೆಯನ್ನು ವ್ಯಕ್ತಪಡಿಸಿದರು. ಇದರಲ್ಲಿ ಆ ಕಲ್ಪನೆಯನ್ನು ತರಬಾರದು. ಹನುಮಂತಯ್ಯನವರು ಸಹಕರಿಸಿದರು, ಸಿದ್ಧವೀರಪ್ಪನವರು ವಿರುದ್ಧವಾದ ಪಾಯಿಂಟ್ ಕೊಟ್ಟರು ಎಂದು ಹೇಳಿದರು. ಸಿದ್ಧವೀರಪ್ಪನವರು ಕೊಟ್ಟ ರಿಸೊಲ್ಯೂಷನಿಗೂ, ಹನುಮಂತಯ್ಯನವರು ಹೇಳಿದ್ದಕ್ಕೂ ಸರಿಹೋಗುತ್ತದೆ ಮತ್ತು ಅದು ಸಮಂಜಸವಾದುದು ಎಂದು ಹೇಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಅಧ್ಯಕ್ಷರ ಮೊದಲನೆಯ ಆದೇಶದ ಪ್ರಕಾರ ಒಮ್ಮೆ ಆ ಕಡೆಯ ಸದಸ್ಯರನ್ನು ಮಾತನಾಡಲು ಕರೆಯುವುದು, ಒಮ್ಮೆ ಈ ಕಡೆಯ ಸದಸ್ಯರನ್ನು ಕರೆಯುವುದು ಎಂದು ಇತ್ತು. ತಾವು ಈಗ ಆ ರೀತಿ ಮಾಡುತ್ತಿಲ್ಲ.

ಉಪಾಧ್ಯಕ್ಷರು.—ಅದು ಪಾಯಿಂಟ್ ಆಫ್ ಆರ್ಡರ್ ಆಗುವುದಿಲ್ಲ.

† ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಮಾನ್ಯ ಅಧ್ಯಕ್ಷರೇ, ಈಗ ಹೊಸದಾಗಿ ಕೇಂದ್ರ ಸರ್ಕಾರದವರು ಕನ್ನಡ ನಾಡಿನ ಮೇಲೆ ಹೇರಲು ಹೊರಟಿರತಕ್ಕಂತಹ ತೀರ್ಮಾನದ ಬಗ್ಗೆ ಇಲ್ಲಿ ವಿಪುಲವಾದ ಚರ್ಚೆ ನಡೆದಿದೆ. ಅವರ ಜಸ್ಟಿಫಿಕೇಶನ್ ಬಗ್ಗೆ ನಾನು ಏನೂ ಮಾತನಾಡುವುದಿಲ್ಲ.

(ಶ್ರೀ ಬಿ. ಪಿ. ಗಂಗಾಧರ್)

ಈ ಸದನದಲ್ಲಿ ನಾವು ಮತ್ತೆ ಮತ್ತೆ ಬಹಳ ಸಾರಿ ಇದರ ಬಗ್ಗೆ ಚರ್ಚೆ ಮಾಡಿದ್ದೇವೆ. ಅದರಲ್ಲಿ ಮಹಾರಾಷ್ಟ್ರದವರಿಗೆ ಯಾವ ಕೇಸೂ ಇಲ್ಲ ಮತ್ತು ವಿವಾದಕ್ಕೆ ಆಸ್ಪದವೂ ಇಲ್ಲ. ಆ ವಿಚಾರವಾಗಿ ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ.

It is a proved fact that all these places which have now been claimed by Maharashtra are all Kannada areas. Therefore, there is no question of dispute. If at all there is any dispute, the question of agitation would arise. ಈಗ ಪ್ರಶ್ನೆ ಇತ್ಯರ್ಥವಾಗಿರುವುದರಿಂದ ಮತ್ತೆ ಅದನ್ನು ಜಸಿ ಫೈತಿ ಮಾಡಬೇಕಾದ ಅವಶ್ಯಕತೆ ಇಲ್ಲ. ಆದರೆ ಈ ಸನ್ನಿವೇಶದಲ್ಲಿ ನಾವು ಎಷ್ಟೇ ಮುಚ್ಚುಮರೆ ಮಾಡಿಕೊಂಡು ಹೇಳಿದರೂ ಕೂಡ ಕೇಂದ್ರ ಸರ್ಕಾರದವರಿಗೆ ನಮ್ಮ ಮೇಲೆ ಒಳ್ಳೆಯ ಅಭಿಪ್ರಾಯವಿಲ್ಲ. ಮಾರಿಯ ಕಣ್ಣು ಹೋತನ ಮೇಲೆ ಅಂದಹಾಗೆ, ಅವರ ಕಣ್ಣು ನಮ್ಮ ರಾಜ್ಯದ ಮೇಲೆ ಇದೆ. ಇಲ್ಲಿ ರಾಜ್ಯಭಾರ ಮಾಡತಕ್ಕ ಪಕ್ಷ ಮತ್ತು ಕೇಂದ್ರದಲ್ಲಿ ರಾಜ್ಯಭಾರ ಮಾಡತಕ್ಕ ಪಕ್ಷ—ಇವರೊಳಗೆ ಒಂದು ಸಾಮರಸ್ಯವಿಲ್ಲ. ಎಷ್ಟೋ ಹಿಂದೆ ನಾವು ಒಂದು ನಿರ್ಣಯವನ್ನು ಪಾಸು ಮಾಡಿದ್ದೇವೆ. ಆದರೆ ಇದುವರೆಗೂ ಈ ಪ್ರಶ್ನೆ ಬಂದಿರಲಿಲ್ಲ. ಆದರೆ ಮೊನ್ನೆ ತಾನೇ ಎರಡು ಕಾಂಗ್ರೆಸ್ ಪಕ್ಷಗಳು ಅದಮೇಲೆ ಇದ್ದಕ್ಕಿದ್ದಹಾಗೆ ಬಂದುಬಿಟ್ಟಿತು. ಇದು ರಾಜಕೀಯಕ್ಕೋಸ್ಕರ, ಪೊಲಿಟಿಕಲ್ ಆಕ್ಟಿವಿಟೀಸ್‌ನ ಉದ್ದೇಶಕ್ಕೋಸ್ಕರ ಮಾಡಿದ್ದು ಎಂದು ಬೇರೆ ಹೇಳಬೇಕಾಗಿಲ್ಲ. ಆಳುವ ಪಕ್ಷದವರು ಅಧಿಕಾರ ಉಳಿಸಿಕೊಳ್ಳುವುದಕ್ಕೋಸ್ಕರ ಹೀಗೆ ಮಾಡಿದ್ದಾರೆಂದು ಹೇಳಬಹುದು. ಇವತ್ತು ಪ್ರಧಾನ ಮಂತ್ರಿಯವರು ಮಾಡಬಾರದ್ದನ್ನು ಮಾಡಿದ್ದಾರೆಂದು ಬೇಕಾದರೂ ಹೇಳಬಹುದು. ಅದರ ಬಗ್ಗೆ ಹೆಚ್ಚಿಗೆ ಹೇಳಬೇಕಾಗಿಲ್ಲ. ವೃತ್ತಪತ್ರಿಕೆಗಳಲ್ಲಿ ಬಂದಿರತಕ್ಕ ವರ್ತಮಾನದ ಪ್ರಕಾರ there is no sanctity for the Commission's Report. ಅದರಲ್ಲಿ ಪವಿತ್ರತೆ ಇಲ್ಲ, ಅದನ್ನು ಕಸದ ಬುಟ್ಟಿಗೆ ಹಾಕುವುದಕ್ಕೆ ತಯಾರಾಗಿದ್ದಾರೆ, ಅವರ ಮನಸ್ಸಿನಲ್ಲಿ ಏನಿದೆಯೆಂಬುದನ್ನು ನಾವು ನೋಡಬೇಕು. ಅವರ ಪೂರ್ಣಾಭಿಪ್ರಾಯವನ್ನು ತಿಳಿದುಕೊಳ್ಳಬೇಕು. ಆ ವರದಿಯನ್ನು ಪೂರ್ಣವಾಗಿ ಅವರು ತಿರಸ್ಕಾರ ಮಾಡಿದ್ದಾರೆ. ಅವರು ತಮ್ಮ ತೀರ್ಮಾನವನ್ನು ಕರ್ಣಾಟಕದ ಜನತೆಯಮೇಲೆ ಹೇರುವುದಕ್ಕೆ ತಯಾರಿದ್ದಾರೆಂದು ಪತ್ರಿಕೆಯವರು ಹೇಳಿದ್ದಾರೆ.

ಶ್ರೀ ಕೆ. ಪ್ರಭಾಕರ್.—ಯಾವ ಪೇಪರ್ ಇನ್‌ಫರ್‌ಮೇಷನ್ ಅದು ?

ಶ್ರೀ ಬಿ. ಪಿ. ಗಂಗಾಧರ್.—I cannot understand this running commentary. ಹಿಂದೆ ಎಸ್. ಆರ್. ಸಿ. ಯವರು ಇವನ್ನು ತೀರ್ಮಾನ ಮಾಡಿದಮೇಲೆ ನಮ್ಮ ನಾಯಕರು, ರಾಜ್ಯಭಾರ ಮಾಡುವ ಜನರು, ಈಗ ಸಿಂಡಿಕೇಟ್ ಮತ್ತು ಇಂಡಿಕೇಟ್‌ನಲ್ಲಿರುವವರು ತಮ್ಮ ಕರ್ತವ್ಯದಲ್ಲಿ ಲೋಪ ಮಾಡಿದ್ದಾರೆ, ತಮ್ಮ ಒಂದು ಕಾರ್ಯದಕ್ಷತೆಯನ್ನು ತೋರಿಸಲಿಲ್ಲ. ನಿಜವಾಗಿಯೂ ಕನ್ನಡ ದೇಶಕ್ಕೆ ಅನ್ಯಾಯವಾಗಿದ್ದರೂ, ನಮಗೆ ನ್ಯಾಯ ದೊರಕಿಸಿಕೊಡಲಿಲ್ಲ. ಹೇಗೋ ನಾನು ಮುಖ್ಯ ಮಂತ್ರಿಯಾಗಿಯೋ ಇರಬೇಕು Let the evil days pass on ಎಂದು ಹೇಳಿ ಒಂದು ನಿರ್ದಿಷ್ಟವಾದ ನಿಲುವನ್ನು ತಾಳಲಿಲ್ಲ. ಇದು ಬಹಳ ಅವಮಾನ. ಈಕಡೆ ಕಾಂಗ್ರೆಸ್, ಆಕಡೆ ಕಾಂಗ್ರೆಸ್—ಈಗ ಹೀಗೆ ಎರಡು ಸಮಗ್ರವಾದ ಕಾಂಗ್ರೆಸ್ ಏನಿದೆಯೋ ಅದು ಅವರ ಬೆನ್ನುಮೇಲೆ ಇರತಕ್ಕ ಹೊರೆ ಎಂದು ನಾನು ಹೇಳುತ್ತೇನೆ. ಈ ಕಮಿಷನ್ ಬೇಡವೆಂದು ಮೈಸೂರು ದೇಶದ ಜನರು, ಕನ್ನಡದೇಶದ ಜನರು ತಿರಸ್ಕಾರ ಮಾಡಿದಾಗ, ಮಹಾರಾಷ್ಟ್ರದ ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಶ್ರೀ ವಿ. ಪಿ. ನಾಯಕ್ ಅವರು 10-10-1966ನೇ ವೃತ್ತಪತ್ರಿಕೆಯಲ್ಲಿರುವಂತೆ ಈ ರೀತಿಯಾಗಿ ಹೇಳಿದ್ದಾರೆ.

> "The verdict of the Commission would be binding not only on both the States but on the Union Government as well..."

ಈ ಮಾತು ಬಹಳ ನಿರ್ದಿಷ್ಟವಾಗಿದೆ. ಇದರಲ್ಲಿ ಯಾವ ಒಂದು ವಿವಾದಕ್ಕೂ ಆಸ್ಪದವಿಲ್ಲ. ಕಮಿಷನ್ ನೇಮಕ ಮಾಡಿ ಅವರು ತೀರ್ಮಾನ ಕೊಟ್ಟಮೇಲೆ, ಅದರ ವರದಿಗೆ ನಮ್ಮ ಎರಡು ರಾಜ್ಯಗಳಿಗೂ ಬದ್ಧವಾಗಿರುತ್ತವೆ, ಅದರಂತೆ ನಾವು ನಡೆಯಬೇಕು. ಅಷ್ಟೇ ಅಲ್ಲ. ಕೇಂದ್ರ ಸರ್ಕಾರದವರೂ ಕೂಡ ಬದ್ಧರಾಗಿರಬೇಕೆಂದು ಹೇಳಿದ್ದಾರೆ. ಇದೇ ಅಭಿಪ್ರಾಯವನ್ನು ಕೇಂದ್ರ ಸರ್ಕಾರದಲ್ಲಿ

ಗೃಹಮಂತ್ರಿಗಳಾಗಿರತಕ್ಕ ಮಾನ್ಯ ಶ್ರೀ ಚವಾಣರೂ ಹೇಳಿದ್ದಾರೆ. ಆಗ ಗೃಹಮಂತ್ರಿಗಳಾಗಿದ್ದಂಥ ಮಾನ್ಯ ಶ್ರೀ ನಂದಾ ಅವರೂ ಸಹ ಆ ಆಯೋಗ ನೇಮಕವಾಗಿ ಅದು ವರದಿ ಕೊಟ್ಟಮೇಲೆ ಮೈಸೂರು ಮಹಾರಾಷ್ಟ್ರ ವಿವಾದ ಇರುವುದಿಲ್ಲವೆಂದು ಹೇಳಿದ್ದಾರೆ. "Problem has been solved completely" ಎಂದು ಅವರು ಹೇಳಿದ್ದಾರೆ. ಅಂದಮೇಲೆ ಈಗ ಆ ಪ್ರಾಬ್ಲಂ ಎಲ್ಲಿದೆ? ಆದ್ದರಿಂದ ಇಲ್ಲಿ ರಾಜ್ಯಭಾರ ಮಾಡತಕ್ಕ ಗುಂಪಿಗೂ ಕೇಂದ್ರದಲ್ಲಿ ರಾಜ್ಯಭಾರ ಮಾಡತಕ್ಕ ಗುಂಪಿಗೂ ತಿಕ್ಕಾಟ ಮಾಡಿ, ಕನ್ನಡ ಜನತೆಗೆ ಶಿಕ್ಷೆ ಮಾಡಿಸಬೇಕೆಂದು ಕೇಂದ್ರಸರ್ಕಾರ ಮಾಡುತ್ತಿದೆಯೆಂದು ಹೇಳಿದರೆ ಅದೇನೂ ಹೆಚ್ಚಲ್ಲ. ನನಗೆ ಈಗ ರಾಜ್ಯಭಾರ ಮಾಡತಕ್ಕ ಗುಂಪಿನಲ್ಲಿ ಬಹಳ ಅಭಿಮಾನವಿದೆ, ಕನಿಕರವಿದೆ. ಇವತ್ತು ನನಗನ್ನಿಸುತ್ತದೆ, ಅವರೇ ಈ ತೊಂದರೆಯನ್ನು ತಂದಿಟ್ಟವರು. ಆದರೂ ಕೂಡ ಅವರಿಗೆ ಪೂರ್ಣ ಸಹಕಾರವನ್ನು ಕೊಡುತ್ತೇನೆ. ನಾವು ಅವರ ಕೂಡ ನಿಂತು ಹೋರಾಟ ಮಾಡುತ್ತೇವೆ. ಮಹಾರಾಷ್ಟ್ರದವರಿಗೆ ಒಂದು ಇಂಚು ನೆಲವನ್ನೂ ಕೂಡ ನಾವು ಬಿಡುವುದಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುವ ಧೈರ್ಯ ಬಂದರೂ ಸಹ, ಆ ಮಾತಿನಿಂದ ಯಾವಾಗ ಹಿಂದಕ್ಕೆ ಹೋಗುತ್ತಾರೋ ಗೊತ್ತಿಲ್ಲ. ತಮ್ಮ ಪಾರ್ಟಿ ಅಭಿವೃದ್ಧಿಗೋಸ್ಕರ, ಒಗ್ಗಟ್ಟಿಗೋಸ್ಕರ ಯಾವಾಗ ಇಂಡಿಕೇಟ್ ಮತ್ತು ಸಿಂಡಿಕೇಟುಗಳು ಎರಡೂ ಒಂದಾಗುತ್ತವೋ ಗೊತ್ತಾಗುವುದಿಲ್ಲ. ಆದ್ದರಿಂದ ನಾವು ಈಗಲೇ ಅವರನ್ನು ನಂಬುವುದಕ್ಕಾಗುವುದಿಲ್ಲ. ಒಂದುವೇಳೆ ಈಕಡೆ ಜನರು ಏನೂ ಮಾಡದಿದ್ದರೂ ಆಕಡೆ ಇರುವ ಜನರು ದಿಟ್ಟ ಹೆಜ್ಜೆಯಿಂದ ಹೋರಾಡುವುದಕ್ಕೆ ತಯಾರಾಗಿದ್ದಾರೆ. ಎಲ್ಲಾ ಸದಸ್ಯರೂ ಕೂಡ ಡೆಲ್ಲಿ ಪಾರ್ಲಿಮೆಂಟಿಗೆ ಬೇಕಾದರೆ ಹೋಗೋಣ. ಇದರ ಬಗ್ಗೆ ಅಲ್ಲಿನ ಜನರ ಮನ ಒಲಿಸಲು ಮತ್ತು ಅಲ್ಲಿ ಸತ್ಯಾಗ್ರಹ ಹೂಡಲು ನಾವು ತಯಾರಾಗಿದ್ದೇವೆ. ಕನ್ನಡಿಗರವೂ ಒಂದು ತಪ್ಪು ಇದೆ. ನಾವು ಯಾವಾಗಲೂ ಡಿಫೆನ್ಸಿವ್. ಯಾರಾದರೂ ಹೊಡೆಯಲಿಕ್ಕೆ ಬಂದರೆ ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ. ನಮಗೆ ಬರತಕ್ಕ ಕನ್ನಡ ಮಾತನಾಡತಕ್ಕ ಪ್ರದೇಶಗಳ ಬಗ್ಗೆ ನೀವು ಇನ್ನೂ ಏನನ್ನೂ ಮಾಡಲಿಲ್ಲ. ಕಾಸರಗೋಡಿನಲ್ಲಿ ಕನ್ನಡಿಗರು ಸಾಯುತ್ತಿದ್ದಾರೆ. ಅದರ ಬಗ್ಗೆ ಏನೂ ಮಾಡಲಿಲ್ಲ. ನಾವು ಅದರ ಬಗ್ಗೆ ಅಕಸ್ಮಾತ್ ಕೇಳಿದರೆ ನಮಗೆ ಜಾರು ಮಾತು ಹೇಳುತ್ತಾರೆ. ಜೋನಲ್ ಕೌನ್ಸಿಲ್ ಬರುತ್ತದೆ, ಆಗ ವಿಚಾರಮಾಡುತ್ತೇವೆ ಎಂಬುದಾಗಿ ಹೇಳುತ್ತಾರೆ. ಅಂದಮೇಲೆ ಇದನ್ನು ಇನ್ನು ಎಷ್ಟು ವರ್ಷದಲ್ಲಿ ಮಾಡುತ್ತಾರೋ? ಬಹುಶಃ ಇದು ಇವರ ಕಾಲದಲ್ಲಿ ಆಗುವುದಿಲ್ಲ, ಇವರ ಮಕ್ಕಳು, ಮೊಮ್ಮಕ್ಕಳು ಮುಂದೆ ಏನಾದರೂ ಮಂತ್ರಿಗಳಾದರೆ ಆಗ ಆಗುತ್ತದೋ ಏನೋ ಗೊತ್ತಾಗುವುದಿಲ್ಲ. ಈಗಾಗಲೇ ತಾಳವಾಡಿ ವಿಷಯವಾಗಿ ಕೆಲವು ಮಾನ್ಯ ಸದಸ್ಯರು ಹೇಳಿದರು. ಅದರ ಬಗ್ಗೆಯೂ ಇದುವರೆಗೆ ಏನೂ ಮಾಡಲಿಲ್ಲ. ಕೊಯಮತ್ತೂರು ಜಿಲ್ಲೆಯ ಹೊಸೂರು, ನೀಲಗಿರಿ, ಮಡಕಸಿರಾ, ಆಲೂರು, ರಾಯದುರ್ಗ, ಅದವಾನಿ ಇವುಗಳ ಬಗ್ಗೆ ಏನೂ ಮಾಡುತ್ತಾ ಇಲ್ಲ. ಇಂತಹ ಸಂದರ್ಭದಲ್ಲಿ ಅಲ್ಲಿನ ಕನ್ನಡಿಗರೆಲ್ಲರೂ ಒಗ್ಗಟ್ಟಾಗಿ ನಿಲ್ಲಬೇಕು. ಆದ್ದರಿಂದ ನಿಮ್ಮಲ್ಲಿ ನಮಗೆ ನಂಬಿಕೆ ಇಲ. ಇದಕ್ಕೆ ವಿರೋಧವನ್ನು ಯಾರು ಮಾಡಿದರೂ ಚಿಂತೆ ಇಲ್ಲ. ನಾವು ಮುಂದೆ ಮುಂದೆ ಹೋಗುತ್ತೇವೆ. ನಮಗೆ ಅಧಿಕಾರದ ಆಸೆ ಇಲ್ಲ. ಛಿದ್ರ ಛಿದ್ರವಾಗಿರತಕ್ಕ ಕನ್ನಡ ಜನರು ಬಹಳ ಕಷ್ಟದಲ್ಲಿದ್ದಾರೆ. ಎಲ್ಲೋ ಕೆಲವು ಜನರು ಮಾತ್ರ ಮುಂದೆ ಮುಂದೆ ಬರುತ್ತಿದ್ದಾರೆ. ಆದ್ದರಿಂದ ನಾವೆಲ್ಲರೂ ಒಗ್ಗಟ್ಟಾಗಿ ನಿಂತು ಕೆಲಸಮಾಡಬೇಕಾಗಿದೆ. ನಾನು ಹಿಂದೆ ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಪ್ರಶ್ನೆಯನ್ನು ಹಾಕಿದೆ. ಈಗ ಕೇಂದ್ರಸರ್ಕಾರ ನಿಮಗೆ ಒಂದು ಆದೇಶವನ್ನು ಕಳುಹಿಸಿದ್ದಾರೋ ಆ ಆದೇಶದಂತೆ ಅವರು ಅಲ್ಲಿ ತೀರ್ಮಾನ ತೆಗೆದುಕೊಂಡು ಅದನ್ನು ಪಾರ್ಲಿಮೆಂಟಿನಲ್ಲಿ ಪಾಸ್ ಮಾಡಿದರೆಂದು ಇಟ್ಟುಕೊಳ್ಳೋಣ. ಆಗ ನಿಮ್ಮ ಕರ್ತವ್ಯವೇನು ? ಕೇಂದ್ರಸರ್ಕಾರವನ್ನು ಒಪ್ಪಿಸುವುದಕ್ಕಾಗಲೀ, ಅಥವಾ ಕೇಂದ್ರಸರ್ಕಾರದಲ್ಲಿ ಪ್ರಧಾನಮಂತ್ರಿಗಳನ್ನು ಒಪ್ಪಿಸುವುದಕ್ಕಾಗಲೀ ಇವರಿಗೆ ಧೈರ್ಯವಿಲ್ಲ. ಅವರು ಇದರ ಬಗ್ಗೆ ಏನು ತೀರ್ಮಾನ ಮಾಡುತ್ತಾರೆಂದು ಕೇಳಿದ್ದಕ್ಕೆ ಈ ಪ್ರಶ್ನೆ ಇನ್ನೂ ತೀರ್ಮಾನವಾಗಲಿಲ್ಲ. ಪಾರ್ಲಿಮೆಂಟ್ ಮುಂದೆ ಇನ್ನೂ ಹೋಗಬೇಕು, ಆಮೇಲೆ ನೋಡೋಣವೆಂದು ಹೇಳಿದರು. ಅವರು ಆಮೇಲೆ ನೋಡುವುದು ಏನಿದೆ ? ಯಾವಾಗ ಪ್ರಧಾನ ಮಂತ್ರಿಗಳು "there is no sanctity for this Commi sion's report" ಎಂದು ಹೇಳಿದರೋ ಆವತ್ತೇ ಅದರ ಮಾತು ತೀರ್ಮಾನವಾಯಿತು. ಆದ್ದರಿಂದ ಅದು ಯಾವಾಗಲೂ ಡಿಫೆನ್ಸಿವ್ ಆದ ವಿಷಯವೇ ಹೊರತು ಅಫೆನ್ಸಿವ್ ಆಗುವುದಿಲ್ಲ. ಬಣವೆ ಹತ್ತಿಕೊಂಡು ಉರಿಯುವಾಗ ಬಾವಿ ತೆಗೆದರಂತೆ ಎನ್ನುವ ಹಾಗೆ ಅಂತಹ ಸನ್ನಿವೇಶಗಳನ್ನು ಕ್ರಿಯೇಟ್ ಮಾಡಬೇಡಿ. ಈಗಾಗಲೇ ಬ್ಲೂಪ್ರಿಂಟ್ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಒಂದು ಮಸೂದೆಯನ್ನು ಪಾರ್ಲಿಮೆಂಟಿಗೆ ತೆಗೆದುಕೊಂಡು ಹೋಗಿ, ಅವರಿಗೆ ನ್ಯಾರೊ ಮೆಜಾರಿಟಿ ಸಿಕ್ಕಿದರೆ ಸಾಕು, ಕೂಡಲೇ ಅದನ್ನು ಇಂಪ್ಲಿಮೆಂಟ್ ಮಾಡುತ್ತಾರೆ.

(ಶ್ರೀ ಬಿ. ಪಿ. ಗಂಗಾಧರ್)

5-30 P.M.

ಅದನ್ನು ಇಂಪ್ಲಿಮೆಂಟ್ ಮಾಡುವಾಗ ಅಕಸ್ಮಾತ್ ಗಲಾಟೆ ಆಗುವಂಥಾ ಸನ್ನಿವೇಶ ಬಂದು ಅದನ್ನು ಸಾಲ್ವ್ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಮಿಲಿಟರಿ ಅಥವಾ ರಿಜರ್ವ್ ಪೋಲೀಸಿನವರನ್ನು ಕರೆದುಕೊಂಡು ಬಂದು ಅದನ್ನು ಸಾಲ್ವ್ ಮಾಡಬೇಕಾದ ಸನ್ನಿವೇಶ ಬರಬಹುದು. ಆಗ ನೀವು ಏನು ಮಾಡುತ್ತೀರಿ ? 30 ಜನ ಮಂತ್ರಿಗಳು ಭಾಷಣಗಳನ್ನು ಬಿಗಿದು, ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಸುಖವಾಗಿ ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸಮಾಡುತ್ತಾ ಸುಖವಾಗಿ ಕಾರಿನಲ್ಲಿ ಓಡಾಡುತ್ತೀರಿ. ಈ ಕೆಲಸ ಏನಿದೆ ಇದು ಕ್ಲಿಷ್ಟವಾದ ಕೆಲಸ. ಅದಕ್ಕೋಸ್ಕರ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. Let them have concrete proposals and let them take us into confidence. We are second to none in this regard. We are joining with you. ಆಗ ಏನು ಮಾಡಬೇಕು ಎಂಬುದು ನಿಮಗೆ ಗೊತ್ತಿಲ್ಲ. ನೀವು ಡೋಲಾಯಮಾನವಾಗಿದ್ದೀರಿ. ಈಗ ಈ ಸಭೆಯಲ್ಲಿರತಕ್ಕ ಕ್ಯಾಬಿನೆಟ್‌ನ ಹಿರಿಯ ಮಂತ್ರಿಗಳಲ್ಲಿ ಒಬ್ಬರಾದ ಶ್ರೀಮಾನ್ ರಾಚಯ್ಯ ನವರಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ ನಿಮ್ಮ ಬತ್ತಳಿಕೆಯಲ್ಲಿ ಯಾವ ಯಾವ ಬಾಣಗಳು ಇವೆ. ಅವುಗಳನ್ನು ತೋರಿಸಿ ನಿಮ್ಮಲ್ಲಿ ಏನಾದರೂ 3—4 ಅಂಶಗಳು ಇದ್ದರೆ ಅದನ್ನು ಹೇಳಿದರೆ ನಮಗೆ ಸಮಾಧಾನವಾಗುತ್ತದೆ. ನಾವು ನೋಡುವುದರಲ್ಲಿ ನಿಮ್ಮ ಬತ್ತಳಿಕೆ ಶೂನ್ಯವಾಗಿದೆ ಎಂದು ನಮಗೆ ಅನಿಸುತ್ತದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ ನಾವೆಲ್ಲರೂ ದೆಹಲಿಗೆ ಖುದ್ದು ಹೋಗೋಣ ಎನ್ನುವ ಆಶೆ ನನಗೆ ಇದೆ. ಈ ಒಂದು ವಿಷಯದಲ್ಲಿ ನಾವು ನಮ್ಮ ಪೂರ್ಣ ಸಹಕಾರ ಮತ್ತು ಸಹಾನುಭೂತಿಯನ್ನು ತೋರಿಸುತ್ತೇವೆ. ಕನ್ನಡ ನಾಡಿನ ಒಂದು ಇಂಚು ಭೂಮಿಯನ್ನು ಬೇರೆಯವರಿಗೆ ಕೊಡುವುದಕ್ಕೆ ಅವಕಾಶವನ್ನು ಕೊಡಕೂಡದು. The situation is grave and tense. Responsibility is there on you. Please take immediate action. ಈ ದೃಷ್ಟಿಯಿಂದ ಈಗಲಾದರೂ ನೀವು ಯೋಚನೆ ಮಾಡಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ತೆಗೆದುಕೊಂಡರೆ ಇದರಿಂದ ಮುಂದೆ ಬರತಕ್ಕಂಥ ತೊಂದರೆಯನ್ನು ಅವಾಯ್ಡ್ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಲೀಲಾವತಿ ರೈ (ಬಂಟ್ವಾಳ್).—ಮಾನ್ಯ ಅಧ್ಯಕ್ಷರೇ, ಈ ಮನೆಯಲ್ಲಿ ಶ್ರೀಮಾನ್ ಗೋಪಾಲಗೌಡರು ಗಡಿವಿವಾದದ ಬಗ್ಗೆ ಇಟ್ಟಂತಹ ನಿರ್ಣಯ ಏನಿದೆ ಅವರ ಬಗ್ಗೆ ಮಾತನಾಡುತ್ತಾ ನಮ್ಮ ಹೆಣ್ಣು ಮಕ್ಕಳ ಕರ್ತವ್ಯವನ್ನು ಇಲ್ಲಿ ಸ್ವಲ್ಪ ಹೇಳುವುದಕ್ಕೆ ನಾನು ನಿಂತಿದ್ದೇನೆ. ಈ ಗಡಿ ವಿವಾದದ ಬಗ್ಗೆ ಶ್ರೀಮಾನ್ ಸಿದ್ಧವೀರಪ್ಪನವರೂ ಒಂದು ನಿರ್ಣಯವನ್ನು ಈ ಸಭೆಯ ಮುಂದಿಟ್ಟಿದ್ದಾರೆ. ನನಗೆ ಒಂದು ಬೇಸರ ಏನೆಂದರೆ ಮಾನ್ಯ ಸಿದ್ಧವೀರಪ್ಪನವರು ಬಹಳ ಹಳಬರು ಮತ್ತು ಅನುಭವಿಗಳು. ಅವರು ಎಸ್. ಆರ್. ಸಿ. ಆಕ್ಟ್ ಪ್ರಕಾರವೇ ಈ ಗಡಿಗಳು ಇರತಕ್ಕದ್ದು ಎಂದು ಸೂಚನೆ ಮಾಡಿದರು. ಆ ರೀತಿ ಮಾಡುವುದಾದರೆ ಕೇರಳ ಗಡಿ ಪ್ರದೇಶದಲ್ಲಿರುವಂಥಾ ಕನ್ನಡ ಪ್ರದೇಶವಾದ ಕಾಸರಗೋಡು ಬಿಟ್ಟು ಹೋಗುತ್ತದೆ. ಅದನ್ನು ಮಾನ್ಯ ಸಿದ್ಧವೀರಪ್ಪನವರು ಯೋಚನೆ ಮಾಡಲಿಲ್ಲವೆಂದು ಕಾಣುತ್ತದೆ. ಎಸ್. ಆರ್. ಸಿ ಆಕ್ಟ್ ಪ್ರಕಾರವೇ ಗಡಿ ನಿರ್ಣಯವನ್ನು ತಗೆದುಕೊಂಡರೆ ಕೇರಳದ ಗಡಿ ಪ್ರದೇಶಗಳು ಇದ್ದಲ್ಲಿಯೇ ಉಳಿಯುತ್ತವೆ. ಬೆಳಗಾಮಿನ ಹಾಗೆ ಕಾಸರಗೋಡು ಕೂಡ ಮುಖ್ಯವಾದದ್ದು. ಕಾಸರಗೋಡಿನಲ್ಲಿ ಕನ್ನಡ ಹಾಗೂ ತುಳು ಮಾತನಾಡುವ ಜನ ತುಂಬಾ ಇದ್ದಾರೆ. ಅದ್ದರಿಂದ ಅವರಿಗೆ ಅನ್ಯಾಯವಾಗುತ್ತದೆ. ಹಿಂದೆ ಕೂಡ ಎಸ್. ಆರ್. ಸಿ. ರಿಪೋರ್ಟ್ ಬಂದಾಗ ಕಾಸರಗೋಡನ್ನು ಕೇರಳದವರಿಗೆ ಬಿಟ್ಟು ಕೊಟ್ಟರು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾಸರಗೋಡಿನ ಪ್ರಶ್ನೆಯನ್ನು ಎಸ್. ಆರ್. ಸಿ. ಆಕ್ಟ್ ಪ್ರಕಾರ ಸಾಲ್ವ್ ಮಾಡುವುದಕ್ಕೆ ಅವಕಾಶ ಇದೆ. ಸಣ್ಣ ಪುಟ್ಟ ಬದಲಾವಣೆಗಳನ್ನು ಜೋನಲ್ ಕೌನ್ಸಿಲ್ ಮುಂದೆ ತೆಗೆದುಕೊಂಡು ಬಂದು ಅವುಗಳನ್ನು ಬಗೆಹರಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಅದ್ದರಿಂದ ಎಸ್. ಆರ್. ಸಿ ಆಕ್ಟ್ ಪ್ರಕಾರ ನಡೆದುಕೊಳ್ಳುವುದಾದರೆ ಕಾಸರಗೋಡು ಕೈಬಿಟ್ಟು ಹೋಗುತ್ತದೆ, ತಾಳವಾಡಿ ಫಿರ್ಕಾ ಕೈಬಿಟ್ಟು ಹೋಗುತ್ತದೆ ಎನ್ನತಕ್ಕಂಥಾದ್ದೇನೂ ಇಲ್ಲ. ಅವನ್ನು ಸೇರಿಸಿಕೊಳ್ಳುವುದಕ್ಕೆ ಅವಕಾಶ ಇದೆ, ಆ ವ್ಯವಸ್ಥೆಯನ್ನು ಮಾಡಬಹುದು.

ಶ್ರೀಮತಿ ಕೆ. ಲೀಲಾವತಿ ರೈ.—ನಮ್ಮ ಹಿರಿಯರಾದ ಶ್ರೀಮಾನ್ ಚನ್ನಬಸಪ್ಪನವರು ಒಂದು ಕ್ಲಾರಿಫಿಕೇಷನ್ ಕೊಟ್ಟಿದ್ದಾರೆ. ಅದು ಹಾಗಿರಲಿ. ಈಗ ಇರುವಂಥಾ ಸಮಸ್ಯೆ ಏನು ಎಂದರೆ ಬೆಳಗಾವಿನ ಜನತೆ ನಮಗೆ ಹೇಗೆ ಮುಖ್ಯವೋ ಹಾಗೆಯೇ ಕಾಸರಗೋಡಿನ ಜನತೆಯೂ ಮುಖ್ಯ, ಅವರು ನಮ್ಮ ಕನ್ನಡ ಜನಗಳೇ. ಆದ್ದರಿಂದ ನಾವು ಈಗ ಬೆಳಗಾವ್ ಪ್ರಶ್ನೆಯನ್ನು ಬಗೆ ಹರಿಸುವುದಕ್ಕೆ ಯಾವರೀತಿ ಪ್ರಯತ್ನ ಮಾಡುತ್ತಿದ್ದೇವೆಯೋ ಅದೇರೀತಿ ಕಾಸರಗೋಡಿನ ಪ್ರಶ್ನೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದರೆ ಅದರಿಂದ ಕನ್ನಡಿಗರ ಹಿತ ಸಾಧನೆಯಾಗುತ್ತದೆ' ಅಲ್ಲಿನ ಜನತೆಗೆ ಸಂತೋಷವಾಗುತ್ತದೆ. ಶ್ರೀಮಾನ್ ಗಂಗಾಧರ್ ಅವರು ಹೇಳಿದಹಾಗೆ ಮಹಾರಾಷ್ಟ್ರದವರು ಬೊಬ್ಬೆ ಹಾಕಿ ಗಡೀ ಪ್ರದೇಶದಲ್ಲಿ ನಮ್ಮ ಕನ್ನಡಿಗರ ಕೆಲವು ಹಳ್ಳಿಗಳನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ. ನಮ್ಮ ಕಾಸರಗೋಡಿನ ಜನತೆಯೂ ಅದೇರೀತಿ ಬೊಬ್ಬೆಯನ್ನು ಹಾಕದೆ ತಾವು ಮಾಡುವಂತಹ ಪ್ರಯತ್ನ ಮಾಡಿದ್ದಾರೆ. ಕಾಸರಗೋಡಿನ್ನ ಎಂ.ಎಲ್.ಎ.ಗಳು ಇವೊತ್ತು ನಮ್ಮ ಅಸೆಂಬ್ಲಿಯಲ್ಲಿ ಬಂದು ಕುಳಿತುಕೊಂಡು ಇಲ್ಲಿನ ನಡವಳಿಕೆಗಳನ್ನು ಕೇಳುತ್ತಿದ್ದಾರೆ. ಕನ್ನಡವನ್ನು ಮಾತನಾಡುವವರೆಲ್ಲರೂ ಕನ್ನಡ ನಾಡಿನಲ್ಲಿರಬೇಕು. ಕನ್ನಡಿಗರು ಯಾವಾಗಲೂ ಮೃದುಸ್ವಭಾವವುಳ್ಳವರು. ಯಾವಾಗಲೂ ಬೇರೆಯವರಿಗೆ ಸಹಾಯ ಮಾಡುವವರು. ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರೊಬ್ಬರು ಈ ಸಭೆಯಲ್ಲಿ ಮಾತನಾಡುತ್ತಾ ಹೇಳಿದರು, ನಾವು ಮೊದಲು ಮಹಾರಾಷ್ಟ್ರೀಯರು, ಆಮೇಲೆ ಭಾರತೀಯರು ಎಂದು. ಆದರೆ ಕನ್ನಡಿಗರು ಹಾಗಲ್ಲ, ಮೊದಲು ಭಾರತೀಯರು ಆ ಮೇಲೆ ಕನ್ನಡಿಗರು ಎಂದು ಹೇಳುತ್ತೇವೆ. ಏಕೆಂದರೆ ಗಡೀ ಪ್ರದೇಶದಲ್ಲಿರತಕ್ಕ ಮಹಾರಾಷ್ಟ್ರದವರಿಗೆ ನಮ್ಮವರು ಎಷ್ಟೋ ಉಪಕಾರವನ್ನು ಮಾಡುತ್ತಿದ್ದಾರೆ. ಟಿಬೆಟ್‌ನಿಂದ ಬಂದಂತಹ ಜನಗಳಿಗೆ ಮೈಸೂರು ಸರ್ಕಾರದವರು ಉಪಕಾರ ಮಾಡುತ್ತಿದ್ದಾರೆ. ಆದ್ದರಿಂದ ಇಂಡಿಯಾದೇಶದ ಯಾವ ಭಾಗದವರಾಯಾರೇ ಬರಲಿ ಅವರಿಗೆ ನಾವು ಜಾಗ ಕೊಡುತ್ತೇವೆ, ಸಹಕಾರ ಕೊಡುತ್ತೇವೆ. ಅವರಿಗೆ ಎಲ್ಲಾ ಸಹಾಯವನ್ನೂ ಮಾಡುತ್ತೇವೆ. ಮೈಸೂರು ದೇಶದವರು ಒಳ್ಳೆಯ ಜನಗಳು ಉಪಕಾರ ಮಾಡುತ್ತಾರೆ ಎನ್ನುವುದು ಇಡೀ ಪ್ರಪಂಚಕ್ಕೇ ಗೊತ್ತಿದೆ. ಇಂಥಾ ಮೈಸೂರು ರಾಜ್ಯದ ಜನತೆಗೆ ಅನ್ಯಾಯವಾಗುವಂತಹ, ಒಂದು ಕಷ್ಟವನ್ನು ಕೊಡುವಂತಹ ಒಂದು ನಿರ್ಣಯವನ್ನು ಕೇಂದ್ರ ಸರ್ಕಾರದವರು ತರುತ್ತಾರೆ, ತರುವ ಅಭಿಪ್ರಾಯ ಇದೆ ಎಂದು ಪತ್ರಿಕೆಯಲ್ಲಿ ನಾವು ನೋಡುತ್ತಿದ್ದೇವೆ. ಆದರೆ ಅವರು ಅಂಥಾದ್ದು ಮಾಡುವುದಿಲ್ಲ ಎಂದು ನಾವು ನಂಬೋಣ. ಮಹಾರಾಷ್ಟ್ರದಲ್ಲಿ ಮುಖ್ಯಮಂತ್ರಿಗಳಾಗಿರುವ ಶ್ರೀ ವಿ. ಪಿ. ನಾಯಕ್ ಅವರು ಈ ರೀತಿ ಹೇಳಿದ್ದಾರೆ :

> "He further said, "The Working Committee's decision should be welcomed by all as it marked a final and decisive step towards settling the disputes agitating the minds of the people of Maharashtra, Mysore and Kerala for a decade."
>
> He is further reported to have said :
>
> "Shri Yeshvantrao Chavan, Union Home Minister while expressing opinion about the Congress Working Committee's decision had also said that both the parties shall have to accept the recommendations, Recalling this, the Chief Minister of Maharashtra said that there was nothing new about this."

ಕನ್ನಡ ನಾಡಿನವರಾದ ನಾವು ಮಹಾಜನ್ ಕಮಿಷನ್ನಿನವರ ವರದಿಯನ್ನು ಒಪ್ಪಿಕೊಳ್ಳಬೇಕೆಂದೂ, ಅದನ್ನು ಒಪ್ಪಿಕೊಂಡು ಕಾರ್ಯಗತ ಮಾಡದಿದ್ದರೆ ಕನ್ನಡಿಗರಿಗೆ ಅನ್ಯಾಯವಾಗುತ್ತದೆ ಎಂದೂ ಹೇಳಿದ್ದೇವೆ. ಈ ದೃಷ್ಟಿಯಿಂದ ಕನ್ನಡ ನಾಡಿನ ಜನತೆಗೆ ಯಾವ ಅನ್ಯಾಯವನ್ನು ಮಾಡದೆ, ಯಾವ ಕಷ್ಟವನ್ನೂ ಕೊಡದೇ ನಮಗೆ ಗಡಿವಿವಾದದಲ್ಲಿ ನ್ಯಾಯವನ್ನು ದೊರಕಿಸಿಕೊಡುವುದು ಕೇಂದ್ರ ಸರ್ಕಾರದವರ ಕರ್ತವ್ಯವಾಗಿದೆ.

(MR. SPEAKER in the Chair)

ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಬಾರ್ಡರ್‌ನಲ್ಲಿ ಕೆಟ್ಟ ಪರಿಸ್ಥಿತಿ ಉಂಟಾಗಿ ತೊಂದರೆಯಾದರೆ ನಾವೇನೂ ಬಳೆ ತೊಟ್ಟುಕೊಂಡಿಲ್ಲ ಎಂದು ಹೇಳಿದರು. ಬಳೆ ತೊಟ್ಟುಕೊಂಡಿರುವವರು

(ಶ್ರೀಮತಿ ಕೆ. ಲೀಲಾವತಿ ರೈ)

ಕನ್ನಡಿಗರಲ್ಲವೇ? ಹೆಣ್ಣು ಮಕ್ಕಳೂ ಕೂಡ ಕನ್ನಡಿಗರೇ, ಕನ್ನಡ ದೇಶದಲ್ಲಿ ಹೆಣ್ಣು ಮಕ್ಕಳು ದೇಶಕ್ಕಾಗಿ ತಮ್ಮ ಪ್ರಾಣವನ್ನೂ ಕೂಡ ಅರ್ಪಣೆ ಮಾಡಿದಂತಹ ಕಥೆಗಳು ನಮ್ಮ ಮುಂದೆ ಎಷ್ಟೋ ಇವೆ. ಈ ಈ ಗಡಿಪ್ರಶ್ನೆಯ ನಿರ್ಣಯ ಮಾಡುವಾಗ ನಾವೆಲ್ಲರೂ ಕನ್ನಡಿಗರು, ಹೆಣ್ಣಾಗಲಿ, ಗಂಡಾಗಲಿ ಒಗ್ಗಟ್ಟಿನಿಂದ, ಒಮ್ಮನಸ್ಸಿನಿಂದ, ಒಕ್ಕೊರಲಿನಿಂದ—ಈಗ ಮಾನ್ಯ ಸದಸ್ಯರು ಹೇಳಿದರು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ದೆಹಲಿಗೆ ಹೋಗಬೇಕೆಂದು ಅಂತಹ ಸಂದರ್ಭಬಂದರೆ ದೆಹಲಿಗೂ ಕೂಡ ಹೋಗಿ ಹೋರಾಟ ಮಾಡುವುದಕ್ಕೆ ಯಾರೂ ಕೂಡ ಹಿಂಜರಿಯುವವರಲ್ಲ. ಬೆಳಗಾಂ ನಮ್ಮ ಕೈಬಿಟ್ಟುಹೋಗುವಾಗ ಶ್ರೀಮಾನ್ ಚನ್ನಬಸಪ್ಪನವರು ಹೇಳಿದ ಹಾಗೆ ಆಗುವುದಿಲ್ಲ ಕಾಸರಗೋಡಿನ ಪ್ರಶ್ನೆಯನ್ನೂ ಕೂಡ ವಿಚಾರ ಮಾಡಬೇಕಾಗಿದೆ, ಅಲ್ಲಿನ ಜನರಿಗೆ ಪಶ್ಚಾತ್ತಾಪವಾಗಿದೆ ಅದನ್ನೂ ಕೂಡ ಪರಿಹರಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಅವರೂ ಕೂಡ ಕನ್ನಡಿಗರು. ಕೇರಳ-ಮೈಸೂರು, ಮೈಸೂರು-ಮಹಾರಾಷ್ಟ್ರ ಗಡಿ ಪ್ರಶ್ನೆಯನ್ನು ಬಗೆಹರಿಸಲು ಸರ್ವರೂ ಪ್ರಯತ್ನ ಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಆದ್ದರಿಂದ ಎಲ್ಲರಲ್ಲೂ ನನ್ನ ವಿನಂತಿ ಏನೆಂದರೆ ಈ ಮನೆಯಲ್ಲಿ ಈಗ ಯಾವ ಒಂದು ಸೂಚನೆ ಇದೆ ಇದಕ್ಕೆ ಹಿರಿಯರಾದ ಸಿದ್ಧವೀರಪ್ಪನವರೂ ಕೂಡ ಬೆಂಬಲ ಕೊಟ್ಟು ಯಾವ ವಿರೋಧವೂ ಇಲ್ಲದಂತೆ ಅಂಗೀಕಾರ ಮಾಡಬೇಕೆಂದು ವಿಜ್ಞಾಪನೆ ಮಾಡಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ಮಾನ್ಯ ಸಭಾಧ್ಯಕ್ಷರೇ, ಈಗ ಮೂರು ದಿವಸಗಳಿಂದ ಈ ಮಾನ್ಯ ಸಭೆಯಲ್ಲಿ ಈ ಮಹಾರಾಷ್ಟ್ರ ಮತ್ತು ಮೈಸೂರು ನಡುವಿನ ಗಡಿ ವಿವಾದದ ಬಗ್ಗೆ ತಂದಿರತಕ್ಕ ನಿಲುವಳಿ ಸೂಚನೆ ಬಗ್ಗೆ ಭಾಷಣಗಳು ನಡೆಯುತ್ತಾ ಇವೆ, ಚರ್ಚೆಯಾಗುತ್ತಾ ಇದೆ. ಎಲ್ಲರ ಮತ, ಎಲ್ಲರ ನಿಲುವು ಈ ಭಾಷಣಗಳಿಂದ ಒಂದೇ ಎಂಬುದು ಸ್ಪಷ್ಟವಾಗಿದೆ. ಒಂದೆರಡು ಮಾತುಗಳನ್ನು ಬಿಟ್ಟರೆ, ಒಂದೆರಡು ಶಬ್ದಗಳನ್ನು ಬಿಟ್ಟರೆ ಈ ಮಾನ್ಯ ಸಭೆಯ ಸದಸ್ಯರ ನಿಲುವು ಎಲ್ಲಾ ಒಂದೇ ಎಂಬುದು ಸ್ಪಷ್ಟವಾಗುತ್ತಾ ಇದೆ. ಈ ಮೈಸೂರು ಮತ್ತು ಮಹಾರಾಷ್ಟ್ರಗಳ ನಡುವಿನ ಗಡಿ ವಿವಾದದ ಬಗ್ಗೆ ಮಹಾಜನ್ ಆಯೋಗ ನೀಡಿದ ತೀರ್ಪಿನ ಬಗ್ಗೆ ಕೇಂದ್ರ ಸರ್ಕಾರ ತಳೆದಿರುವ ಉದಾಸೀನ ಭಾವನೆ ಕರ್ನಾಟಕದ ಜನತೆಗೆ ಅಪಾರ ಅಸಮಾಧಾನ ಉಂಟು ಮಾಡಿದೆ.

ಈ ವಿಚಾರವನ್ನು ನಿಷ್ಪಕ್ಷಪಾತವಾಗಿ ಪರಿಶೀಲಿಸಿ ಶಾಸ್ತ್ರೀಯ ಆಧಾರಗಳಮೇಲೆ ನಿರ್ಧಾರಕ್ಕೆ ಬರುವುದನ್ನು ಬಿಟ್ಟು ತಮ್ಮ ಮನಸ್ಸಿಗೆ ಬಂದಂತೆ ಯಾವುದೋ ಅಶಾಸ್ತ್ರೀಯ ಅಸಂಬದ್ಧ ಆಧಾರದ ಮೇಲೆ ರಾಜ್ಯದ ಗಣನೀಯ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ವರ್ಗಾಯಿಸಲು ಕೇಂದ್ರ ಯೋಚಿಸುತ್ತಿದೆ ಎಂಬ ವರದಿಗಳು ಕೇವಲ ವಿಚಾರವಂತರಿಗೆ ಮಾತ್ರವಲ್ಲ ಜನಸಾಮಾನ್ಯರಿಗೂ ಕೂಡ ದಿಗ್ಭ್ರಮೆ ಮೂಡಿಸಿವೆ.

ನ್ಯಾಯಾಧೀಶನ ಸ್ಥಾನದಲ್ಲಿದ್ದು ನಿಷ್ಪಕ್ಷಪಾತ ತೀರ್ಪುನೀಡಬೇಕಾದ ಹೊಣೆ ಇರುವ ಕೇಂದ್ರ ಸರ್ಕಾರ ತಾನೇ ಒಬ್ಬ ಕಕ್ಷಿಗಾರನಾಗಿ ಈ ವಿಚಾರದಲ್ಲಿ ಸಕ್ರೀಯ ಭಾಗವಹಿಸಿ ಒಂದು ಪ್ರದೇಶದ ಜನರ ಭಾವನೆಗಳನ್ನು ಉದ್ರೇಕಿಸಿ ಅವರ ಹಿತಾಸಕ್ತಿಗಳಿಗೆ ಧಕ್ಕೆ ಬರುವಂತೆ ವರ್ತಿಸುತ್ತಿರುವ ಕೇಂದ್ರಸರ್ಕಾರದ ವರ್ತನೆ ಖಂಡನೀಯ. ಈ ಬಗ್ಗೆ ಕಾಲ ಕಾಲಕ್ಕೆ ತಮ್ಮ ನಿಲುವು ಬದಲಾಯಿಸುತ್ತಿರುವ ಪ್ರಧಾನಿ ಮಂತ್ರಿಗಳ ನಿಲುವು ಅಸಮರ್ಥನೀಯ. ತಮ್ಮ ಸ್ಥಾನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿರುವ ಗೃಹ ಮಂತ್ರಿಗಳ ನಡೆ ಖಂಡನೀಯ.

ರಾಷ್ಟ್ರೀಯ ನಾಯಕರೆನಿಸಿಕೊಂಡರೂ ತಮ್ಮ ಸ್ವಪ್ರತಿಷ್ಠೆ ಸ್ವಂತ ರಾಜ್ಯದ ಹಿತಾಸಕ್ತಿಯ ಪ್ರಶ್ನೆ ಬಂದಾಗ ಎಲ್ಲ ನೀತಿನಿಯಮಗಳನ್ನೂ ಗಾಳಿಗೆ ತೂರುವ ಇಂತಹ ನಾಯಕರಿರುವುದು ನಮ್ಮ ದುರ್ದೈವ.

ತಾನೇ ರಾಜ್ಯಾಂಗಕ್ಕನುಗುಣವಾಗಿ ನೇಮಿಸಿದ ಕಮಿಷನ್, ಅದರ ತೀರ್ಪು ಎಲ್ಲರಿಗೂ ಅನ್ವಯವಾಗಬೇಕು. ಅದೇ ಕಡೆಯದು ಎನ್ನುವ ಆಶ್ವಾಸನೆ ನೀಡಿದ್ದ ಕೇಂದ್ರ ಆ ಆಯೋಗದ ತೀರ್ಪನ್ನು ಮೂಲೆಗೊತ್ತುವುದು ರಾಜ್ಯಾಂಗದ ಅಪಹಾಸ್ಯ, ಪ್ರಜಾಪ್ರಭುತ್ವದ ಅಣಕ. ಇದನ್ನು ಯಾರೂ ಸಹಿಸಲಾರರು.

ಮಹತ್ವಾಕಾಂಕ್ಷಿಗಳಾದ ವ್ಯಕ್ತಿಗಳು ಎಷ್ಟೇ ಉನ್ನತ ಸ್ಥಾನದಲ್ಲಿರಲಿ ವೈಯುಕ್ತಿಕ ಹಿತಾಸಕ್ತಿ, ರಾಜಕೀಯ ಅಳಿವು ಉಳಿವಿನ ಪ್ರಶ್ನೆ ಬಂದಾಗ ಎಂತಹ ಕೆಳಮಟ್ಟದಲ್ಲಿ ವರ್ತಿಸಬಲ್ಲರು ಎಂಬುದಕ್ಕೆ ಇದು ಒಂದು ಸ್ಪಷ್ಟ ಉದಾಹರಣೆ.

ಕಳೆದ 13 ವರ್ಷಗಳಿಂದ ನಮ್ಮ ಗಮನ ಸೆಳೆಯುವ ಮನಶ್ಶಾಂತಿ ಕಲಕುತ್ತಿರುವ, ಭಾವೋದ್ರೇಕಗೊಳಿಸುತ್ತಿರುವ ಈ ಪ್ರಶ್ನೆಗೆ ತೆರೆ ಎಳೆಯುವ ಸಮಯ ಬಂದಿದೆ. ಕೇಂದ್ರದ ಅನ್ಯಾಯ ಪಕ್ಷಪಾತ ಭಾವನೆ, ಇತಿಹಾಸ ಸಾರುತ್ತಿರುವ ಕೆಲವು ಮರಾಠಿಗರ ದುರಾಕಾಂಕ್ಷೆಗಳ ವಿರುದ್ಧ ಹೋರಾಡಿ ಈ ಪ್ರಶ್ನೆಯ ಸೊಲ್ಲಡಗಿಸೋಣ. ಅದಕ್ಕೆ ನಾವೇ ಕೊನೆಯಂಕ ಹಾಡೋಣ.

ಬೆಳಗಾವಿ ನಮ್ಮ ಗಂಡು ಮೆಟ್ಟಿನ, ಹೆಮ್ಮೆಯ ಅಭಿಮಾನದ ಸಂಕೇತವಾಗಿದೆ. ರಾಜ್ಯಪುನರ್ವಿಂಗಡಣೆಯಾದಾಗಿನಿಂದ ಮತ್ತೆ ಮತ್ತೆ ಗಡಿ ಪ್ರಶ್ನೆಯನ್ನು ಎತ್ತಲು ಮರಾಠಿಗರಿಗೆ ಅವಕಾಶ ನೀಡಿದುದು, ಎತ್ತಿದಾಗ ಕೇವಲ ಕೆಲವು ಹೇಳಿಕೆ ಘೋಷಣೆಗಳಿಂದ ತೃಪ್ತರಾದದು ನಮ್ಮ ನಾಯಕತ್ವ ಮಾಡಿದ ದೊಡ್ಡ ತಪ್ಪೇನೋ ಎನಿಸುತ್ತದೆ.

ಈ ಮಾನವ ಸಹಜ ದೌರ್ಬಲ್ಯವನ್ನು ಮರಾಠಿಗರು ಕೇಂದ್ರದವರು ನಮ್ಮ ಹೇಡಿತನದ ಪ್ರತೀಕ ಎರಿದು ತಿಳಿದಿದ್ದಾರೆ. ಆದರೆ ಸಂವಿಧಾನ ಬದ್ಧ ಮಾರ್ಗಗಳಲ್ಲಿ ಮಾತ್ರವಲ್ಲದೇ ಸಮಯ ಬಂದರೆ ಎಲ್ಲ ಕಟ್ಟುಪಾಡುಗಳನ್ನೂ ಕಿತ್ತೆಸೆದು ನಮ್ಮ ಗೌರವಕ್ಕಾಗಿ ಸರ್ವ ತ್ಯಾಗಕ್ಕೂ ನಾವು ಸಿದ್ಧರಾಗಿದ್ದೇವೆ ಎಂಬುದನ್ನು ಈ ಸಮಯದಲ್ಲಿ ತೋರಿಸಿಕೊಡಬೇಕಾಗಿದ. ವಿಶಾಲ ರಾಷ್ಟ್ರದ ಹಿತದೃಷ್ಟಿಯಿಂದ ಆದ ಅನ್ಯಾಯಗಳನ್ನು ನುಂಗುತ್ತಿದ್ದ ನಮ್ಮ ಸಹನೆಗೂ ಒಂದು ಮಿತಿ ಇದೆ. ಚಂಡೀಗಡವನ್ನು ವಿಭಜಿಸಬೇಕೆಂದಿದ್ದ ಪ್ರಧಾನಿಗಳು ಅಕಾಲಿಗಳ ಬೆದರಿಕೆಗೆ ಮಣಿದು ಹಿಂತೆಗೆದರು. ನಮ್ಮ ಗೌರವದ ಪ್ರಶ್ನೆಯಾದ ಬೆಳಗಾವಿಯ ಪ್ರಶ್ನೆಯನ್ನು ಕೆದಕಿ ಕರ್ಣಾಟಕವನ್ನು ಜ್ವಾಲಾಮುಖಿಯನ್ನಾಗಿ ಮಾಡಿ ಅದರ ಉರಿಗೆ ಆಹುತಿಯಾಗುವ ಮುನ್ನ ಕೇಂದ್ರ ನಾಯಕರು ಭವಿಷ್ಯದ ಆಗುಹೋಗು ಬಗ್ಗೆ ಚಿಂತಿಸಲಿ ಎಂದು ಕಳಕಳಿಯಿಂದ ಕೇಳುತ್ತೇನೆ.

ನಾನು ರಾಷ್ಟ್ರೀಯ ಏಕತೆಯ ಕಟ್ಟಾಭಿಮಾನಿ. ಆದರೆ ಅನ್ಯಾಯ ಅಕ್ರಮಗಳು ಮಿತಿಮೀರಿದಾಗ, ಹಿಂದೆ ತಮಿಳ್ನಾಡಿನಲ್ಲಿದ್ದಂತೆ ಇಲ್ಲೂ ಪ್ರತ್ಯೇಕತೆಯ ಕೂಗೇಳಲು ಅವಕಾಶ ನೀಡಬೇಡಿ ಎಂದು ಪ್ರಾರ್ಥಿಸುತ್ತೇನೆ.

ಈ ವಿಚಾರದ ಬಗ್ಗೆ ರಾಷ್ಟ್ರದ ಎಲ್ಲ ಸಂಸತ್ ಸದಸ್ಯರು, ರಾಜಕೀಯ ನಾಯಕರು ಮತ್ತು ರಾಜ್ಯಗಳ ಮುಖ್ಯ ಮಂತ್ರಿಗಳಿಗೆ ವಿವರ ನೀಡಿ, ನಮ್ಮ ನಿಲುವನ್ನು ವಿವರಿಸಿ ಒಂದು ನ್ಯಾಯಪೂರ್ಣ ನಿರ್ಧಾರಕ್ಕೆ ಬರುವಂತೆ ಕೇಂದ್ರ ಸರಕಾರಕ್ಕೆ ಒತ್ತಾಯಮಾಡುವಂತೆ ವಿನಂತಿಸಿಕೊಳ್ಳಲು ಮುಖ್ಯ ಮಂತ್ರಿಗಳಿಗೆ ಸಲಹೆಮಾಡುತ್ತೇನೆ. ಮುಖ್ಯ ಮಂತ್ರಿಗಳು ಬೆಳಗಾವಿನಲ್ಲ ಮಾಡಿದ ಭಾಷಣ ಗಡಿ ಪ್ರಶ್ನೆಯನ್ನು ಕೆದಕಲು ಕಾರಣ ಎಂದು ಅರ್ಥ ಬರುವಂತೆ ಈ ಸಭೆಯ ಮಾನ್ಯ ಸದಸ್ಯರು ಹೇಳಿದುದು ಆಶ್ಚರ್ಯಕರ.

ಮುಂಬೈ ಅಧಿವೇಶದ ನಂತರ ಈ ಬಗ್ಗೆ ತೆರೆಯ ಮರೆಯಲ್ಲಿ ನಡೆಯುತ್ತಿದ್ದ ಸಂಚು ಅಪರೋಕ್ಷವಾಗಿ ಕೇಂದ್ರದ ಸಚಿವರೊಬ್ಬರು ಬೆಳಗಾಮನ್ನೇಕೆ ವಿಭಜಿಸಬಾರದು ಎಂದು ಪ್ರಶ್ನಿಸಿದ್ದು ನಂತರದ ಬೆಳವಣಿಗೆಗಳು ಮುಖ್ಯ ಮಂತ್ರಿಗಳನ್ನು ಈ ಬಗ್ಗೆ ಕೇಂದ್ರಕ್ಕೆ ಎಚ್ಚರಿ ನೀಡುವಂತೆ ಮಾಡಿದವು. ಸಿದ್ಧವೀರಪ್ಪನವರೇ ಆ ಸ್ಥಾನದಲ್ಲಿದ್ದರೂ ಅದನ್ನು ಮಾಡುತ್ತಿದ್ದರು. ಮುಖ್ಯ ಮಂತ್ರಿಗಳ ಬೆಳಗಾಂ ಹೇಳಿಕೆ ಸಕಾರಣವಾದದ್ದು. ಅವರು ಧೀರೋದಾತ್ತ ನಿಲುವನ್ನು ತಳೆದರೆ ಅವರಿಗೆ ನಮ್ಮ ಅಖಂಡ ಬೆಂಬಲವಿದೆ, ಇಷ್ಟನ್ನು ಹೇಳಿ ಮಹಾಜನ್ ತೀರ್ಪನ್ನು ಇರುವ ಹಾಗೆ ಕಾರ್ಯಗತಮಾಡದಿದ್ದರೆ ನಾನು ಒಪ್ಪುವುದಿಲ್ಲ ಎಂದು ಎಲ್ಲ ಮಾನ್ಯ ಸದಸ್ಯರೂ ಒಕ್ಕೊರಳಿನಿಂದ ಸಾರಬೇಕು ಎಂದು ಪ್ರಾರ್ಥಿಸಿ ಹಾಗೆ ಮಾಡುವರೆಂದು ನಂಬಿ ನಮ್ಮ ಮುಂದಿರುವ ನಿರ್ಣಯವನ್ನು ಅನುಮೋದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—Before I call upon next speaker, I want to know from the hon. Members whether they are willing to sit for two hours more today.

HON. MEMBERS.—No. No.

Sri H. SIDDAVEERAPPA.—I want to know when the discussion on this particular subject will conclude ?

Mr. SPEAKER.—Hon. Members know that the House decided yesterday that it should conclude to-day. I shall put the motion to the vote of the House.

Sri H. SIDDAVEERAPPA.—Sir, you will be setting a very bad precedent by this method. My party members are not prepared to sit after six of the clock. I only want you to tell me whether this subject will be taken up tomorrow also ?

Mr. SPEAKER.—I cannot tell you that now. The Leader of the House is busy in the other House. After half-an-hour I will inform the Members.

Sri H. SIDDAVEERAPPA.—I am sorry Sir, the attitude of the Hon. Chair is not helpful. I would once again appeal to you not to try to stifle the discussion and have your own way of doing things. If any other are members interested to sit after 6 P.M. let them sit, I have no objection. But my self and my party members are not prepared to sit beyond six O' clock. At least two hours will be required for my parte members to speak on this subject. I want you therefore to tell my whether this subject will be taken up tomorrow also ?

6-00 P.M.

Mr. SPEAKER.—The rules stipulate that time should be fixed in consultation with the Leader of the House. When the Leader of the House comes here, I will consult him and inform the House. Hon. Leader of the House is replying to the debate in the Council. Till he arrives here, we will extend the time. I therefore extend the time by two hours.

HON'BLE MEMBERS.—We do not agree.

Mr. SPEAKER.—If both sides come to a decision to have this debate tomorrow, I have no objection. The extended time may be utilised by Hon'ble members who wish to stay longer in the House. Others are at liberty to take their chance tomorrow.

ಶ್ರೀ ಕೆ. ಎಚ್. ಪಾಟೀಲ್.—ಈ ಸಭೆಯಲ್ಲಿ ಆರು ಗಂಟೆ ಐದು ನಿಮಿಷಕ್ಕೆ ಚರ್ಚೆಯನ್ನು ಎರಡು ಗಂಟೆ ಕಾಲ ಮುಂದುವರಿಸುವ ಬಗ್ಗೆ ಸಭೆಯ ಅಭಿಪ್ರಾಯ ಕೇಳಿದರು. ನನ್ನ ತಿಳುವಳಿಕೆಯ ಪ್ರಕಾರ ಬಹು ಸಂಖ್ಯಾಕ ಸದಸ್ಯರು ಟೈಂ ಎಕ್ಸ್‌ಟೆಂಡ್ ಮಾಡುವುದು ಬೇಡ ಎಂದು ಇದ್ದರೂ ಕೂಡ ಎರಡು ಗಂಟೆ ಕಾಲ ಟೈಂ ಎಕ್ಸ್‌ಟೆಂಡ್ ಆಯಿತು ಎಂದು ಹೇಳಿದರು. ನಾನು ಕೂಡಲೇ ಅದಕ್ಕೆ ಪ್ರತಿಭಟನೆ ಮಾಡಲು ಎದ್ದಾಗ ನನಗೆ ಅಧ್ಯಕ್ಷರು ಅವಕಾಶ ಕೊಡಲಿಲ್ಲ. ನಿಯಮಗಳನ್ನು ಮೀರಿ ಸಭಾಧ್ಯಕ್ಷರು ಸಭೆ ನಡೆಸಲು ಆಗುವುದಿಲ್ಲ. ಅವರಿಗೂ ಸಹ ಸಭಾ ನಿಯಮಗಳು ಅನ್ವಯಿಸುತ್ತವೆ. ಸಭೆಯ ಮುಂದೆ ಮೊದಲು ನಿರ್ಣಯ ತರಬೇಕು. ಸಭೆಯನ್ನು ಆರ್ಡರಿನಲ್ಲಿ ತರಬೇಕು. ಸಭೆ ಆರ್ಡರಿನಲ್ಲಿ ಇದ್ದಾಗ ಸಭೆಯ ಅಭಿಪ್ರಾಯ ಪರ ಮತ್ತು ವಿರೋಧವಾಗಿ ತೆಗೆದು ಕೊಳ್ಳಬೇಕು ಅದನ್ನು ಚಾಲೆಂಜ್ ಮಾಡಿದರೆ, ಡಿವಿಜನ್ ಕೇಳಿದರೆ ಪೋಲ್ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನೆಲ್ಲಾ ಮೀರಿ ಅಧ್ಯಕ್ಷರು ನಿರ್ಣಯ ಹೇಳಿದರು. ಆದುದರಿಂದ ಅವರ ನಿರ್ಣಯ ಅಧಿಕೃತವಾಗಿ ಬಂದಿಲ್ಲ. ಇದನ್ನೆಲ್ಲಾ ಅನುಸರಿಸಿದಮೇಲೆ ನಿರ್ಣಯ ಒಪ್ಪಿದೆಯೇ, ಒಪ್ಪಿಕೊಂಡಿಲ್ಲವೇ ತಿಳಿಸಬೇಕಾಗುತ್ತದೆ. ಆದರೆ ಗದ್ದಲದಲ್ಲಿ ನಿರ್ಣಯ ಒಪ್ಪಿಕೊಳ್ಳಲಾಗಿದೆ ಎಂದು ಹೇಳಿದರು. ಆರು ಗಂಟೆ ಐದು ನಿಮಿಷಕ್ಕೆ ಈ ಸಭೆಯ ನಡೆವಳಿಕೆ ಎಕ್ಸ್‌ಟೆಂಡ್ ಮಾಡುವುದರ ಬದಲು ಆರು ಗಂಟೆಗೆ ಸರಿಯಾಗಿ ಹಾಗೆ ಮಾಡಬೇಕಾಗಿತ್ತು. ಆರು ಗಂಟೆಗೆ ಸಭೆಯ ಅವಧಿ ಮುಗಿದಿತ್ತು. ಆಗ್ಗೆ ಅವಧಿ ಎಕ್ಸ್‌ಟೆಂಡ್ ಮಾಡಲು ಸಭೆಯನ್ನು ಕೇಳಲಿಲ್ಲ ಆದುದರಿಂದ ತಮ್ಮ ನಿರ್ಣಯ ಅಕ್ರಮವಾಗಿದೆ. ತಮ್ಮ ನಿರ್ಣಯ ಕ್ರಮಬದ್ಧವಾಗಿಲ್ಲ. ಆದುದರಿಂದ ಅದನ್ನು

ರಹಿತಗೊಳಿಸಬೇಕು. ಪುನರಪಿ ಕ್ರಮಬದ್ಧವಾಗಿ ನಿರ್ಣಯ ಸಭೆಯ ಮುಂದೆ ಬರಲಿ. ನಮ್ಮ ಹಕ್ಕು ಭಾಧ್ಯತೆಗಳನ್ನು ಚಲಾಯಿಸುತ್ತೇವೆ. ಏನು ನಿರ್ಣಯ ಆಗುತ್ತದೆ ಅದರಂತೆ ನಡೆದು ಕೊಳ್ಳೋಣ.

Mr. SPEAKER.—There is no point of order.

Sri H. SIDDAVEERAPPA.—None of my party Members will participate in the discussion. What all we want to know is when this will be taken up for discussion and whether it will be taken up for discussion tomorrow. We are not agreeable to meet in the morning. We can only sit in the working hours after 1 P.M. Only one member from our party has expressed his views. If you take up this discussion tomorrow. then our party members will have a chance to express their views. I can only appeal to you and none else.

ಶ್ರೀ ಬಿ. ಭಾಸ್ಕರಶೆಟ್ಟಿ.—ನಮ್ಮ ಲಿಸ್ಟ್‌ನಲ್ಲಿ ಇನ್ನೂ ಹತ್ತು ಹನ್ನೆರಡು ಜನ ಸದಸ್ಯರು ಮಾತನಾಡುವವರು ಇದ್ದಾರೆ. ಆದುದರಿಂದ ಚರ್ಚೆ ನಾಳೆ ಮುಂದುವರಿಸಲೇಬೇಕು.

ಶ್ರೀ ಅಜೀಜ್ ಸೇಟ್.—ಗಡಿ ಪ್ರಶ್ನೆ ಮುಖ್ಯವಾದ ವಿಷಯ ಅಲ್ಲವೇ ತೀವ್ರ ಯೋಚನೆ ಮಾಡಬೇಕು. ಸಭೆ ಒಂದು ಗಂಟೆಯಿಂದ ಆರು ಗಂಟೆವರೆಗೆ ನಡೆದಮೇಲೆ ಬಿಯಾಂಡ್ ಷೆಡ್ಯೂಲ್ ಟೈಂ ಇದನ್ನು ತೆಗೆದುಕೊಳ್ಳಲು ಆಗುವುದಿಲ್ಲ. ಮಂತ್ರಿಗಳಿಗೂ ನಮಗೂ ಕೂಡ ಹೆಂಡತಿ ಮಕ್ಕಳು ಇದ್ದಾರೆ, ಬೇರೆ ಕೆಲಸಗಳು ಇರುತ್ತವೆ. ಚರ್ಚೆ ನಾಳೆ ಮುಂದುವರಿಸಬಹುದು. ತಾವು ಸ್ಪೀಕರ್ ಆಗಿದ್ದೀರಿ. ಇದು ಯಾವ ದುರದೃಷ್ಟ? ಪವಿತ್ರ ದಿನ ಅಪವಿತ್ರ ಕೆಲಸ ಮಾಡುತ್ತಿದ್ದೀರಿ.

Sri H. SIDDAVEERAPPA.—We have to decide as to what we have to do. I am requesting you to say whether you are going to extend time or not. I am not pressing you to extend time. It is left to you.

Sri B. P. GANGADHAR.—Let there be no controversy on this matter. It is an important matter. Let it be taken up tomorrow.

[MR. DEPUTY SPEAKER in the Chair.]

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಈ ಚರ್ಚೆ ಮೊಟಕು ಮಾಡಬೇಕು ಎಂದು ಅಲ್ಲ. ಎಷ್ಟು ದಿವಸ ಚರ್ಚೆ ಮಾಡಬೇಕು ಇದು ಸಭೆಗೆ ಬಿಟ್ಟದ್ದು ಎಲ್ಲ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಬಜೆಟ್ ಚರ್ಚೆ ಮಾಡಬೇಕಾಗಿದೆ. ಇದಕ್ಕೂ ಹೆಚ್ಚು ಪ್ರಾಶಸ್ತ್ಯ ಕೊಡಬೇಕಾಗಿದೆ. ಬಜೆಟ್ ಚರ್ಚೆಯ ಕಾಲದಲ್ಲಿ ಇದನ್ನು ಅಡ್ಜಸ್ಟ್ ಮಾಡಿಕೊಂಡು ಹೋಗೋಣ ಎಂಬ ಇಚ್ಛೆ ಇದ್ದರೆ ಅದಕ್ಕೆ ಅಡ್ಡಿ ಬರುವುದಿಲ್ಲ. ಮಾನ್ಯ ಸಭಾಧ್ಯಕ್ಷರಿಗೂ ಸಾಕಷ್ಟು ತಿಳಿದಿದೆ. ಆದರೆ ತಾವುಗಳ್ಯಾರೂ ಕಾಳಿತನ್ನೇ ಮನಸ್ಸಿಗೆ ಬಂದಹಾಗೆ ಮಾತನಾಡುವುದು ಬೇಡ. ಈ ವಿಚಾರದಲ್ಲಿ ಮಾನ್ಯ ಸದಸ್ಯರುಗಳಿಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು ಸಾಕಷ್ಟು ಕಾಲಾವಕಾಶ ಇರಬೇಕೆಂಬುದನ್ನು ನಾನೂ ಒಪ್ಪುತ್ತೇನೆ. ಆದರೆ ನಾನು ತಮ್ಮೆಲ್ಲರಲ್ಲೂ ಕಳಕಳಿಯಿಂದ ಮನವಿಮಾಡಿಕೊಳ್ಳುವುದು ಏನೆಂದರೆ ತಮಗೆ ನನ್ನ ಬಗ್ಗೆ ಟೀಕೆ ಮಾಡಲಿಕ್ಕೆ ಮತ್ತು ಬೈಯ್ಯುವುದಕ್ಕೆ ಇನ್ನೂ ಕಾಲಾವಕಾಶ ಸಾಕಷ್ಟಿದೆ. ಆದರೆ ಅದಕ್ಕೆ ಇದು ಸರಿಯಾದ ಸಮಯವಲ್ಲ.

ಶ್ರೀ ಎಸ್. ಚನ್ನಯ್ಯ.—ನಾವು ಯಾವತ್ತೂ ಬಯ್ಯುತಕ್ಕವರಲ್ಲ. ನಾವು ಬಯಿಸಿಕೊಳ್ಳ ತಕ್ಕವರು.

ಶ್ರೀ ವೀರೇಂದ್ರ ಪಾಟೀಲ್.—ಹೌದು, ಹೌದು, ನನ್ನನ್ನು ತಾವು ಎಷ್ಟು ಹೊಗಳಿದ್ದೀರಿ ಮತ್ತು ಅಧ್ಯಕ್ಷರಿಗೆಷ್ಟು ಹೂಮಳೆ ಸುರಿಸಿದ್ದೀರಿ ಎಂಬುದು ಎಲ್ಲವೂ ರಿಕಾರ್ಡಿನಲ್ಲೇ ಇದೆ.

Sri B. P. GANGADHAR.—On a point of order, Sir. We are making a fervent appeal to the Chief Minister to see that the time is extended up to tomorrow so that all the members will have a chance to

(Sri B. P. Gangadhar)

speak and express their opinions on this very important matter. The Chief Minister was making a statement and while he is in the midst of his statement there is no reason to lose temper. If he is against the extension of time, then we shall make our submission to the Chair.

Sri H. M. CHANNABASAPPA.—Please sit down.

Sri B. P. GANGADHAR.—This Member has no business to interrupt or question me. He is not my Speaker; the Speaker is there.

ಶ್ರೀ ವೀರೇಂದ್ರ ಪಾಟೀಲ್.—ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೆ ಎಂದರೆ ಈ ದಿವಸ ನಡೆಯುತಕ್ಕ ಚರ್ಚೆಯನ್ನು ಇನ್ನೂ ಒಂದು ದಿವಸ ಮುಂದುವರಿಸಬೇಕೆಂಬುದರಲ್ಲಿ ನನ್ನ ಅಡ್ಡಿಯೇನಿಲ್ಲ. ಈ ದಿವಸ ರಾತ್ರಿ 8 ಗಂಟೆಯುವರೆಗೂ ಸಭೆ ನಡೆಯಬೇಕೆಂದು ತೀರ್ಮಾನವಾಗಿದೆ. ನಾಳೆಯೂ ಪೂರ್ತಿ ಇದನ್ನೆ ಇಟ್ಟುಕೊಳ್ಳೋಣ. ಆದರೆ ನಾಡಿದ್ದು ಮಾತ್ರ ಬಡ್ಜೆಟ್ ಮೇಲಿನ ಚರ್ಚೆಯನ್ನು ಪ್ರಾರಂಭಮಾಡಲೇಬೇಕು ಎಂಬುದು ನನ್ನ ವಿನಂತಿ.

Sri H. SIDDAVEERAPPA.—Under no circumstances the non-official day should be usurped under pressure of time for any other work. So, Saturday shall be reserved for non-official day and it should not be usurped for any other Government business.

ಶ್ರೀ ವೀರೇಂದ್ರ ಪಾಟೀಲ್.—ಖಾಸಗೀ ಕಾರ್ಯಕಲಾಪಗಳ ಬಗ್ಗೆ ನಿಗದಿಯಾದ ಕಾಲವನು ಮೊಟಕು ಮಾಡಬೇಕೆಂಬುದು ಖಂಡಿತ ನನ್ನ ಉದ್ದೇಶವಲ್ಲ. ಆದರೆ ಅನೇಕ ವರ್ಷಗಳಿಂದಲೂ ನಡೆದುಬಂದಿದೆ ಆದರ ಪ್ರಕಾರ ನಾನಫಿಷಿಯಲ್ ದಿನಗಳನ್ನು ಬಡ್ಜೆಟ್ ಚರ್ಚೆಗೆ ಬಿಟ್ಟುಕೊಡಬೇಕು ಅದು ಹಿಂದಿನಿಂದಲೂ ನಡೆದುಬಂದಿದೆ ಹಾಗೆ ಪಾಶಸ್ತ್ಯ ಕೊಡತಕ್ಕ ಬಗ್ಗೆ ಎಷ್ಟು ನಾನಫಿಷಿಯಲ್ ದಿನಗಳು ಖೋತ ಆಗುತ್ತವೋ ಅಷ್ಟು ದಿನಗಳನ್ನು ಅಧಿವೇಶನದ ಕಡೆಯಲ್ಲಿ ಕೂಡಿಸಿಕೊಡುವುದಕ್ಕೆ ನಾನು ತಯಾರಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಯಾವ ವರ್ಷವೂ ಹಾಗೆ ಕಾಂಪನ್‌ಸೇಟ್ ಮಾಡಿಕೊಟ್ಟಿರುವುದನ್ನು ನಾನು ನೋಡಿಲ್ಲ. ಓಟಾನಕೌಂಟ್ ತೆಗೆದುಕೊಳ್ಳಿ ಎಂದರೆ ಅದನ್ನೂ ಮಾಡುವುದಿಲ್ಲ. ಇಲ್ಲವೇ ಉದಾರವಾಗಿ ಕಾರ್ಯಕ್ರಮದ ಪಟ್ಟಿಯನ್ನೂ ತಯಾರಿಸುವುದಿಲ್ಲ. ಜನವರಿಯಿಂದಲೇ ಪ್ರಾರಂಭ ಮಾಡಬಹುದಿತ್ತು. We are not perpared to work beyond the period for which we are bound to work.

ಸರ್ಕಾರದವರು ನಮಗೇನೂ ಹೆಚ್ಚಿಗೆ ಕಾಲವನ್ನು ಕೊಡಬೇಕಾದ್ದೇನಿಲ್ಲ. ಖಾಸಗೀ ಕಾರ್ಯಕಲಾಪಗಳಿಗೆ ಮೀಸಲಾಗಿರತಕ್ಕ ದಿನಗಳು ಮತ್ತು ಸಾಮಾನ್ಯ ಆಯವ್ಯಯ ಚರ್ಚೆಗೆ 5 ದಿನಗಳು ಮತ್ತು ಡಿಮ್ಯಾಂಡುಗಳ ಚರ್ಚೆಗೆ 16 ದಿನಗಳು ಹೀಗೆ ಒಟ್ಟು 21 ದಿನಗಳನ್ನು ಬಡ್ಜೆಟ್ ಚರ್ಚೆಗೂ ಮತ್ತು ವಾರದಲ್ಲಿ ಒಂದು ಶನಿವಾರ ನಾನಫಿಷಿಯಲ್ ಬಿಸಿನೆಸ್‌ಗೂ ಅವಕಾಶ ಮಾಡಿಕೊಟ್ಟರೆ ಸಾಕು.

ಶ್ರೀ ವೀರೇಂದ್ರ ಪಾಟೀಲ್.—ನನಗೆ ನಾನಫಿಷಿಯಲ್ ಬಿಜಿನೆಸ್ಸನ್ನು ಮೊಟಕು ಮಾಡಬೇಕೆಂಬ ಉದ್ದೇಶ ಇಲ್ಲ ಎಂಬುದನ್ನು ಖಚಿತಪಡಿಸಿದ್ದೇನೆ; ಬೇಕಿದ್ದರೆ ಅದರ ಬಗ್ಗೆ ಅಗ್ರಿಮೆಂಟ್ ಮಾಡಿಕೊಡುತ್ತೇನೆ. ಆದರೆ ನಮಗೆ ನೀವು ಮಾರ್ಚಿ 30ನೇ ತಾರೀಖಿನೊಳಗೆ ಬಡ್ಜೆಟ್ಟನ್ನು ಮುಗಿಸಿಕೊಟ್ಟರೆ ಸಾಕು. ಅದರಲ್ಲಿ ಯಾವ ಯಾವ ಡಿಮ್ಯಾಂಡಿಗೆ ಎಷ್ಟೆಷ್ಟು ಕಾಲಾವಕಾಶ ಇರಬೇಕೆಂಬುದನ್ನೆಲ್ಲಾ ತೀರ್ಮಾನ ಮಾಡಿಕೊಳ್ಳುವುದನ್ನು ನಿಮಗೇ ಬಿಟ್ಟುಕೊಡುತ್ತೇನೆ. ನಮಗೇನಿದ್ದರೂ ಮಾರ್ಚಿ 30ಕ್ಕೆ ಬಡ್ಜೆಟ್ ಪಾಸಾದರೆ ಆಯಿತು. ಅಷ್ಟು ವಿನಾ ನಾನು ಓಟಾನಕೌಂಟ್ ತೆಗೆದುಕೊಳ್ಳುವುದಕ್ಕೆ ಮಾತ್ರ ಎಂದು ಒಪ್ಪತಕ್ಕವನಲ್ಲ.

ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಈಗ ನಡೆಯುತ್ತಿರುವ ಚರ್ಚೆ ಬಹಳ ಪ್ರಾಮುಖ್ಯವಾದುದ್ದು ಇದರ ಚರ್ಚೆಗೆ ಸಾಕಷ್ಟು ಕಾಲಾವಕಾಶ ಇರಬೇಕೆಂಬುದು ನ್ಯಾಯವಾಗಿದೆ. ಇದು ಬಹಳ ಮಹತ್ತರವಾದ ವಿಷಯ, ಇಡೀ ದೇಶದ ಘನತೆಗೌರವಗಳಿಗೆ ಸಂಬಂಧಪಟ್ಟ ವಿಷಯ ಇದು.

ಈ ವಿಚಾರದಲ್ಲಿ ನಾವೆಲ್ಲರೂ ಒಂದು ಏಕಮುಖನಾದ ತೀರ್ಮಾನಕ್ಕೆ ಬರಬೇಕಾಗಿರುವುದರಿಂದ ಇದರ ಬಗ್ಗೆ ಗುದ್ದಾಡುವುದು ಬೇಡ. ಈ ವಿಚಾರದಲ್ಲಿ ನಾವುಗಳು ಇಲ್ಲಿ ಏನು ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆಂಬುದನ್ನು ದೇಶದ ಜನತೆ ಎದುರು ನೋಡುತ್ತ ಕುಳಿತಿದೆ. ಮುಖ್ಯ ಮಂತ್ರಿಗಳು ಇದರ ಚರ್ಚೆಗೆ ಈ ದಿವಸ ರಾತ್ರಿ 8 ಗಂಟೆಯವರೆಗೂ ಮತ್ತು ನಾಳೆ ಇಡೀ ದಿವಸವನ್ನು ಮೀಸಲಾಗಿಟ್ಟಿದ್ದಾರೆ, ಅದರಿಂದ ಬಹಳ ಒಳ್ಳೆಯದಾಯಿತು. ದೇಶಕ್ಕೆ ಸಂಬಂಧಿಸಿದ ಇಂಥ ಜಟಿಲ ಪ್ರಶ್ನೆಗಳುದ್ಭವಿಸಿದಾಗ ಪಾಶ್ಚಾತ್ಯ ರಾಜ್ಯಗಳಲ್ಲೂ ಕೂಡ ಶಾಸನ ಸಭೆಗಳನ್ನು ರಾತ್ರಿ 12 ಗಂಟೆಗಳವರೆಗೂ ನಡೆಸಿರುವುದನ್ನು ನಾನು ನೋಡಿದ್ದೇನೆ. ಅದ್ದರಿಂದ ಈ ದಿವಸ ರಾತ್ರಿ 8 ಗಂಟೆಗಳವರೆಗೂ ಅವಕಾಶವಿರುವುದರಿಂದ ಮಾತನಾಡತಕ್ಕವರು ಈ ದಿವಸ ಮಾತನಾಡಲಿ ಉಳಿದವರು ನಾಳೆ ಮಾತನಾಡಬಹುದು. ಇನ್ನು ಬಡ್ಜೆಟ್ ಚರ್ಚೆಯ ವಿಚಾರದಲ್ಲಿ ಬಿಜಿನೆಸ್ ಅಡ್ವೈಸರಿ ಕಮಿಟಿಯನ್ನು ಕರೆದು ಅದರಲ್ಲಿ ಅದನ್ನು ನಿಗದಿ ಮಾಡಬೇಕೆಂದು ಹೇಳುತ್ತೇನೆ.

6–30 P.M.

† ಶ್ರೀ ಹೆಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀಮಾನ್ ಗೋಪಾಲಗೌಡರು ಈ ಸಭೆಯ ಮುಂದೆ ಮಂಡಿಸಿರತಕ್ಕಂಥ ನಿರ್ಣಯವನ್ನು ಸಮರ್ಥಿಸುತ್ತಾ, ನಮ್ಮ ರಾಜ್ಯದ ಮುಂದೆ ಇರತಕ್ಕಂಥ ಬಹು ಮುಖ್ಯವಾದಂಥ ಈ ಒಂದು ಗಡಿ ಸಮಸ್ಯೆ ವಿಚಾರದ ಬಗ್ಗೆ ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ.

ಈ ರಾಜ್ಯದ ಗಡಿ ಸಮಸ್ಯೆಗೆ ಎಲ್ಲ ಹೊಣೆಯನ್ನು ಕಾಂಗ್ರೆಸ್ ಸರ್ಕಾರದವರೇ ವಹಿಸಬೇಕು. ಅದಲ್ಲದೆ ಈಗ ಇಂಡಿಕೇಟ್ ಮತ್ತು ಸಿಂಡಿಕೇಟ್ ಎಂದು ಏನು ಇಬ್ಭಾಗವಾಗಿದೆಯೋ ಅದು ಈ ಹೊಣೆಯನ್ನು ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯ ಇಲ್ಲ ಎಂದು ಹೇಳಬಯಸುತ್ತೇನೆ. 11–11–1956 ರಲ್ಲಿ ಸ್ಟೇಟ್ ರೀ ಆರ್ಗನೈಸೇಷನ್ ಆಕ್ಟ್ ಪಾಸು ಆದಮೇಲೆ ಆಗ ಅದಂಥ ನಿರ್ಣಯವನ್ನು ಕಡ್ಡಾಯವಾಗಿ ಕಾಂಗ್ರೆಸ್ ಸರ್ಕಾರ ಜಾರಿಗೆ ತರದೆ ಇದ್ದುದರಿಂದ ಅನೇಕ ಸಮಸ್ಯೆಗಳು ಮತ್ತು ಈ ಗಡಿ ಸಮಸ್ಯೆ ಉದ್ಭವವಾಗಿವೆ. ಈಗ ಮೈಸೂರು–ಮಹಾರಾಷ್ಟ್ರ, ಮೈಸೂರು–ಕೇರಳ, ಮೈಸೂರು–ತಮಿಳ್‌ನಾಡು ಈ ಸಮಸ್ಯೆ ಉದ್ಭವವಾಗಿ ಈ ರಾಜ್ಯಗಳನ್ನು ಗೊಂದಲಕ್ಕೆ ಹಾಕಿರುವುದಕ್ಕೆ ಮೂಲ ಕಾರಣ ಈ ಕಾಂಗ್ರೆಸ್ಸಿನವರೇ. ಆಗ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡುವಂಥ ಸಾಮರ್ಥ್ಯ ಶಕ್ತಿ ಇದ್ದ ಕಾಂಗ್ರೆಸ್ ಸರ್ಕಾರ ತನ್ನ ಜವಾಬ್ದಾರಿಯನ್ನು ಅರಿತುಕೊಂಡು ಅದಕ್ಕೆ ಶಕ್ತಿ ಇದ್ದರೂ ಯಾವುದೋ ಒಂದು ದಾಕ್ಷಿಣ್ಯಕ್ಕೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಇದ್ದುದಕ್ಕಾಗಿ ಈ ದಿನ ಅದು ಉಲ್ಬಣವಾಗಿ ಪರಿಣಮಿಸಿದೆ. ಈಗ ಪತ್ರಿಕೆಗಳ ವರದಿಯಂತೆ ನಮಗೆ ತಿಳಿದಿರುವ ಪ್ರಕಾರ ಈ ಮಹಾಜನ ಸಮಿತಿ ವರದಿ ಏನು ಇದೆ ಇದರ ನಿರ್ಧಾರವನ್ನು ಮುರಿದಿದ್ದಾರೆ ಎಂದು ಗೊತ್ತಾಗುತ್ತದೆ. ಈಗ ಜವಾಬ್ದಾರಿಸ್ಥಾನದಲ್ಲಿರತಕ್ಕಂಥ ರಾಷ್ಟ್ರದ ರಕ್ಷಣಾ ಮಂತ್ರಿಗಳು, ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಮತ್ತು ಈಗಿನ ರೈಲ್ವೆ ಮಂತ್ರಿಗಳು ಆದ ಶ್ರೀಮಾನ್ ನಂದಾರವರು ಈ ಗಡೀ ಸಮಸ್ಯೆಯಲ್ಲಿ ಗುರುತರವಾದ ಜವಾಬ್ದಾರಿಯನ್ನು ಹೊತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಈ ಒಂದು ಗಡೀ ಸಮಸ್ಯೆ ಕಾಂಗ್ರೆಸ್ಸಿನವರ ಒಂದು ಹಠಮಾರಿತನದಿಂದ, ದೊಂಬರಾಟದಿಂದ ರಾಷ್ಟ್ರದಲ್ಲಿರುವ ನಾಯಕರು ಮತ್ತು ಆ ರಾಜ್ಯದ ನಾಯಕರು ಒಂದು ವಿಷ ವೃಕ್ಷವನ್ನು ಬೆಳೆಸಿ, ಅದು ಕನ್ನಡ ನಾಡಿನಲ್ಲೂ ಆ ಒಂದು ವಿಷ ವೃಕ್ಷ ಬೆಳೆಯುವಂತೆ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಇದು ದುಃಖದ ವಿಷಯ. ಈ ಮಹಾಜನ್ ಸಮಿತಿ ಎಂದು ಮಾಡಿ ಆ ಸಮಿತಿಯ ತೀರ್ಪೇ ಕಡೆಯ ತೀರ್ಪು ಎಂದು ಮಾಡಿದರು. ಮತ್ತು 15–12–1967 ರಲ್ಲಿ ಎರಡು ಸದನಗಳಲ್ಲೂ ಮಹಾಜನ್ ಕಮಿಷನ್ ವರದಿ ಚರ್ಚೆಗೆ ಬಂದು ಅದು ಐತೀರ್ಪೆಂದು ಪರಿಗಣಿಸಬೇಕು ಮತ್ತು ಅದರಂತೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯಮಾಡಿ ಎಂದು ಪ್ರಧಾನ ಮಂತ್ರಿಗಳಿಗೆ ಕಳುಹಿಸಿಕೊಟ್ಟರು. ಈವೊತ್ತು ಇದು ವಿಷಾದನೀಯವಾದ ಸಂಗತಿಯಾಗಿದೆ. ಈರೀತಿ ಅತ್ಯುನ್ನತ ಸ್ಥಾನದಲ್ಲಿರತಕ್ಕಂಥ ಒಬ್ಬ ಜವಾಬ್ದಾರೀ ವ್ಯಕ್ತಿ ಈ ಎರಡು ಸದನಗಳಲ್ಲಿರುವ ರಾಜ್ಯದ 3 ಕೋಟಿ ಜನರ ಪ್ರತಿನಿಧಿಯಾಗಿ ಬಂದಿರುವ ಸದಸ್ಯರು ಮಾಡಿದಂಥ ನಿರ್ಣಯಕ್ಕೆ ಅವರು ಏನು ಮಾಡಿದ್ದಾರೆ ಎಂಬುದನ್ನು ರೀಆಕ್ಷನ್ ತೋರಿಸಬೇಕಾಗಿತ್ತು. ಅದು ಬಿಟ್ಟು ಕೇವಲ ಮೈಸೂರು ಸಂಸ್ಥಾನದಲ್ಲಿ ಆಡಳಿತ ನಡೆಸುತ್ತಾ ಇರತಕ್ಕಂಥಾ ಸರ್ಕಾರಕ್ಕೂ ಕೇಂದ್ರ ಸರ್ಕಾರದಲ್ಲಿ ನಡೆಸುತ್ತಾ ಇರತಕ್ಕಂಥ ಸರ್ಕಾರಕ್ಕೂ ಒಬ್ಬೊಬ್ಬರು ವೈಮನಸ್ಸಿನಿಂದ ಇದನ್ನೇ ಮೂಲಕಾರಣ ಮಾಡಿಕೊಂಡು ಇಡೀ ರಾಷ್ಟ್ರದ 3 ಕೋಟಿ ಜನರನ್ನು ಈರೀತಿ ಸಂಕಟಕ್ಕೆ ಸಿಕ್ಕಿಸುವ ವ್ಯವಸ್ಥೆಯಿಂದ ಮುಂದೆ ಇವರ ಭವಿಷ್ಯ ಉಲ್ಬಣಿಸಿ ಇವರೆಲ್ಲಾ ಅಂದರೆ ನಾಯಕರು ಕಟಕಟೆಯಲ್ಲಿ ನಿಲ್ಲಬೇಕಾಗುತ್ತದೆ. ಆದುದರಿಂದ ಇದರ ಬಗ್ಗೆ

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಒಂದು ತೀರ್ಮಾನವನ್ನು ಕೂಡಲೇ ಕೊಡಬೇಕು ಎಂದು ಹೇಳಬಯಸುತ್ತೇನೆ. ಈಗ ಪತ್ರಿಕೆಯಲ್ಲಿ ವರದಿಯಾಗಿರುವಂತೆ ಪ್ರಧಾನ ಮಂತ್ರಿಗಳು ಟೆಲಿಫೋನ್ ಮುಖಾಂತರ ಮುಖ್ಯ ಮಂತ್ರಿಗಳು ಡೆಲ್ಲಿಗೆ ಬರಬೇಕು ಎಂದು ಫೋನ್ ಮಾಡಿದರಂತೆ. ಅದಕ್ಕೆ ಉತ್ತರವಾಗಿ ಮುಖ್ಯಮಂತ್ರಿಗಳು ನಮಗೆ ಮೈಗೆ ಹುಷಾರಿಲ್ಲ ಈಗ ಬರುವುದಕ್ಕಾಗುವುದಿಲ್ಲ ಇನ್ನು 3—4 ದಿವಸ ಬಿಟ್ಟು ಬರಬೇಕು ಅಂದರೆ ಬರುತ್ತೇನೆ ಎಂದು ಹೇಳಿದರಂತೆ, ಇಂತಹ ಸಂದರ್ಭದಲ್ಲಿ ಅಷ್ಟು ಕಾಲವೂ ತಡೆಯಲಾರದೆ ಕೇಂದ್ರದಿಂದ ಇಬ್ಬರು ಮೆಸೆಂಜರ್‌ನ್ನು ಗರಿಷ್ಟ ಅಧಿಕಾರಿಗಳನ್ನು ಇಲ್ಲಿಗೆ ಕಳುಹಿಸಿ ಯಾವ ಸಹಿ ಹಾಕದೇ ಇರತಕ್ಕಂಥ ಪತ್ರಗಳನ್ನು ತೋರಿಸಿ ಬೆಳಗಾಂವನ್ನು ಕತ್ತರಿಸು ವಂತೆ ಇಂತಹ ಕ್ರಮಗಳನ್ನು ಕೈಗೊಳ್ಳುವಂತೆ ಈ ರಾಯಭಾರಿ ದೌತ್ಯವನ್ನು ಕಳುಹಿ ಸಿದರು. ಇದನ್ನು ನೋಡಿದರೆ ಈ ಮಂತ್ರಿ ಮಂಡಲಕ್ಕೆ, ಕರ್ನಾಟಕದ ಜನತೆಗೆ ಕೇಂದ್ರ ಸರ್ಕಾರ ಅಗೌರವ ತೋರಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಈ ರೀತಿ ಬಂದಂಥ ಅಧಿಕಾರಿಗಳ ವಿಷಯ ಪತ್ರಿಕೆಗಳಲ್ಲೂ ಇಲ್ಲ. ಹಾಗಿದ್ದರೆ ಪ್ರಧಾನ ಮಂತ್ರಿಗಳು ಕಾಗದ ಬರೆದು ಕಳುಹಿಸಬೇಕಾಗಿತ್ತು. ಆ ರೀತಿ ಮಾಡದೆ ಈ ಇಬ್ಬರು ಅಧಿಕಾರಿಗಳನ್ನು ಕಳುಹಿಸಿ ಕೊಟ್ಟು ಈ ರೀತಿ ಮಾಡಬೇಕು, ಇದು ನಮ್ಮ ಅಭಿಪ್ರಾಯವಲ್ಲ ಎಂದು ಹೇಳಿದರಂತೆ. ಹಾಗಾದರೆ ಇದು ಯಾರ ಅಭಿಪ್ರಾಯ ಎಂದು ಹೇಳುವುದಕ್ಕೆ ಯಾವುದಕ್ಕೂ ಅಧಿಕಾರದ ಮುದ್ರೆ ಇಲ್ಲ. ಇದಾದ ನಂತರ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರನ್ನು ಕರೆದು ಹೀಗಾಗಿದೆ ಎಂದು ಹೇಳಿದರು. ಇದಕ್ಕೆ ಏನಾದರೂ ಅಥಾರಿಟೇಟಿವ್ ಇನ್‌ಫರ್ಮೇಷನ್ ಬಂದಿದೆಯೋ ಅಥವಾ ಬಾಯಿಯಲ್ಲಿ ಹೇಳಿ ದರೋ ಅಥವಾ ಕಾಗದ ಕೊಟ್ಟಿದ್ದಾರೋ ಎಂದು ಕೇಳಿದೆವು. ಇದು ಕೇವಲ ಪ್ರೆಸ್ಟೀಜ್ ಬೇಸಿಸ್ ಮೇಲೆ ಬಿಡಿಸುವಂಥ ಸಮಸ್ಯೆ ಅಲ್ಲ. ಈ ಪ್ರಶ್ನೆ ಇಡೀ ಕರ್ಣಾಟಕದ ಜನತೆಯ ಭವಿಷ್ಯದ ಪ್ರಶ್ನೆ. ಈ ವಿಷಯದಲ್ಲಿ ರಾಜಕೀಯ ದೊಂಬರಾಟ ಮಾಡಿ ಟಗ್ ಆಫ್ ವಾರ್ ಮಾಡಿ ಕನ್ನಡ ನಾಡಿನ ಜನತೆಯ ಮುಂದಿನ ಒಂದು ಗಂಡಾಂತರವನ್ನು ತಂದು ಬಿಟ್ಟರಲ್ಲಾ ಎಂದು ದುಃಖವಾಗುತ್ತದೆ. ನಮ್ಮ ಕೋಪವನ್ನು ಉದ್ರೇಕಿಸುತ್ತದೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಪರಿಣಾಮ ವಾಗಿ ಬೆಳಗಾಂವನ್ನು ಅರ್ಧಭಾಗ ಕತ್ತರಿಸುವಂತೆ ಮಾಡಿರುವುದನ್ನು ನೋಡಿದರೆ ಪ್ರಪಂಚದಲ್ಲಿ ಯಾವ ರಾಜ್ಯಗಳ ವಿಭಜನೆಯಲ್ಲೂ ಈ ರೀತಿ ಆಗಿರುವುದನ್ನು ನಾವು ನೋಡಿಲ್ಲ. ಮಧ್ಯದಲ್ಲಿ ಹಾದು ಹೋಗುವ ರೈಲ್ವೇ ಲೈನನ್ನು ಎರಡು ರಾಜ್ಯದ ಗಡಿಯನ್ನಾಗಿ ಮಾಡಿಕೊಂಡು ಈ ರೀತಿ ಒಂದು ವಿಭಜನೆ ಮಾಡಬೇಕೆಂದು ಹೇಳುವುದಾದರೆ ಯಾವ ವಿವೇಚನೆ ಉಳ್ಳಂಥವರು ರಾಷ್ಟ್ರದ ಅಭ್ಯುದಯ ವನ್ನು ಗಮನದಲ್ಲಿಟ್ಟುಕೊಂಡಿರುವವರು, ಕೇಂದ್ರ ಸರ್ಕಾರಕ್ಕಾಗಲಿ, ಮಹಾರಾಷ್ಟ್ರ ಸರ್ಕಾರಕ್ಕಾ ಗಲಿ, ಮೈಸೂರು ಸರ್ಕಾರಕ್ಕಾಗಲಿ ಮುಂದೆ ಬರಬಹುದಾದ ಅನೇಕ ಕಷ್ಟಪರಂಪರೆಗಳಿಗೆ ಕಾರಣ ರಾಗುತ್ತಾರೆ. ಇದು ಸರ್ವಥಾ ಒಪ್ಪತಕ್ಕಂಥಾದ್ದಲ್ಲ. ಅದಕೋಸ್ಕರವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳಿಗೆ ತಿಳಿಸುವುದು ಈ ರೀತಿಯಲ್ಲಿ ಏನಾದರೂ ವಿಭಜನೆಯಾದರೆ ಎಲ್ಲಾ ಜನರನ್ನೂ ಕರೆಸಿ ವಿಧಾನಸೌಧದ ಹೊರಗೆ ಸೇರಿಸಿ ಗೊಂದಲಗಳನ್ನು ಮಾಡುವ ಪರಿಸ್ಥಿತಿ ಆಗುತ್ತದೆ ಎಂದು ಹೇಳುತ್ತೇನೆ. ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಈ ಒಂದು ಗೂಂಡಾ ಎಲಿಮೆಂಟ್ಸ್ ಏನು ಇದ್ದಾರೋ ಅವರು ಏನು ಕಿರುಕುಳ ಕೊಡುತ್ತಾ ಇದ್ದರೆ ಅದೇರೀತಿ ನಾವೂ ಕೂಡ ನಮ್ಮ ಕನ್ನಡ ನಾಡಿನಲ್ಲಿರತಕ್ಕಂಥ ಮಹಾರಾಷ್ಟ್ರೀಯರಿಗೆ ಕಿರುಕುಳ ಕೊಡಬೇಕಾದೀತು. ಕರ್ಣಾಟಕದಲ್ಲಿ ಮಹಾರಾಷ್ಟ್ರೀಯರು, ತಮಿಳರು ಮುಂತಾದ ಯಾವರೀತಿಯ ಭಾಷೆಯನ್ನಾಡುವ ಜನರಿದ್ದರೂ ಆ ಜನರನ್ನು ಕನ್ನಡಿಗರು ಎಂದು ಭಾವಿಸಿಕೊಂಡಿದ್ದೇವೆ. ಮಹಾರಾಷ್ಟ್ರದವರೂ ಕೂಡ ಅಲ್ಲಿನ ಜನರನ್ನು ಅವರ ಚೌಕಟ್ಟಿನಲ್ಲಿರುವಂಥ ಜನರನ್ನು ತಮ್ಮವರೇ ಎಂದು ತಿಳಿದು ಕೊಂಡು ವರ್ತಿಸಬೇಕು. ಅವರು ಸೌಜನ್ಯ ರೀತಿಯಲ್ಲಿ ವರ್ತಿಸಬೇಕು ಅದು ಬಿಟ್ಟು ರಸ್ತೆ ಗಳಲ್ಲಿ ಹೊಡೆದಾಡಿ, ಬಡಿದಾಟ ಮಾಡುವುದು ಪ್ರಜಾಪ್ರಭುತ್ವದ ಲಕ್ಷಣವಲ್ಲ ಎಂದು ನಮಗೆ ಅನಿಸುತ್ತದೆ. ಇದಕ್ಕೆ ಮೂಲ ಕಾರಣ ಕೇಂದ್ರ ಸರ್ಕಾರ ಅದರಲ್ಲೂ ಪ್ರಧಾನ ಮಂತ್ರಿಗಳು ಎಂದು ಹೇಳಿದರೆ ತಪ್ಪಾಗಲಾರದು. ಬಂಗಾಳದಲ್ಲೂ ಕೂಡ ಆಗುವ ಚಳುವಳಿ ನೋಡಿದರೆ ದೊಡ್ಡ ಗೊಂದಲವಾಗುವ ವ್ಯವಸ್ಥೆ ಮಾಡಿ ಕೇಂದ್ರ ಸರ್ಕಾರದವರು ಕಣ್ಣುಮುಚ್ಚಿ ಕೊಂಡು ಕೂತರು. ಹಿಂದೆ ಮಹಾರಾಷ್ಟ್ರದಲ್ಲಿರುವ ಕನ್ನಡಿಗರಿಗೆ ಆದಂಥ ಅನ್ಯಾಯವನ್ನು ಸ್ಪಷ್ಟ ವಾಗಿ ಈ ಸಭೆಯ ಗಮನಕ್ಕೆ ತಂದರು. ಅವರಿಗೆ ಒಂದು ರಕ್ಷಣೆಯನ್ನೂ ಕೊಡಲಿಲ್ಲ ನಮಗಿರುವ ಸೌಜನ್ಯತೆ ಅವರಿಗೂ ಇರಬೇಕು ಎಂದು ತಿಳಿದುಕೊಳ್ಳಬೇಕು. ಮೈಸೂರು ರಾಜ್ಯದಲ್ಲಿ ಕನ್ನಡ ನಾಡಿನಲ್ಲಿರುವ ಮಹಾರಾಷ್ಟ್ರೀಯರು ಈ ರಾಜ್ಯದಲ್ಲೇ ಇರಬೇಕು ಎಂದು ಹೇಳುತ್ತಿದ್ದಾರೆ. ಹೀಗೆ ಇಲ್ಲಿರುವ ಲಕ್ಷಾಂತರ ಜನ ಮರಾಠಿಗರು ಈ ರಾಜ್ಯದಲ್ಲೇ ಇರಬೇಕು ಎಂದು ಹೇಳುತ್ತಿದ್ದಾರೆ.

ನಾವು ಅಣ್ಣತಮ್ಮಂದಿರಂತೆ ಇಲ್ಲಿಯವರೆಗೂ ಅನುಸರಿಸಿಕೊಂಡು ಬಂದಿದ್ದೇವೆ. ಇದನ್ನೇ ಒಂದು ಇಷ್ಯೂ ಮಾಡಿಕೊಂಡು ಕೇವಲ ಮಹಾರಾಷ್ಟ್ರದವರ ಒತ್ತಡಕ್ಕೆ ಸಿಕ್ಕಿ ತೀರ್ಮಾನ ಮಾಡಿದರೆ ಇದರಿಂದ ಮುಂದೆ ಬಹಳ ಕೆಟ್ಟ ಪರಿಣಾಮವಾಗುತ್ತದೆ. ಈ ದೇಶದಲ್ಲಿ ಎಲ್ಲ ಕಡೆಯಿಂದಲೂ ಮುಂದೆ ಅಂದೋಲನ ಮಾಡುವ ಕಾಲ ಬರಬಹುದು. ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಶ್ರೀ ನಿಜಲಿಂಗಪ್ಪನವರಿಗೆ ವಿರೋಧ ಇದೆ ಎಂದು ಇಲ್ಲಿ ಒಂದು ರೀತಿಯ ಚದುರಂಗ ದಾಟ ಮಾಡಿ ಕನ್ನಡದ ಜನರನ್ನು ಕೆರಳಿಸಿದರೆ ಈಗಾಗಲೇ ನಮ್ಮ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜರವರು ಹೇಳಿದಂತೆ ಹಾಗೂ ಮಹಾರಾಷ್ಟ್ರದ ನಾಯಕ ಬಾಳ ಠಾಕರೆಯವರು ಮಾಡು ವಂತಹ ಉಗ್ರ ಚಳುವಳಿಗಳನ್ನು ಮಾಡಲು ಅವಕಾಶ ಕೊಟ್ಟಂತಾಗುತ್ತದೆ. ನಮ್ಮ ಕನ್ನಡ ರಾಜ್ಯದಲ್ಲಿರುವ ನೆಲವನ್ನು ಉಳಿಸಲು ಸರ್ವ ಪ್ರಯತ್ನವನ್ನು ನಾವೆಲ್ಲರೂ ಮಾಡಬೇಕು. ಇಲ್ಲಿಂದ ನಮ್ಮ ಭಾಗದ ಜಾಗಗಳು ಯಾವುದೋ ಹೋಗಬೇಕಾದ ಅಗತ್ಯ ಇಲ್ಲ. ಈಗ ಸೆಂಟ್ರಲ್ ಗವರ್ನ ಮೆಂಟಿನಲ್ಲಿ ನಡೆಯುತ್ತಿರುವುದು ಬರೀ ಒಂದು ನಾಟಕ. ಈ ನಾಟಕದಲ್ಲಿ ರಾಜಕೀಯ ದೊಂಬ ರಾಟವಾಡುತ್ತಿರುವಂತೆ ಭಾಸವಾಗುತ್ತಿದೆ. ಸೆಂಟ್ರಲ್ ಗವರ್ನಮೆಂಟಿನವರು ಇದಕ್ಕೆ ಒಂದು ಸಬ್ ಕಮಿಟಿ ಮಾಡಲಾಗಿದೆ ಎಂದು ಹೇಳಿದರು. ಇದರಲ್ಲಿ ಇದ್ದ ಮೆಂಬರುಗಳು ಯಾರೆಂದರೆ ಶ್ರೀ ಚವಾನ್‌ರವರು ಒಬ್ಬರು. ಇದು ಹೇಗಿದೆ ಎಂದರೆ Ceaser's wife should be above suspicion ಎಂದು ಹೇಳುವಂತೆ ಇದರಲ್ಲಿ ಅಪರಾಧ ಮಾಡಿರುವವರನ್ನೇ ಸದಸ್ಯರಾಗಿ ಮಾಡಿದರೆ ಇದರಿಂದ ಬರುವ ತೀರ್ಪು ಯಾವ ರೀತಿ ಇರುತ್ತದೆ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗು ತ್ತದೆ. ಮಹಾರಾಷ್ಟ್ರದ ಗಡಿ ಸಮಸ್ಯೆಯಲ್ಲಿ ಇವರೇ ಮಹಾಪರಾಧ ಮಾಡಿದ್ದಾರೆ ಎನ್ನುವುದು ಎಲ್ಲ ರಿಗೂ ಗೊತ್ತಿರುವ ವಿಚಾರ. ಇವರೇ ಮಹಜನ್ ಕಮಿಷನ್ ಮಾಡಬೇಕೆಂದು ಮೊದಲಿಗೆ ಪ್ರಯತ್ನ ಮಾಡಿದವರು. ಇದರ ಜೊತೆಗೆ ಈ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಫಕ್ರುದ್ದೀನ್ ಮಹಮ್ಮದ್ ಜಗಜೀವನ ರಾಂ ಹಾಗೂ ಅವರಿಗೆ ಬೇಕಾದ ಸ್ವರಣ್‌ಸಿಂಗ್ ಇಂತಹವರೇ ಇದ್ದ ಒಂದು ಕಮಿಟಿಗೆ ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾ ಗಾಂಧಿಯವರು ಅಧ್ಯಕ್ಷರಾಗಿದ್ದಾರೆ, ಇವರುಗಳೆಲ್ಲಾ ಈ ಸರ್ಕಾರದ ಮುಖ್ಯಮಂತ್ರಿಗಳಿಗೆ ವಿರೋಧವಾದವರು ಎಂದು ಇವರ ಮೇಲಿನ ದ್ವೇಷಕ್ಕೆ ಕೇಂದ್ರ ಸರಕಾರ ತೀರ್ಪು ಕೊಡುವುದಾದರೆ ಈ ದೇಶದಲ್ಲಿ ಮುಂದೆ ಕೇಂದ್ರ ಸರಕಾರ ಉಳಿಯು ವಂತಿಲ್ಲ ಮತ್ತು ಇದರಿಂದ ಇನ್ನೂ ಅನೇಕ ಸಮಸ್ಯೆಗಳು ಉದ್ಭವವಾಗುತ್ತವೆ. ಇದು ಬರೀ ನಿಜಲಿಂಗಪ್ಪನವರು ಹಾಗೂ ಶ್ರೀ ವೀರೇಂದ್ರ ಪಾಟೀಲ್‌ರ ಸಮಸ್ಯೆಯಲ್ಲ. ಇಡೀ ಕನ್ನಡನಾಡಿನ ಜನತೆಯ ಸಮಸ್ಯೆ ಎನ್ನುವುದು ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇದರ ಬಗ್ಗೆ ಹಿಂದೆ ಮಹಾಜನ್ ಕಮಿಟಿ ಮಾಡುವಾಗಲೂ ಕೂಡ ಈ ಸರಕಾರ ವಿರೋಧವಾಗಿದ್ದರೂ ಮಹರಾಷ್ಟ್ರದವರ ಒತ್ತಾಯಕ್ಕೆ ಬಲಿಯಾಗಿ ಕೇಂದ್ರದವರು ಈ ಕಮಿಷನ್ನನ್ನು ಮಾಡಿ ಅವರೂ ಕೂಡ ಇದರ ತೀರ್ಪಿಗೆ ಬದ್ಧರಾಗಿ ರುತ್ತೇವೆ ಎಂದು ಹೇಳಿ ಒಪ್ಪಿಕೊಂಡಿದ್ದರು. ಈಗ ಅವರೇ ಇದಕ್ಕೆ ವಿರೋಧ ಮಾಡುವುದಕ್ಕೆ ಹೋದರೆ ಮುಂದೆ ಇದರಿಂದ ಬಹಳ ದುಷ್ಪರಿಣಾಮಗಳುಂಟಾಗುತ್ತವೆ. ಇದರ ಬಗ್ಗೆ ಇದೇ ಅಸೆಂಬ್ಲಿಯಲ್ಲಿ ಇಂತಹ ಒಂದು ರೆಸಲ್ಯೂಷನ್ ತಂದು 15-12-1967 ರಲ್ಲಿ ಒಮ್ಮತದಿಂದ ಪಾಸು ಮಾಡಿ ಅದರಲ್ಲಿ ಮಹಜನ್ ಸಮಿತಿಯ ವರದಿಯಲ್ಲಿ ಏನು ಹೇಳಿದ್ದಾರೋ ಅದನ್ನು ಸಂಪೂರ್ಣವಾಗಿ ಒಪ್ಪಲೇಬೇಕು ಎಂದು ಕೇಂದ್ರದವರಿಗೆ ತಿಳಿಸಲಾಗಿತ್ತು. ಈ ಮಹಜನ್ ವರದಿಯಿಂದ ನಮ್ಮ ದೇಶಕ್ಕೆ ಹೆಚ್ಚು ಪ್ರಯೋಜನವಾಗುವುದಿಲ್ಲ ಎಂದು ತಿಳಿದಿದ್ದರೂ ಮುಂದೆ ಇದರ ಬಗ್ಗೆ ಪದೇ ಪದೇ ಪ್ರಶ್ನೆ ಎತ್ತಬಾರದು ಎಂದು ಇದನ್ನು ಎಲ್ಲರೂ ಒಪ್ಪಲೇಬೇಕು ಎಂದು ಸೂಚನೆಗಳನ್ನು ಕೂಡ ಮಾಡ ಲಾಗಿತ್ತು ಮತ್ತು ಇದನ್ನು ಇನ್ನು ಮುಂದುವರಿಸಿಕೊಂಡು ಹೋಗಬಾರದು ಎಂದೂ ಮಾಡಲಾಗಿತ್ತು. ಆದರೆ ಮಹಜನ್ ವರದಿ ಬಂದಕೂಡಲೇ ಮಹಾರಾಷ್ಟ್ರದವರು ತಮಗೆ ಅನುಕೂಲವಾಗಿ ಬರಲಿಲ್ಲ ಎಂದು ಇಲ್ಲದ ಗೊಂದಲಗಳಿಗೆ ಕಾರಣವಾಗುತ್ತಿದ್ದಾರೆ ಮತ್ತು ಮಹಾರಾಷ್ಟ್ರದವರಿಗೆ ಬೆಳಗಾಂ ಸಿಗಲಿಲ್ಲ ಎಂದು ಈ ಸಮಿತಿಯ ವರದಿಯನ್ನು ಒಪ್ಪಲು ಅವಕಾಶ ಕೊಡದೆ ಇಲ್ಲಿಯವರೆಗೂ ತಡಮಾ ತ್ತಾ ಬಂದರು. ಮಹಾರಾಷ್ಟ್ರದ ಗಡಿ ಸಮಸ್ಯೆ ಒಂದೇ ಅಲ್ಲ ನಮಗೆ ಇರುವುದು. ತಾಳವಾಡಿ ಗಡಿ ಸಮಸ್ಯೆ ಇದೆ. ಕೇರಳದಲ್ಲಿರುವ ಕಾಸರಗೋಡಿನ ಸಮಸ್ಯೆ ಇದೆ. ಆದರೆ ಈಗ ತಿಳಿದಿರುವಂತೆ ಕೇಂದ್ರದವರು ಅನುಸರಿಸುತ್ತಿರುವ ಧೋರಣೆಯನ್ನು ನೋಡಿ ಯಾವ ಕನ್ನಡಿಗನೂ ಸಹಿಸುವಂತಿಲ್ಲ. ಇದು ಪ್ರಜಾಪ್ರಭುತ್ವಕ್ಕೆ ಸರಿಯಾದ ಮಾರ್ಗವಲ್ಲ. ಕೇಂದ್ರ ಸರಕಾರದವರಲ್ಲಿ ಶಕ್ತಿ ಇದೆ ಎಂದು ಇಂತಹ ಒಂದು ಧೋರಣೆಯನ್ನು ಅವರು ತಾಳುವುದಾದರೆ ಮುಂದೆ ಇಲ್ಲಿರುವ ಎಲ್ಲ ಕನ್ನಡಿಗರೂ ಕತ್ತಿ ಗುರಾಣಿಗಳನ್ನು ಹಿಡಿದುಕೊಂಡೇ ಅವರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳ ಬೇಕಾಗಿ ಬರುತ್ತದೆ. ಈ ಎಲ್ಲ ದೃಷ್ಟಿಗಳಿಂದಲೂ ಇಂತಹ ಒಂದು ಸಮಸ್ಯೆಯನ್ನು ಸರಿಯಾಗಿ ಪರಿಶೀಲಿಸಬೇಕು ಎಂದು ಮಾನ್ಯ ಸದಸ್ಯರಾದ ಶ್ರೀಮಾನ್ ಗೋಪಾಲಗೌಡರು ಒಂದು ನಿರ್ಣಯವನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಇದರಂತೆ ಹಿಂದೆ ಈ ಅಸೆಂಬ್ಲಿಯಲ್ಲಿ

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಏನು ತೀರ್ಮಾನ ಮಾಡಲಾಗಿದೆಯೋ ಅದಕ್ಕೆ ಕೇಂದ್ರ ಸರಕಾರ ಮನ್ನಣೆ ಕೊಡಲೇಬೇಕು. ಇದು ಈ ದೇಶದ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲರ ಹಾಗೂ ಕೇಂದ್ರದ ಶ್ರೀಮತಿ ಇಂದಿರಾ ಗಾಂಧಿಯವರ, ಇವರಿಬ್ಬರ ಸಮಸ್ಯೆ ಅಲ್ಲ ಇದು ರಾಷ್ಟ್ರದ ಸಮಸ್ಯೆ, ಬರೀ ಒಬ್ಬ ನಾಯಕರ ಪ್ರಶ್ನೆಯಲ್ಲ. ಇದರಲ್ಲಿ ಎಲ್ಲ ಪಕ್ಷಗಳ ನಾಯಕರೂ ಸೇರಿಕೊಂಡು ಕೇಂದ್ರ ಸರಕಾರಕ್ಕೆ ಇಲ್ಲಿಂದ ಒಂದು ನಿರ್ಣಯ ಮಾಡಿ ಹಿಂದೆ ಕಳುಹಿಸಿಕೊಟ್ಟಿದ್ದರು. ಆದರೆ ಇದುವರೆಗೆ ಕೇಂದ್ರದವರು ಇದರ ಬಗ್ಗೆ ಯಾವ ತೀರ್ಮಾನವನ್ನೂ ಕೈಗೊಳ್ಳದಿರುವುದರಿಂದ ಇಂದು ಇಂತಹ ಒಂದು ಪರಿಸ್ಥಿತಿ ಬಂದು ಒದಗಿದೆ. ಇದಕ್ಕಾಗಿ ಕೇಂದ್ರ ಸರಕಾರದವರು ಸರಿಯಾದ ಒಂದು ತೀರ್ಮಾನ ಮಾಡದೇ ಇದ್ದರೆ ಮಹಾರಾಷ್ಟ್ರದ ಶಿವಸೇನೆ ನಾಯಕರು ಒಂದು ಡೆಡ್ ಲೈನ್ ಹಾಕಿ ಹೇಳುತ್ತಿದ್ದಾರೆ, ಬರುವ ಮಾರ್ಚಿ ತಿಂಗಳು 2 ನೇ ತಾರೀಖಿನೊಳಗೆ ಈ ಸಮಸ್ಯೆಯನ್ನು ಪರಿಹರಿಸದೇ ಇದ್ದರೆ ನಾವು ಮಹಾರಾಷ್ಟ್ರದಲ್ಲಿ ಬೊಂಬಾಯಿ ಬಂದ್ ಆಚರಿಸುತ್ತೇವೆ ಮತ್ತು ಒಂದು ದೊಡ್ಡ ಆಂದೋಲನ ಮಾಡುತ್ತೇವೆ ಎಂದು ಹೇಳಲು ಹೊರಟಿದ್ದಾರೆ ಮತ್ತು ಮಹಾರಾಷ್ಟ್ರದ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಿಗೂ ಸೂಚನೆಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ಮಹಾರಾಷ್ಟ್ರದವರು ಕೇಂದ್ರದವರಮೇಲೆ ಒತ್ತಡ ತಂದು ಅವರ ಬೇಡಿಕೆಗಳನ್ನು ಈಡೇರಿಸುವಂತಾದರೆ, ಮುಂದೆ ಇದರಿಂದ ಬಹಳ ಕೆಟ್ಟ ಪರಿಣಾಮಗಳು ಬರಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇದು ಅಲ್ಲದೆ ಈಗಾಗಲೇ ಇದರ ಬಗ್ಗೆ ಕೇಂದ್ರದವರು ಒಂದು ತೀರ್ಮಾನ ತೆಗೆದುಕೊಂಡು ಒಂದು ಬಿಲ್ಲನ್ನು ಕೂಡ ಮಾಡಿ ಪಾರ್ಲಿಮೆಂಟ್‌ನಲ್ಲಿ ತರುವವರಾಗಿದ್ದಾರೆ ಎಂದು ಕೇಳುತ್ತೇವೆ. ಇದರಿಂದ ಮೈಸೂರು ಮಹಾರಾಷ್ಟ್ರಗಳ ಗಡಿ ಸಮಸ್ಯೆ ಬಗೆಹರಿಯುತ್ತದೆ ಎಂದು ಕೇಂದ್ರದವರು ತಿಳಿದರೆ ಅದು ಬಹಳ ತಪ್ಪಾಗುತ್ತದೆ. ಇಂದು ಕೇಂದ್ರದಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗಿರಬಹುದು ಮತ್ತು ಇಂದು ಇರುವ ಆಡಳಿತ ಪಕ್ಷಕ್ಕೆ ನಮ್ಮ ಸರಕಾರ ವಿರೋಧವಾಗಿದೆ ಎಂದು ಈ ಸಮಸ್ಯೆ ಬಗ್ಗೆ ತೀರ್ಮಾನ ಕೈಗೊಳ್ಳುವುದಾದರೆ ಸಿಂಡಿಕೇಟು ಹಾಗೂ ಇಂಡಿಕೇಟು ಇವರ ಜಗಳದಲ್ಲಿ ದೇಶದ ಜನರಿಗೆ ಇಲ್ಲದ ತೊಂದರೆಗಳಾಗುತ್ತವೆ. ಇದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ. ಮತ್ತು ಇಂಡಿಕೇಟು ಪಕ್ಷದಲ್ಲಿರುವ ಇಂದಿರಾ ಗಾಂಧಿಯವರು ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಪುನಃ ಹಿಂದೆ ಇದ್ದ ಕಾಂಗ್ರೆಸ್ಸು ಪಕ್ಷಕ್ಕೆ ಬರುವುದಾದರೆ ಅವರನ್ನೂ ಸ್ವಾಗತಿಸುತ್ತೇವೆ ಎಂದು ಒಂದು ಕಡೆ ಶ್ರೀ ನಿಜಲಿಂಗಪ್ಪನವರು ಹೇಳಿದ್ದಾರೆ. ಇವೊತ್ತು ಒಡಕಿನಿಂದ ಎರಡು ಪಕ್ಷಗಳಾಗಿರುವುದು ಮುಂದೆ ಇವರು ಒಂದಾಗಲೂಬಹುದು. ಅದನ್ನು ಈಗಲೇ ಯಾರೂ ಹೇಳುವುದಕ್ಕಾಗುವುದಿಲ್ಲ. ಯಾವ ಪಕ್ಷವೇ ಆಗಲೀ ಅದರ ಸಂಕುಚಿತ ಭಾವನೆಗಳನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಇವೊತ್ತು ಇಂದಿರಾ ಗಾಂಧಿಯವರು ಕೇಂದ್ರದಲ್ಲಿ ಪ್ರಧಾನ ಮಂತ್ರಿಯಾಗಿದ್ದಾರೆ ಎಂದು ಮತ್ತು ಇಲ್ಲಿರುವ ಕಾಂಗ್ರೆಸ್ಸು ಪಕ್ಷ ಅವರಿಗೆ ವಿರೋಧವಾಗಿದೆ ಎಂದು ರಾಷ್ಟ್ರಕ್ಕೆ ವಿರೋಧವಾದ ತೀರ್ಮಾನವನ್ನು ಕೊಡಬೇಕೆಂದು ಅವರು ತಮ್ಮ ಧೋರಣೆ ಇಡುವುದಾದರೆ ಮುಂದೆ ಇಲ್ಲಿನ ಜನರ ಆಕ್ರೋಶಗಳಿಗೆ ಮತ್ತು ಇಲ್ಲದ ಗೊಂದಲಗಳಿಗೆ ಅವರೇ ಕಾರಣರಾಗುತ್ತಾರೆ. ಇದು ಒಂದು ದೊಡ್ಡ ರಾಷ್ಟ್ರದ ಸಮಸ್ಯೆ. ಈ ಸಮಸ್ಯೆಯನ್ನು ಪರಿಹಾರ ಮಾಡುವಾಗ ಈ ಸಂದರ್ಭದಲ್ಲಿ ಎಲ್ಲರಿಗೂ ಒಪ್ಪುವಂತೆ ಪರಿಹಾರ ಮಾಡಬೇಕು. ಇದೇ ಬಾರ್ಡರಿನ ಬಗ್ಗೆ ಈಚೆಗೆ ಪಾರ್ಲಿಮೆಂಟಿನಲ್ಲಿ ನಮ್ಮ ಸದಸ್ಯರಾದ ಶ್ರೀ ಹನುಮಂತಯ್ಯನವರು ಮತ್ತಿತರರು ಮಾತನಾಡುವಾಗ ಮಹಾರಾಷ್ಟ್ರದವರು ಇಂದು ಬೆಳಗಾಂ ಬೇಕು ಎಂದು ಕೇಳುತ್ತಾರೆ, ನಾಳೆ ಬೇರೆ ಒಂದು ರಾಜ್ಯ ಬೇಕೆಂದು ಕೇಳುತ್ತಾರೆ. ಹೀಗೆ ಮಹಾರಾಷ್ಟ್ರದವರ ದಾಹ ಹೆಚ್ಚುತ್ತಾ ಹೋಗುತ್ತದೆ. ಇದಕ್ಕೆ ಅವಕಾಶ ಕೊಡಬಾರದು ಎಂದು ಕೇಂದ್ರದಲ್ಲಿರುವ ನಮ್ಮ ರಾಜ್ಯದ ಎಲ್ಲ ಎಂ.ಪಿ. ಗಳು ಒಂದು ಒಳ್ಳೆಯ ನಿಲುವನ್ನು ತಾಳಿ ನಮ್ಮ ದೇಶವನ್ನು ಕಾಪಾಡಬೇಕೆಂದು ಕೇಂದ್ರದವರಲ್ಲಿ ಒತ್ತಾಯ ಮಾಡುತ್ತಿರುವುದು ಬಹಳ ಸಂತೋಷವಾಗಿದೆ. ಎಲ್ಲರೂ ಒಮ್ಮತದಿಂದ ಇಂದು ಒತ್ತಾಯ ಮಾಡುತ್ತಿರುವುದು ಬಹಳ ಸ್ವಾಗತಾರ್ಹವಾದ ವಿಷಯ. ಪ್ರಧಾನಮಂತ್ರಿಗಳಿಗೂ ಕೂಡ ಅವರ ನಿಲುವನ್ನು ಸ್ಪಷ್ಟಪಡಿಸಿದ್ದಾರೆ ಎಂದು ಕೇಳುತ್ತೇವೆ. ಇದಕ್ಕಾಗಿ ನಾನು ಈ ಸಭೆಯ ಮೂಲಕ ನಮ್ಮ ರಾಜ್ಯದ ಎಲ್ಲ ಎಂ.ಪಿ.ಗಳಿಗೂ ನಮ್ಮ ರಾಜ್ಯದ ಕನ್ನಡ ಜನತೆಯ ಪರವಾಗಿ ಅವರನ್ನು ಹೃತ್ಪೂರ್ವಕವಾಗಿ ಧನ್ಯವಾದಗಳನ್ನು ಅರ್ಪಿಸಬಯಸುತ್ತೇನೆ. ಇದು ಯಾವ ಪಕ್ಷಕ್ಕೂ ಸೇರಿದ ಪ್ರಶ್ನೆಯಲ್ಲ. ಇದನ್ನು ಪಕ್ಷಾತೀತವಾಗಿ ಪರಿಹರಿಸಬೇಕು ಮತ್ತು ಇದಕ್ಕಾಗಿ ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕಾಗಿದೆ. ಇದರಲ್ಲಿ ಗೂಂಡಾಗಿರಿ ಮಾಡುವುದು ಸರಿಯಲ್ಲ. ಇದರಲ್ಲಿ ನಿಜಲಿಂಗಪ್ಪನವರಿಗೂ ಇಂದಿರಾ ಗಾಂಧಿಯವರಿಗೂ ಹೋರಾಟವಾಗುತ್ತಿದೆ ಎಂದು ರಾಜ್ಯಕ್ಕೆ ವಿರೋಧವಾದ ಒಂದು ತೀರ್ಮಾನವನ್ನು ಕೇಂದ್ರ ತೆಗೆದುಕೊಂಡರೆ ಆಗ ಇಲ್ಲಿರುವ ಕನ್ನಡದ ಜನರು ರೊಚ್ಚಿಗೆದ್ದು ಮುಂದೆ

ಕತ್ತಿ ಗುಂಡು ತೆಗೆದುಕೊಂಡು ಎದುರಿಸಬೇಕಾಗುವ ಪರಿಸ್ಥಿತಿ ಬರುತ್ತದೆ. ಆದುದರಿಂದ ಈ ಸಭೆಯಿಂದ ಒಮ್ಮತವಾಗಿ ಕಳುಹಿಸಿರುವ ರೆಸಲ್ಯೂಷನ್ನನ್ನು ಕೇಂದ್ರದವರು ಮಾನ್ಯಮಾಡುವ ಜವಾಬುದಾರಿ ಅವರಮೇಲೆ ಇದೆ. ಮಹಾರಾಷ್ಟ್ರದ ನಾಯಕರು ಬರುವ ಮಾರ್ಚಿ ತಿಂಗಳು ಎರಡನೇ ತಾರೀಖಿನೊಳಗೆ ಒಂದು ತೀರ್ಮಾನ ತೆಗೆದುಕೊಳ್ಳಲೇಬೇಕು ಎಂದು ಹೇಳುವುದು ಪ್ರಜಾಪ್ರಭುತ್ವದಲ್ಲಿ ಇದು ಸರ್ವಾಧಿಕಾರಿ ಶಾಹಿ ಧೋರಣೆ ಎನ್ನುವುದನ್ನು ತೋರಿಸುತ್ತದೆ. ಇದು ಕೇವಲ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ವಿಚಾರವಲ್ಲ ಎಂಬುದನ್ನು ಕೇರಳಾ, ಮದ್ರಾಸ್ ಮತ್ತು ಆಂಧ್ರದವರು ತಿಳಿದುಕೊಳ್ಳಬೇಕು. ನಮ್ಮ ಅಕ್ಕಪಕ್ಕದ ರಾಜ್ಯಗಳಿಂದ ಆರಿಸಿ ಹೋಗಿರುವಂತಹ ಎಂ.ಪಿ. ಗಳು ಈಗ ಕೇಂದ್ರ ಸರ್ಕಾರದವರು ಮಾಡುತ್ತಿರುವುದು ಸರಿ ಎಂದು ಸುಮ್ಮನೆ ಕೂತರೆ ನಾಳೆ ಅವರ ಮೇಲೂ ಕೂಡ ಕೇಂದ್ರದವರು ಕತ್ತಿ ಬೀಸಬಹುದು. ಇದು ಕೇವಲ ಚದುರಂಗದಾಟವಲ್ಲ. ನಮ್ಮ ಅಕ್ಕಪಕ್ಕದ ರಾಜ್ಯದವರು ಮತ್ತು ಬೇರೆ ರಾಜ್ಯದವರು ಈ ಗಡಿ ವಿಚಾರದಲ್ಲಿ ಸಿಂಪತಿ ತೋರಿಸಬೇಕು. ಇಂತಹ ಒಂದು ಕೆಟ್ಟ ನಿರ್ಣಯವನ್ನು ಕೇಂದ್ರದವರು ಪಾರ್ಲಿಮೆಂಟ್‌ನಲ್ಲಿ ಮಂಡಿಸುವುದಕ್ಕೆ ಕೇಂದ್ರದಲ್ಲಿರುವ ಎಲ್ಲಾ ಎಂ. ಪಿ. ಗಳು ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಆ ರೀತಿ ಏನಾದರು ಮಾಡಿದರೆ ನಾಳೆ ಅವರ ಮೇಲೂ ಕೂಡ ಇದೇ ಪರಿಣಾಮ ಉಂಟಾಗಬಹುದೆಂಬ ಎಚ್ಚರಿಕೆಯನ್ನು ಅವರಿಗೆ ಕೊಡುತ್ತಿದ್ದೇನೆ. ಇವತ್ತಿನ ದಿವಸ ಮೈಸೂರು ಮತ್ತು ಮಹಾರಾಷ್ಟ್ರದ ಗಡಿ ಪ್ರಶ್ನೆಗೆ ಸಂಬಂಧಪಟ್ಟಂತೆ ಕೇಂದ್ರಸರ್ಕಾರದವರು ಮಹಾರಾಷ್ಟ್ರದ ಪರವಾಗಿ ತೀರ್ಮಾನ ಕೈಕೊಳ್ಳಬೇಕೆಂದು ಏನು ಹೊರಟಿದ್ದಾರೆ ಅದನ್ನು ಪ್ರಜಾಪ್ರಭುತ್ವದ ರೀತಿಯಲ್ಲಾಗಲೀ, ಕಾನೂನಿನ ರೀತಿಯಿಂದಾಗಲೀ ಬಿಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಂಬ ಸಮಸ್ಯೆ ನಮ್ಮನ್ನು ಕಾಡಿಸುತ್ತಿದೆ. ಬ್ರೂಟಲ್ ಮೆಜಾರಿಟಿಯಿಂದ ಈ ಸಮಸ್ಯೆಯನ್ನು ಏನಾದರೂ ಕೇಂದ್ರ ಸರ್ಕಾರದವರು ಮಹಾರಾಷ್ಟ್ರದವರ ಪರವಾಗಿ ಬಗೆಹರಿಸಿದರೆ ಅದು ಇಡೀ ದೇಶಕ್ಕೆ ಮತ್ತು ನಮ್ಮ ಇಡೀ ರಾಜ್ಯಕ್ಕೆ ಶಾಪವಾದೀತು ಎಂದು ಹೇಳುತ್ತೇನೆ. ಶ್ರೀಮಾನ್ ಗೋಪಾಲಗೌಡರು ಈಗ ಏನು ಒಂದು ನಿರ್ಣಯ ತಂದಿದ್ದಾರೆ ಅದು ಸರ್ವಸಮ್ಮತವಾಗಿದೆ ಮತ್ತು ಸಾಧುವಾಗಿದೆ. ಇದು ಕೇವಲ ವೀರೇಂದ್ರಪಾಟೀಲರ ಸರ್ಕಾರದ ಪ್ರಶ್ನೆಯಾಗಿಲ್ಲ. ಇದು ಕನ್ನಡ ನಾಡಿನ ಜನರ ಪ್ರಶ್ನೆಯಾಗಿದೆ. ಈ ಗಡಿ ಪ್ರಶ್ನೆ ಒನ್ಸ್ ಫಾರ್ ಆಲ್ ತೀರ್ಮಾನವಾಗುವುದು ಒಳ್ಳೆಯದು. ಅದಕ್ಕಾಗಿ ನಾನು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರನ್ನು ಬೇಡಿಕೊಳ್ಳುವುದೇನೆಂದರೆ ಮೊದಲೇ ಎಲ್ಲರೂ ಒಪ್ಪಿಕೊಂಡಿರುವಂತೆ ಮಹಾಜನ್ ವರದಿಯನ್ನು ಒಪ್ಪಿಕೊಳ್ಳಿ ಎಂಬುದಾಗಿ. ಅದಕ್ಕೆ ಎಲ್ಲರೂ ಬದ್ಧರಾಗಿರಬೇಕು. ಅದೇ ಆಖೈರು ತೀರ್ಮಾನ. ಕೇವಲ ರಾಜಕೀಯ ಕಾರಣಕ್ಕೋಸ್ಕರ ಕರ್ನಾಟಕ ಗಡಿಯಲ್ಲಿರುವ ಲಕ್ಷಾಂತರ ಕನ್ನಡಿಗರನ್ನು ಕಷ್ಟಕ್ಕೆ ಗುರಿಪಡಿಸುವುದು ಸರಿಯಲ್ಲ. ಆದಕಾರಣ ಈಗ ಶ್ರೀಮಾನ್ ಗೋಪಾಲಗೌಡರು ಏನು ಒಂದು ನಿರ್ಣಯ ತಂದಿದ್ದಾರೆ ಅದನ್ನು ಎಲ್ಲರೂ ಸರ್ವಾನುಮತದಿಂದ ಅಂಗೀಕರಿಸಬೇಕೆಂದು ಪ್ರಾರ್ಥನೆ ಮಾಡಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ಪುಟ್ಟಸ್ವಾಮಿ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಗೋಪಾಲಗೌಡರು ತಂದಿರುವ ನಿರ್ಣಯವನ್ನು ಮತ್ತು ಶ್ರೀಮಾನ್ ವಿ. ಎನ್. ಪಾಟೀಲರು ತಂದಿರುವ ನಿರ್ಣಯವನ್ನು ಪುಷ್ಟೀಕರಿಸುತ್ತಾ ಮತ್ತು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕೆಂದು ಮನಸ್ಸು ಮಾಡಿದ್ದೇನೆ. ಕೇಂದ್ರ ಸರ್ಕಾರದಲ್ಲಿರುವ ಪ್ರಧಾನಿ ಇಂದಿರಾಗಾಂಧಿಯವರು ತಮ್ಮ ಪದವಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಮತ್ತು ತಮ್ಮ ಸರ್ಕಾರವನ್ನು ಸ್ಥಿರವಾಗಿ ಉಳಿಸಿಕೊಳ್ಳುವುದಕ್ಕಾಗಿ ಮೈಸೂರು ಸರ್ಕಾರವೇ ಹೋಗಲೀ ಅಥವಾ ಬೇರೆ ಯಾವ ಸರ್ಕಾರವೇ ಹೋಗಲಿ, ಮಹಾರಾಷ್ಟ್ರದ ಜನರಿಗೆ ಅನುಕೂಲ ಮಾಡಿಕೊಡುವುದಕ್ಕೆ ಹೊರಟ್ಟಿದ್ದಾರೆ. ಮಹಾರಾಷ್ಟ್ರದವರು ತಮಗೆ ಸಪೋರ್ಟ್ ಮಾಡುತ್ತಾರೆಂಬ ಒಂದೇ ಕಾರಣದಿಂದ ಅವರು ಕೇಳಿದಂತಹ ಭಾಗಗಳನ್ನು ಕೊಡುವುದಕ್ಕೆ ಶೀಘ್ರಶೀಘ್ರವಾಗಿ ಕ್ರಮಗಳನ್ನು ಕೈಕೊಳ್ಳುವುದಕ್ಕೆ ಹೊರಟಿದ್ದಾರೆ. ಎರಡು ವರ್ಷದ ಹಿಂದೆ ನಾವು ಮಹಾಜನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಠರಾವ್ ಮಾಡಿ ಕಳಿಸಿದ್ದರೂ ಕೂಡ ಅದರ ಬಗ್ಗೆ ಗಮನ ಕೊಡದವರು ಈಗ ಇದ್ದಕ್ಕಿದ್ದಂತೆ ಮಹಾರಾಷ್ಟ್ರದವರನ್ನು ಸಮಾಧಾನ ಮಾಡುವುದಕ್ಕೆ ಹೊರಟಿದ್ದಾರೆ. ಮಹಾಜನ್ ಕಮಿಷನನ್ನು ನೇಮಕ ಮಾಡಬೇಕೆಂದು ಕೇಳಿದವರು ನಾವಲ್ಲ. ಮಹಾರಾಷ್ಟ್ರದವರ ಒತ್ತಡಕ್ಕೆ ಬಲಿಯಾಗಿ ಕೇಂದ್ರದವರು ನೇಮಕ ಮಾಡಿದರು. ಅದರ ವರದಿಗೆ ನಾವುಗಳು ಭಾಗಿಗಳಾಗುತ್ತೇವೆಂದು ಮಹಾರಾಷ್ಟ್ರದವರು ಎ. ಐ. ಸಿ. ಸಿ. ಯಲ್ಲಿ ಒಪ್ಪಿಕೊಂಡಿದ್ದರು. ಈ ರೀತಿ ಒಪ್ಪಿಕೊಳ್ಳುತ್ತೇವೆಂದು ಹೇಳಿದ ಜನರೇ ಇವತ್ತು ಮಹಾಜನ್ ವರದಿ ನಮಗೆ ಬೇಕಾಗಿಲ್ಲ ಅದನ್ನು ವೇಸ್ಟ್ ಪೇಪರ್ ಬುಟ್ಟಿಯಲ್ಲಿ ಹಾಕಿ ಎಂದು ಹೇಳುತ್ತಿದ್ದಾರೆ. ಮೈಸೂರು ರಾಜ್ಯದ ಕೆಲವು ಭಾಗಗಳು ಮತ್ತು ಬೆಳಗಾಂ ತಮಗೆ ಬೇಕೆಂದು ಅವರು ಕೇಳುತ್ತಿದ್ದಾರೆ. ಆದರೆ ಬೆಳಗಾಂನಲ್ಲಿ 40 ಪರ್ಸೆಂಟ್

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ಮಾತ್ರ ಮರಾಠಿ ಮಾತನಾಡುವವರು ಇದ್ದರೆ 60 ಪರ್‌ಸೆಂಟ್ ಕನ್ನಡ ಮಾತನಾಡುವವರು ಇದ್ದಾರೆ. ಆದರೂ ಕೂಡ ರೈಲ್ವೆ ಲೈನನ್ನು ಗಡಿಯನ್ನಾಗಿ ಮಾಡಿ ಅದರ ಒಂದು ಭಾಗವನ್ನು ಮೈಸೂರಿಗೂ, ಇನ್ನೊಂದು ಭಾಗವನ್ನು ಮಹಾರಾಷ್ಟ್ರದವರಿಗೂ ಕೊಡುವುದಕ್ಕೆ ಕೇಂದ್ರ ಸರ್ಕಾರದವರು ಹೊರಟಿದ್ದಾರೆ. ಮೈಸೂರು ಸರ್ಕಾರದವಮೇಲೆ ಏನನ್ನು ಬೇಕಾದರೂ ಹೇರ ಬಹುದು ಎಂಬ ಭಾವನೆಯನ್ನು ಕೇಂದ್ರಸರ್ಕಾರದವರು ಇಟ್ಟುಕೊಂಡಿದ್ದರೆ ಅದು ತಪ್ಪಾಗುತ್ತದೆ. ನಮ್ಮ ಮಿತಿಗೂ ಒಂದು ಎಲ್ಲೆ ಇದೆ. ಹೇಳಿದ್ದನ್ನೆಲ್ಲಾ ಒಪ್ಪಿಕೊಳ್ಳುವುದಕ್ಕೆ ನಾವು ಬದ್ಧರಲ್ಲ. ಇವತ್ತು ಪ್ರಧಾನಮಂತ್ರಿಗಳು ಡಿ. ಎಂ. ಕೆ. ಯವರು ತಮ್ಮ ಕಡೆ ಇದ್ದಾರೆ, ಮಹಾರಾಷ್ಟ್ರದವರು ತಮ್ಮ ಕಡೆ ಇದ್ದಾರೆಂದುಕೊಂಡು ಉತ್ತರ ಪ್ರದೇಶದಲ್ಲಿ ಚರಣಸಿಂಗರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದರು, ಪಾಟ್ನಾದಲ್ಲಿ ದರೋಗ್‌ರಾಯ್ ಅವರನ್ನು ಮುಖ್ಯ ಮಂತ್ರಿಯನ್ನಾಗಿ ಮಾಡಿದರು. ಇಡೀ ದೇಶಕ್ಕೆ ಏಕಚಕ್ರಾಧಿಪತಿಯಾಗಬೇಕೆಂದು ಪ್ರಧಾನ ಮಂತ್ರಿಗಳು ಉದ್ದೇಶ ಇಟ್ಟುಕೊಂಡು ರಾಜ್ಯಗಳನ್ನು ಒಡೆಯುವುದಕ್ಕೆ ಹೊರಟಿದ್ದಾರೆ. ಹಿಂದೆ ಬ್ರಿಟಿಷರೂ ಕೂಡ ಡಿವೈಡ್ ಅಂಡ್ ರೂಲ್ ಎಂಬ ಪಾಲಸಿಯನ್ನು ಅನುಸರಿಸುತ್ತಿದ್ದರು. ಒಬ್ಬರನ್ನು ಇನ್ನೊಬ್ಬರಮೇಲೆ ಎತ್ತಿಕಟ್ಟಿ ಕೊನೆಗೆ ತಾವೇ ರಾಜ್ಯಗಳನ್ನು ಆಳುವುದಕ್ಕೆ ಪ್ರಾರಂಭ ಮಾಡುತ್ತಿದ್ದರು. ಅವರು ಹೆಚ್ಚು ಈ ದಿನ ಈ ದೇಶದಲ್ಲಿ ಇರುವುದಕ್ಕೆ ಅವಕಾಶ ಕೊಡಬಾರದೆಂದು ಕಾಂಗ್ರೆಸ್‌ನವರು ಪಣ ತೊಟ್ಟು ಚಳುವಳಿ ನಡೆಸಿ ಕೊನೆಗೆ 7 ಸಾವಿರ ಮೈಲಿಯಾಚೆಗೆ ಅವರನ್ನು ಓಡಿಸಿದ್ದಾಯಿತು. ಇದೇ ಪದ್ಧತಿಯನ್ನು ಮತ್ತೆ ಪ್ರಧಾನಮಂತ್ರಿಯವರು ಅನುಸರಿಸುವುದಕ್ಕೆ ಹೊರಟಿದ್ದಾರೆ. ತಮಗೆ ಸಪೋರ್ಟ್ ಮಾಡುವವರಿಗೆ ಅವರು ಕೇಳಿದ ಭಾಗಗಳನ್ನು ಕೊಡುವುದಕ್ಕೆ ಹೊರಟಿದ್ದಾರೆ. ತಮ್ಮ ಕೆಲಸವಾಗುವವರೆಗೂ ಸಪೋರ್ಟ್ ಮಾಡಿ ಕೆಲಸವಾದಮೇಲೆ ಸಪೋರ್ಟ್ ಮಾಡುವುದಿಲ್ಲ, ಕೈಬಿಡುತ್ತಾರೆಂಬ ಅಂಶವನ್ನು ಪ್ರಧಾನಮಂತ್ರಿಯವರು ತಿಳಿದುಕೊಳ ಬೇಕು. ಇದಕ್ಕೆ ಒಂದು ಉದಹಾರಣೆಯನ್ನು ಹೇಳುವುದಾದರೆ, ಹಿಂದೆ ಶಿವಾಜಿ ಸತ್ತಮೇಲೆ ಔರಂಗಜೇಬನು ತಾನು ಪಟ್ಟಕ್ಕೆ ಬರಬೇಕೆಂಬ ಆಶೆಯಿಂದ ಸಾಂಬಾಜಿಯನ್ನು ಅರೆಸ್ಟ್ ಮಾಡುವುದಕ್ಕೆ ಪ್ರಯತ್ನಪಟ್ಟನು. ಆಗ ಸಾಂಬಾಜಿಯು ಕೆಳದಿ ಸಂಸ್ಥಾನದಲ್ಲಿ ರಾಜ್ಯವಾಳುತ್ತಿದ್ದ ರಾಣಿ ಚೆನ್ನಮ್ಮಾಜಿಯವರ ಹತ್ತಿರ ಬಂದು ಆಶ್ರಯ ಕೇಳಿದ. ಅದರಂತೆ ರಾಣಿ ಆಶ್ರಯ ಕೊಟ್ಟಳು. ನಂತರ ಔರಂಗಜೇಬನು ಸಾಂಬಾಜಿಗೆ ಆಶ್ರಯ ಕೊಟ್ಟರೆ ದಂಡೆತ್ತಿ ಬರುವುದಾಗಿ ಮತ್ತು ಯುದ್ಧ ಮಾಡುವುದಾಗಿ ಹೇಳಿಕಳಿಸಿದ. ಆಗ ರಾಣಿಯು ಸಾಂಬಾಜಿಯ ಉಡಪನ್ನು ಬದಲಾಯಿಸಿ, ಯಾರಿಗೂ ತಿಳಿಯದಂತೆ ತಂಜಾವೂರಿಗೆ ಕಳಿಸಿ ಆತನ ರಕ್ಷಣೆಯನ್ನು ಮಾಡಿದಳು ನಂತರ ಔರಂಗಜೇಬನು ತನ್ನ ಸೈನ್ಯದೊಡನೆ ವಾಪಸ್ ಹೊರಟುಹೋದನು. ಈ ಪ್ರಕಾರ ರಾಣಿಯು ಮರಾಠಿಗನಾದ ಸಾಂಬಾಜಿಗೆ ಸಹಾಯ ಮಾಡಿದಳು. ಈ ರೀತಿ ಸಹಾಯ ಮಾಡಿದ್ದರೂಕೂಡ ಅದನ್ನು ಮರೆತು ಇವತ್ತು ಬೆಳಗಾಂ ಬೇಕು ಎಂದು ಮರಾಠಿಗರು ಕೇಳುತ್ತಿದ್ದಾರೆ. ಆ ರೀತಿ ಕೇಳತಕ್ಕಂಥ ವಾಯ್ಸ್, ಹಕ್ಕು ಆದರೂ ಎಲ್ಲಿದೆ ಎಂದು ನಾನು ಕೇಳುತ್ತೇನೆ. ಅವರ ಭಾಷೆ ಮಾತನಾಡುವವರ ಶೇಕಡ 40 ಇದ್ದರೂ ಕೂಡ ಬೆಳಗಾಂ ಬೇಕು ಎಂದು ಕೇಳುತ್ತಿದ್ದಾರೆ. ಇದು ಬಹಳ ತಪ್ಪು. ಈ ತಪ್ಪನ್ನು ನಾವು ಮೊದಲಿನಿಂದಲೂ ಕೂಡ ತೋರಿಸಿಕೊಡುತ್ತಿದ್ದೇವೆ. ಈಗಲಾದರೂ ಕೂಡ ಮಹಾಜನ್ ವರದಿಯನ್ನು ಕೇಂದ್ರದಲ್ಲಿರುವ ಶ್ರೀ ಚವಾಣ್ ಅವರು ಮತ್ತು ಪ್ರಧಾನಮಂತ್ರಿಗಳಾದ ಇಂದಿರಾಗಾಂಧಿಯವರು ಒಪ್ಪಿಕೊಂಡು ಮೈಸೂರು ರಾಜ್ಯಕ್ಕೆ ಅನ್ಯಾಯ ವಾಗದಂತೆ ನಡೆದುಕೊಳ್ಳಬೇಕು. ಮಹಾರಾಷ್ಟ್ರದವರಿಗೆ ಈಗ ಇರುವ ಭೂಮಿಯೇ ಸಾಕು. ಇನ್ನೊಂದು ರಾಜ್ಯದ ಭೂಮಿಯನ್ನು ಕೇಳುವುದು, ಅದಕ್ಕಾಗಿ ಆಶೆಪಡುವುದು ಒಳ್ಳೆಯದಲ್ಲ ವೆಂಬುದನ್ನು ಅವರು ತಿಳಿದುಕೊಳ್ಳಬೇಕು; ಒಂದು ವೇಳೆ ಇಂದಿರಾಗಾಂಧಿಯವರು ಏನಾದರು ಮಹಾರಾಷ್ಟ್ರದವರ ಪ್ರೀತಿಗಳಿಸಬೇಕೆಂಬ ಉದ್ದೇಶದಿಂದ ಏನಾದರು ಮೈಸೂರಿನವರಿಗೆ ತೊಂದರೆ ಉಂಟುಮಾಡಿದರೆ ಅದರಿಂದ ಅವರಮೇಲೆ ದೊಡ್ಡ ಅಪವಾದ ಬರುತ್ತದೆ.

7–00 P.M.

ಹಿಂದೆ ಒಬ್ಬೊಬ್ಬ ಹೆಣ್ಣಿನಿಂದ ಒಂದೊಂದು ಯುಗ ನಾಶವಾಯಿತು. ಕೃತಯುಗದಲ್ಲಿ ರೇಣುಕಳಿಂದ ಮೃತ್ಯು ಬಂತು, ದ್ವಾಪರ ಯುಗದಲ್ಲಿ ದ್ರೌಪದಿಯಿಂದ ಮೃತ್ಯು ಬಂತು, ಕಲಿಯುಗದಲ್ಲಿ ಶ್ರೀಮತಿ ಇಂದಿರಾಜಿಯವರಿಂದ ಮೃತ್ಯು ಬಂತು ಎನ್ನುವ ಮಾತನ್ನು ಗಳಿಸಬೇಕಾಗುತ್ತದೆ. ಇದನ್ನು ಯೋಚನೆ ಮಾಡಿ ಮೈಸೂರಿನಲ್ಲಿ ಈ ಸಭೆಯಲ್ಲಿರತಕ್ಕ ಎಲ್ಲಾ ಪಕ್ಷ ಮತ್ತು ಪಂಗಡಗಳವರನ್ನೂ ದೆಹಲಿಗೆ ಕಳುಹಿಸುವುದಕ್ಕೆ ಏರ್ಪಾಡು ಮಾಡಿ, ನಮ್ಮ ಅನಾನು

ಕೂಲಗಳು ಏನಿವೆ, ನಮ್ಮ ನ್ಯೂನತೆಗಳು ಏನಿವೆ ಎನ್ನತಕ್ಕಂಥಾದ್ದನ್ನು ಯೋಚನೆ ಮಾಡಿ ಅದನ್ನು ಕೇಂದ್ರ ಸರ್ಕಾರದವರ ಮುಂದೆ ಇಡಬೇಕು. ಅವರು ಅದನ್ನು ಒಪ್ಪಿಕೊಳ್ಳುವಂತೆ ಮಾಡಬೇಕು. ಶ್ರೀಮಾನ್ ಕೆ. ಹನುಮಂತಯ್ಯನವರು ದೆಹಲಿಯಲ್ಲಿ ಬಹಳ ಒಳ್ಳೆಯ ನುಡಿಯನ್ನು ಹೇಳಿದ್ದಾರೆ. ಬಹಳ ಧೈರ್ಯವಾಗಿ ಮೈಸೂರು ಮತ್ತು ಮಹಾರಾಷ್ಟ್ರ ಗಡಿಗೆ ಸಂಬಂಧಪಟ್ಟ ವಿಷಯದಲ್ಲಿ ಮಹಾಜನ್ ಅವರು ಕೊಟ್ಟಿರತಕ್ಕಂಥ ವರದಿಯನ್ನು ಒಪ್ಪಿಕೊಂಡು ಅದನ್ನು ಘೋಷಣೆ ಮಾಡಬೇಕೆಂದು ಅವರು ಧೈರ್ಯವಾಗಿ ಹೇಳಿದ್ದಾರೆ. ಕನ್ನಡ ರಕ್ತ ಇರತಕ್ಕಂಥವರ ಮಾತು ಅದು. ಮಹಾಜನ್ ವರದಿ ಸರಿಯಾಗಿದೆ ಎನ್ನತಕ್ಕಂಥಾದ್ದು ಶ್ರೀಮಾನ್ ಹನುಮಂತಯ್ಯನವರು ಹೇಳಿರತಕ್ಕಂಥಾದ್ದು ಬಹಳ ದಿಟ್ಟತನದ ಮಾತು. ನಮ್ಮ ಪಾರ್ಲಿಮೆಂಟ್ ಸದಸ್ಯರೂ ಕೂಡ ಬಹಳ ಬಹಳ ಜನ ಮಹಾಜನ್ ವರದಿಯೇ ಕಡೆಯ ತೀರ್ಮಾನ ಎಂದು ಹೇಳಿ ಅದನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದಾರೆ. ಶ್ರೀಮಾನ್ ಹನುಮಂತಯ್ಯನವರು ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿದ್ದರೂ ಕೂಡ ಅವರ ಅನುಯಾಯಿಗಳು ಎಂದರೆ ಇಂಡಿಕೇಟ್ ಅನುಯಾಯಿಗಳು ಎಸ್. ಆರ್. ಸಿ. ಕಮಿಷನ್ ಪ್ರಕಾರ ಇದ್ದಂತೆಯೇ ಈ ಗಡಿ ಪ್ರದೇಶಗಳು ಇರಲಿ, ಮಹಾಜನ್ ಕಮಿಷನ್ನಿನ ವರದಿಯನ್ನು ಬಿಡಬೇಕು ಎನ್ನುವ ವಾದವನ್ನು ತಂದಿದ್ದಾರೆ. ಇದು ತಪ್ಪು. ಮಹಾಜನ್ ವರದಿಯೇ ಕಡೆಯ ತೀರ್ಮಾನ ಅದನ್ನು ಒಪ್ಪಿಕೊಳ್ಳಬೇಕೆಂದು ಮೈಸೂರು ದೇಶದ ಅನೇಕರು ಹೇಳುತ್ತಿದ್ದಾರೆ. ಸಂಸ್ಥಾ ಕಾಂಗ್ರೆಸ್ಸಿನವರೂ ಹೇಳಿದ್ದಾರೆ. ಮೈಸೂರು ದೇಶ ನಮ್ಮದು, ಕನ್ನಡ ನಾಡು ನಮ್ಮದು. ಕನ್ನಡ ಮಾತನಾಡುವ ಭಾಗಗಳು ಕನ್ನಡ ನಾಡಿಗೆ ಸೇರಬೇಕಾದಂತಹ ಭಾಗಗಳು, ಕನ್ನಡ ಭಾಗಗಳು ಮಹಾರಾಷ್ಟ್ರಕ್ಕೆ ಸೇರಿದ್ದಲ್ಲ. ಇಡೀ ಎರಡೂವರೆ ಕೋಟಿ ಜನಗಳ ಹೇಳಿಕೆಯಂತೆ ನಮ್ಮ ಬೆಳಗಾವಿಯಾಗಲೀ, ಕನ್ನಡನಾಡಿಗೆ ಸೇರಬೇಕಾದ ಇತರ ಕನ್ನಡ ಪ್ರದೇಶಗಳಾಗಲೀ ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಕಾರಣವಿಲ್ಲ. ಈ ವಿಷಯ ನಮ್ಮ ಇಂಡಿಕೇಟ್ ಸದಸ್ಯರಿಗೆ ತಿಳಿದೂ ತಿಳಿದೂ ಮನಸ್ಸಿಗೆ ಬಂದ ಹಾಗೆ ವಾದವನ್ನು ಹೂಡಿ ಅದನ್ನು ಮಾಡುತ್ತೇವೆ, ಇದನ್ನು ಮಾಡುತ್ತೇವೆ ಎಂದು ಅವರು ವಾದ ಮಾಡುತ್ತಿದ್ದಾರೆ. ಇದು ಸರಿಯಲ್ಲ. ಶ್ರೀಮಾನ್ ಸಿದ್ಧವೀರಪ್ಪನವರಾಗಲೀ, ಶ್ರೀಮಾನ್ ಚನ್ನಬಸಪ್ಪನವರಾಗಲೀ, ಅವರ ಅನುಯಾಯಿಗಳು ಎಂದರೆ ಇಂಡಿಕೇಟ್ ಸದಸ್ಯರುಗಳು ಈ ಕನ್ನಡ ದೇಶ ನಮ್ಮದು, ನಮ್ಮ ಕನ್ನಡ ನಾಡಿಗೆ ಸೇರಿದ ಯಾವ ಭಾಗವನ್ನೂ ಬೇರೆಯವರಿಗೆ ಬಿಟ್ಟು ಕೊಡುವುದಿಲ್ಲ ಎನ್ನುವ ಭಾವನೆಯನ್ನು ಹೊಂದಿ ಎಲ್ಲರೂ ಒಗಟ್ಟಿನಿಂದ ಈ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇವೊತ್ತು ದೇಶದಲ್ಲಿ ಸಂಸ್ಥಾ ಕಾಂಗ್ರೆಸ್ಸಿನ ಸರ್ಕಾರವೇ ಇರಲಿ, ಬೇರೆ ಸರ್ಕಾರವೇ ಇರಲಿ, ನಮ್ಮ ದೇಶದ, ನಮ್ಮ ಕನ್ನಡ ದೇಶದ ಒಂದು ಇಂಚು ಭೂಮಿಯನ್ನೂ ಕೂಡ ಯಾರಿಗೂ ಬಿಟ್ಟು ಕೊಡುವುದಿಲ್ಲ ಎಂದು ಒಮ್ಮನಸ್ಸಿನಿಂದ ನಮ್ಮ ಈ ಶಾಸನ ಸಭೆಯಲ್ಲಿ ಒಂದು ತೀರ್ಮಾನವನ್ನು ಮಾಡಿ, ಒಂದು ನಿರ್ಣಯವನ್ನು ಮಾಡಿ ಇಲ್ಲಿಂದ ದೆಹಲಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಾಗಿದೆ. ವರ್ಕಿಂಗ್ ಕಮಿಟಿಯಲ್ಲಿ ಶ್ರೀಮಾನ್ ಚವಾನ್ ಅವರು, ಇದ್ದಾರೆ ಅವರು ಮಹಾಜನ್ ಅವರ ವರದಿಯನ್ನು ಒಪ್ಪಿಕೊಳ್ಳಬೇಕೆಂದು ತೀರ್ಮಾನ ಕೊಟ್ಟರೆ ಕೇಂದ್ರ ಸರ್ಕಾರದವರು ಅದನ್ನು ಒಪ್ಪಿಕೊಳ್ಳುತ್ತಾರೆ. ಈ ಗಡಿ ಸಮಸ್ಯೆಗೆ ಸಂಬಂಧಪಟ್ಟ ಹಾಗೆ ಇರತಕ್ಕಂಥ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಶ್ರೀಮಾನ್ ಚವಾನ್ ಅವರು ಇದ್ದಾರೆ. ಶ್ರೀ ಜಗಜೀವನರಾಮ್ ಅವರೂ ಇದ್ದಾರೆ, ಶ್ರೀ ಫಕ್ರುದಿನ್ ಆಲಿ ಅಹಮದ್ ಅವರು ಇದ್ದಾರೆ ಶ್ರೀಮತಿ ಇಂದಿರಾಜಿಯವರೂ ಇದ್ದಾರೆ, ಇವರೆಲ್ಲರೂ ಕೂಡ ಯೋಚನೆ ಮಾಡಿ ಮಹಾಜನ್ ಕಮಿಷನ್ ವರದಿಯನ್ನು ಒಪ್ಪಿಕೊಂಡು ಒಂದು ನ್ಯಾಯವಾದ ತೀರ್ಮಾನವನ್ನು ಕೊಡಬೇಕು. ಈಗ ಪತ್ರಿಕೆಯಲ್ಲಿ ವರದಿಯಾಗಿರುವ ಪ್ರಕಾರ ಅವರು ಮಾಡಿರುವಂತಹ ತೀರ್ಮಾನ ಎಲ್ಲರಿಗೂ ಗಾಬರಿಯನ್ನುಂಟುಮಾಡಿದೆ. ಶ್ರೀಮಾನ್ ಚವಾನ್ ಅವರಿಗೆ ತುಂಬಾ ಆಶೆ ಇದೆ. ಅವರಿಗೆ ಮುಖ್ಯ ಮಂತ್ರಿಗಳಾಗಬೇಕು, ಇನ್ನೂ ದೊಡ್ಡ ನಾಯಕರಾಗಬೇಕು ಎನ್ನುವ ಆಶೆ ಇದೆ. ಅದಕ್ಕೋಸ್ಕರ ಅವರು ಸಮಯವನ್ನು ಕಾಯುತ್ತಿದ್ದಾರೆ. ಶ್ರೀಮತಿ ಇಂದಿರಾಜಿಯವರು ಇದನ್ನು ಗಮನದಲ್ಲಿಟ್ಟು ಕೊಂಡು ಎಚ್ಚರಿಕೆಯಿಂದ ಇರಬೇಕು. ಅವರು ಮಹಾರಾಷ್ಟ್ರದವರನ್ನು ನಂಬಬಾರದು. ಶ್ರೀಮತಿ ಇಂದಿರಾಜಿಯವರು ನಮ್ಮ ಮೈಸೂರಿನ ಜನರನ್ನು ನಂಬಿ ಅವರ ಆಶೋತ್ತರಗಳನ್ನು ಈಡೇರಿಸಿ ಕೊಡಬೇಕು. ಕನ್ನಡ ನಾಡಿನ ಜನರು ಶ್ರೇಷ್ಠರು, ಆಡಿದ ಮಾತಿನಂತೆ ನಡೆಯುತ್ತಾರೆ. ಇದನ್ನು ನಮ್ಮ ಗ್ರಂಥಗಳು ಕೂಡ ಸಾರುತ್ತಿವೆ. ಮಹಾರಾಷ್ಟ್ರದವರು ಹಾಗಲ್ಲ, ಸರಿಹೋದರೆ ಸಾರಕ್ಕಿ ಇಲ್ಲದಿದ್ದರೆ ಜರುಗನಹಳ್ಳಿ ಇದ್ದ ಹಾಗೆ. ಈ ದೃಷ್ಟಿಯಿಂದ ಇಂದಿರಾಜಿಯವರು ಬಹಳ ಚೆನ್ನಾಗಿ ಯೋಚನೆ ಮಾಡಿ ನಮ್ಮ ಮೈಸೂರಿನ ಎಂ. ಪಿ. ಗಳು ಮತ್ತು ನಮ್ಮ ಮೈಸೂರಿನ ಶಾಸನ ಸಭೆಯಿಂದ ಕಳುಹಿಸತಕ್ಕಂಥ ನಾಯಕರು ಮತ್ತು ಸದಸ್ಯರುಗಳೊಡನೆ ಕುಳಿತು ಮಾತನಾಡಿ ಮಹಾಜನ್ ಅವರ ವರದಿಯನ್ನು ಜಾರಿಗೆ ತರಬೇಕು. ಮಹಾಜನ್ ವರದಿಯನ್ನು ಜಾರಿಗೆ

(ಶ್ರೀ ಕೆ. ಎಂ. ಪುಟ್ಟಸ್ವಾಮಿ)

ತರದಿದ್ದರೆ ಕನ್ನಡಿಗರು, ಕನ್ನಡ ರಕ್ತ ಇರುವವರು ಯಾರೂ ಯಾವ ಪ್ರದೇಶವನ್ನೂ ಬೇರೆಯವರಿಗೆ ಬಿಟ್ಟುಕೊಡುವುದಕ್ಕೆ ಸಿದ್ಧರಿಲ್ಲ. ಬೊಂಬಾಯಿನಲ್ಲಿ ಶಿವಸೇನೆಯವರು ಈಗಾಗಲೇ ಗಡಿಯ ಕಡೆಗೆ ಹೊರಟ್ಟಿದ್ದಾರೆ. ನಾವು ಸುಮ್ಮನಿದ್ದೇವೆ. ಕನ್ನಡಿಗರಿಗೆ ಕೋಪ ಬರುವುದಿಲ್ಲ, ಅವರಿಗೆ ಕೋಪ ಬಂದರೆ ಮಹಾರಾಷ್ಟ್ರದವರೇ ಆಗಲೀ ಯಾರೇ ಆಗಲೀ ನಮ್ಮ ಕನ್ನಡನಾಡಿನ ಜನರ ಮುಂದೆ ನಿಲ್ಲಲಾರರು ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ನಾವು ನಮ್ಮ ಕನ್ನಡನಾಡಿನಲ್ಲಿ ಒಂದು ಇಂಚು ಭೂಮಿಯನ್ನು ಬೇರೆಯವರಿಗೆ ಬಿಟ್ಟು ಕೊಡುವುದಕ್ಕೆ ತಯಾರಿಲ್ಲ. ಅದಕ್ಕಾಗಿ ನಮ್ಮ ಮೈಯ್ಯಲ್ಲಿ ಒಂದು ತೊಟ್ಟು ರಕ್ತ ಇರುವವರೆಗೂ ನಾವು ಹೋರಾಡುತ್ತೇವೆ. ನಮ್ಮ ದೇಶವನ್ನು ಉಳಿಸಿಕೊಳ್ಳುತ್ತೇವೆಂದು ಪ್ರಧಾನ ಮಂತ್ರಿಗಳಾದ ಶ್ರೀಮತಿ ಇಂದಿರಾಗಾಂಧಿಯವರಿಗೆ ಮತ್ತು ಮಹಾರಾಷ್ಟ್ರದ ನಾಯಕರಿಗೆ ನಾನು ಎಚ್ಚರಿಕೆಯಿಂದ ಕಳಕಳಿಯಿಂದ ಹೇಳುತ್ತೇನೆ. ಮಹಾಜನ್ ವರದಿ ಬಹಳ ಶ್ರೇಷ್ಠವಾದದ್ದು. ಬಹಳ ಒಳ್ಳೆಯ ತೀರ್ಮಾನ ಬಂದಿದೆ. ಇದನ್ನು ಜಾರಿಗೆ ತರಬೇಕು. ಶ್ರೀಮತಿ ಇಂದಿರಾಗಾಂಧಿಯವರು ತಮ್ಮ ಪಕ್ಕದಲ್ಲಿರುವ ಮಹಾರಾಷ್ಟ್ರದವರಿಗೆ ಮೋಸ ಹೋಗಿ ಮಹಾಜನ' ಕಮಿಷನ್ನಿನ ವರದಿಗೆ ವ್ಯತಿರಿಕ್ತವಾಗಿ ಮಾಡಿದರೆ ನಾಳೆ ದಿವಸ ಇಂದಿರಾಗಾಂಧಿಯವರ ಸ್ಥಾನಕ್ಕೇ ನ್ಯೂನತೆ ಬರುತ್ತದೆಂದು ನಾನು ಎಚ್ಚರಿಕೆಯನ್ನು ಅವರಿಗೆ ಹೇಳುತ್ತೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ಶ್ರೀಮಾನ್ ಗೋಪಾಲಗೌಡರು ತಂದಿರತಕ್ಕ ನಿರ್ಣಯವನ್ನು ಅನುಮೋದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Now the House will adjourn and meet at 1 P.M. tomorrow the 27th February 1970.

The House adjourned at Fifteen Minutes past Seven of the Clock to meet again at One of the Clock on Friday the 27th February 1970.